ನೈಷಧ ಚಕ್ರವರ್ತಿ

ಶಾ. ರಾ. ಸಾರಂಗ

ವಾಗ್ದೇವಿ ಪ್ರಕಾಶನ
ನಾಲ್ಕನೆಯ ಅಡ್ಡರಸ್ತೆ, ಹನುಮಂತನಗರ
ಬೆಂಗಳೂರು - ೧೯

ನೈಷಧ ಚಕ್ರವರ್ತಿ

ಆದ್ಯ ರಾ. ಸಾರಂಗ

ವಾಗ್ದೇವಿ ಪ್ರಕಾಶನ,
ನಾಲ್ಕನೆಯ ಅಡ್ಡರಸ್ತೆ, ಹನುಮಂತನಗರ,
ಬೆಂಗಳೂರು - ೧೯.

First Edition : 1971
Second Edition : 1975
Third Edition : 1976

Price : THREE RUPEES

ಮುದ್ರಣ :
ಸಿರಿಗನ್ನಡ ಪ್ರೆಸ್,
ಕಾಸರಗೋಡು.

NAISHADHA CHAKRAVARTHY - A mythological nov
in Kannada by K. R. Saranga, Published by Vagdevi Pr
kashana, Fourth Cross, Hanumanthanagar, Bangalore-1

ನಳೋಪಾಖ್ಯಾನ

ಮಹಾಭಾರತದ ವನಪರ್ವದಲ್ಲಿ ಈ ಆಖ್ಯಾನ ಬರುತ್ತದೆ. ದಮಯಂತಿಯ ರೂಪಸೌಂದರ್ಯಗಳನ್ನು ಕೇಳಿಬಲ್ಲ ನಳ ಚಿಂತಿಸುತ್ತ ಆಸ್ಥಾನದ ಉಪವನದ ಕೊಳದ ಬಳಿಗೆ ಹೋದಾಗ ಅಲ್ಲೊಂದು ಹೊನ್ನ ಹಂಸೆ ಕಾಣಿಸಿಕೊಳ್ಳುತ್ತದೆ. ಹಂಸೆಯನ್ನು ನಳ ಹಿಡಿದುಕೊಳ್ಳುತ್ತಾನೆ. ಭಯಗೊಂಡ ಆ ಹಂಸೆ "ದಮಯಂತಿ ನಿನ್ನನ್ನು ವರಿಸುವಂತೆ ಮಾಡುವೆ" — ಎಂದು ಹೇಳಿ ಹೊರಟುಹೋಗುತ್ತದೆ. ಅದೇ ಹಂಸೆ ದಮಯಂತಿಗೂ ನಳನ ವಿಚಾರ ತಿಳಿಸುತ್ತದೆ.

ದಮಯಂತಿಯ ಸ್ವಯಂವರದ ಸಿದ್ಧತೆ ನಡೆಯುತ್ತಿದ್ದಂತೆ ನಾರದ ಮತ್ತು ಪರ್ವತರು ಈ ವಿಚಾರವನ್ನು ದೇವೇಂದ್ರನಿಗೆ ತಿಳಿಸುತ್ತಾರೆ. ಆಗ ದೇವೇಂದ್ರ, ವರುಣ, ಅಗ್ನಿ, ಯಮ — ಇವರೇ ಮೊದಲಾದ ಅಷ್ಟದಿಕ್ಪಾಲಕರು ದಮಯಂತಿಯ ಸ್ವಯಂವರದಲ್ಲಿ ಪಾಲುಗೊಳ್ಳಲು ಭೂಲೋಕಕ್ಕೆ ಬರುತ್ತಾರೆ. ದಾರಿಯಲ್ಲಿ ಸುಂದರನಾದ ನಳ ಚಕ್ರವರ್ತಿ ಎದುರಾಗುತ್ತಾನೆ. ಆತನನ್ನೇ ದೂತನನ್ನಾಗಿ ಈ ದೇವತೆಗಳು ದಮಯಂತಿಯಲ್ಲಿಗೆ ಕಳುಹಿಸಿ ತಮ್ಮ ಮನಸದಭೀಷ್ಟವನ್ನು ತಿಳಿಸುತ್ತಾರೆ. ಆದರೆ ದಮಯಂತಿ ನಳನನ್ನಲ್ಲದೆ ಅನ್ಯರನ್ನು ಖಂಡಿತಾ ವರಿಸಲಾರೆ — ಎಂದು ತನ್ನ ನಿರ್ಧಾರವನ್ನು ತಿಳಿಸಿಬಿಡುವಳು.

ಸ್ವಯಂವರದ ವೇಳೆಯಲ್ಲಿ ದಮಯಂತಿ ತನ್ನ ಸುಚ್ಚಾರಿತ್ರ್ಯದ ಬಲದಿಂದ ನಳನನ್ನೇ ಪತಿಯನ್ನಾಗಿ ಪಡೆಯುತ್ತಾಳೆ. ಆಗ ದೇವತೆಗಳು ಪ್ರಸನ್ನರಾಗಿ ನಳನಿಗೆ ಎಂಟು ವರಗಳನ್ನಿತ್ತು ಹರಸುವರು.

ಮುಂದೆ ಕಲಿಯು ನಳನನ್ನು ಪೀಡಿಸಲು ದ್ವಾಪರನ ಸಹಾಯವನ್ನು ಯಾಚಿಸುವನು.

ವೃಕ್ಷದ್ಯೂತದಲ್ಲಿ ನಳನು ಸಂಪೂರ್ಣವಾಗಿ ತನ್ನ ತಮ್ಮನಿಗೆ ಸೋತು ವನಾಂತರಕ್ಕೆ ಹೋಗುತ್ತಾನೆ. ದಮಯಂತಿ ತನ್ನ ಕುವರರನ್ನು ತವರಿಗೆ ಕಳುಹಿಸಿ, ನಳನನ್ನು ಹಿಂಬಾಲಿಸುತ್ತಾಳೆ.

ಕಾಡಿನಲ್ಲಿ ಹಕ್ಕಿಗಳನ್ನು ಹಿಡಿಯಲು ನಳ ತಾನುಟ್ಟಿದ್ದ ವಸ್ತ್ರವನ್ನು ಎಸೆದು ಕಳೆದುಕೊಳ್ಳುತ್ತಾನೆ. ದಮಯಂತಿಯ ಸೀರೆಯನ್ನೇ ತನ್ನ ಮಾನ ಮುಚ್ಚಲು ಉಪಯೋಗಿಸಿಕೊಂಡ ಆತ, ಆಕೆ ನಿದ್ರಿಸುತ್ತಿದ್ದಂತೆ ತೊರೆದು ಹೊರಟು ಹೋಗುತ್ತಾನೆ. ಮುಂದೆ ಕಾರ್ಕೋಟಕನ ಸಲಹೆ ಯಂತೆ ಋತುಪರ್ಣನ ಆಸ್ಥಾನದಲ್ಲಿ, ಅಶ್ವಶಾಲೆಯಲ್ಲಿ ಬಾಹುಕನೆಂಬ ಹೆಸರಿನಿಂದ ಸೇವಕನಾಗಿ ನಿಲ್ಲುತ್ತಾನೆ.

ಪತಿಯ ವಿಯೋಗದಿಂದ ದುಃಖಿತಳಾದ ದಮಯಂತಿಯನ್ನು ಅಜಗರವು ನುಂಗಲು ಬರುತ್ತದೆ. ಆಕೆ ಆಗ ವನಚರನೊಬ್ಬನಿಂದ ರಕ್ಷಿಸಲ್ಪಟ್ಟು ಒಂದು ಋಷ್ಯಾಶ್ರಮವನ್ನು ಸೇರುತ್ತಾಳೆ. ಋಷಿಗಳು ಆಕೆಯನ್ನು ಸಮಾಧಾನ ಪಡಿಸಿ ಅಂತರ್ಧಾನರಾಗುತ್ತಾರೆ. ಅಲ್ಲಿಂದ ದಮಯಂತಿ ಸಾರ್ಥವಾಹರೊಂದಿಗೆ ಕೆಲವು ದಿನ ಪ್ರಯಾಣ ಮಾಡುತ್ತಾಳೆ. ಸರೋವರವೊಂದರ ತಟದಲ್ಲಿ ಬೀಡು ಬಿಟ್ಟಿದ್ದಾಗ ಆನೆಗಳ ಗುಂಪೊಂದು ಇವರನ್ನು ಬಾಧಿಸುತ್ತದೆ.

ಈ ಎಲ್ಲ ಕಷ್ಟಗಳನ್ನು ಅನುಭವಿಸಿದ ಬಳಿಕ ದಮಯಂತಿ ಸುಬಾಹುವಿನ ಆಸ್ಥಾನದಲ್ಲಿ ಸೈರಂಧ್ರಿಯಾಗಿ ಸೇರಿಕೊಳ್ಳುತ್ತಾಳೆ. ಸುದೇವನೆಂಬ ಬ್ರಾಹ್ಮಣನ ಮೂಲಕ ದಮಯಂತಿಯು ಪತ್ತೆಯಾಗಿ ಸುಬಾಹುವೆ ಆಕೆಯನ್ನು ಕುಂಡಿನಪುರಕ್ಕೆ ಕರೆದುಕೊಂಡು ಹೋಗುತ್ತಾನೆ.

ಅಯೋಧ್ಯಪುರದಲ್ಲಿ ನಳನು ಇರುವ ವಿಚಾರವನ್ನು ಪರ್ಣಾದ ನೆಂಬವನ ಮೂಲಕ ತಿಳಿದ ದಮಯಂತಿ ತನ್ನ ತಾಯಿಗೆ ಆ ವಿಚಾರ ವನ್ನು ತಿಳಿಸಿ, ಪುನಃ ಸ್ವಯಂವರದ ನೆಪದಲ್ಲಿ ನಳನು ಋತುಪರ್ಣನ ಸಾರಥಿಯಾಗಿ ಕುಂಡಿನಪುರಕ್ಕೆ ಬರುವಂತೆ ತಂತ್ರಹೂಡುತ್ತಾಳೆ. ಹಾಗೆ ಬರುವಾಗ ರಥದಲ್ಲಿ ಅಶ್ವಶಾಲೆಯ ಅಧಿಕಾರಿ ವಾರ್ಷ್ಣೇಯು (ಹಿಂದೆ ನಳನ ಆಸ್ಥಾನದಲ್ಲಿ ಸಾರಥಿಯಾಗಿದ್ದಾತ) ಕೂಡಾ ಇರುತ್ತಾನೆ. ಕುಂಡಿನಪುರಕ್ಕೆ ಬರುತ್ತಿದ್ದಂತೆ ಋತುಪರ್ಣ ನಳನಿಗೆ ಅಕ್ಷಹೃದಯ ವನ್ನು ಬೋಧಿಸುತ್ತಾನೆ.

ಅನಿರೀಕ್ಷಿತವಾಗಿ ಋತುಪರ್ಣ ಕುಂಡಿನಪುರಕ್ಕೆ ಬಂದಾಗ ಭೀಮ ರಾಯನಿಗೆ ಆಶ್ಚರ್ಯವಾಗುತ್ತದೆ. ಆಗಮನದ ಕಾರಣವನ್ನು ವಿಚಾ ರಿಸಲು ಋತುಪರ್ಣ ಸುಳ್ಳಾಗಿ ಏನೇನೋ ಉತ್ತರಿಸುತ್ತಾನೆ. ಕುಂಡಿನ ಪುರದಲ್ಲಿ ಅಂದು ಯಾವುದೇ ಸಂಭ್ರಮ ಇದ್ದಿರುವುದಿಲ್ಲ.

ಬಾಹುಕ ನಳನೆಂದು ತಿಳಿಯುತ್ತದೆ. ಅಂದೇ ಪುನಃಸ್ವಯಂವರ ನಡೆಯುತ್ತದೆ. ಬಳಿಕ ನಳನಿಂದೊಡಗೂಡಿ ಋತುಪರ್ಣ ಅಯೋಧ್ಯಪುರಕ್ಕೆ ಹಿಂದಿರುಗುವಾಗ ಆತನಿಂದ ಅಶ್ವಹೃದಯವನ್ನು ತಿಳಿದುಕೊಳ್ಳುತ್ತಾನೆ.

ಮುಂದೆ ನಳನ ಸುಖದ ದಿನಗಳು, ದ್ಯೂತದಲ್ಲಿ ಮತ್ತೆ ಸಂಪೂರ್ಣ ರಾಜ್ಯ ಆತನದಾಗುತ್ತದೆ. ಹೀಗೆ ರುಚಿರ ಸನ್ನಿವೇಶಗಳೊಂದಿಗೆ ಈ ಆಖ್ಯಾನ ಮುಕ್ತಾಯವಾಗುತ್ತದೆ.

ನೈಷಧೀಯ

ನಳದಮಯಂತಿಯರು ಅವರಿವರಿಂದ ಕೇಳಿ ತಿಳಿದು ಅನ್ಯೋನ್ಯ ಅನುರಾಗ ತಳೆದಿರುತ್ತಾರೆ. ಒಂದು ದಿನ ವಿನೋದವಾಗಿ ಆಸ್ಥಾನದ ಉಪವನದಲ್ಲಿ ಸುತ್ತಾಡುತ್ತಿದ್ದಾಗ ಹೊನ್ನಿನ ಬಣ್ಣದ ಹಂಸೆಯೊಂದು ಕಾಣಸಿಕ್ಕಿ ನಳ ಅದನ್ನು ಹಿಡಿಯುತ್ತಾನೆ. ಆದರೆ ಅದರ ಆರ್ತನಾದ ವನ್ನು ಕೇಳಿ ಬಿಟ್ಟುಬಿಡುತ್ತಾನೆ. ಆತನ ಈ ದಯಾಶೀಲತೆಗೆ ಒಲಿದ ಹಂಸೆ ಆತನಿಗೆ ಉಪಕಾರ ಮಾಡಲು ಬಯಸಿ ದಮಯಂತಿ ಆತನನ್ನು ವರಿಸುವಂತೆ ಮಾಡುವುದಾಗಿ ಹೇಳುತ್ತದೆ. ಅದೇ ಹಂಸೆ ದಮಯಂತಿ ಯಲ್ಲಿಗೆ ಹೋಗಿ ನಳನ ವಿಚಾರ ತಿಳಿಸುತ್ತದೆ. ನಳನ ಬಗೆಗೆ ಆಕೆಗಿದ್ದ ಆದರವನ್ನು ಆತನಿಗೆ ತಿಳಿಸಬೇಕೆಂದು ದಮಯಂತಿ ಹಂಸೆಗೆ ಹೇಳುತ್ತಾಳೆ.

ಹಂಸೆ ಬಂದುಹೋದ ಮೇಲೆ ದಮಯಂತಿ ವಿರಹವೇದನೆಯಿಂದ ಬಳಲಿ ಬೆಂಡಾಗುತ್ತಾಳೆ. ಆಕೆಯ ಈ ದುಸ್ಥಿತಿಯನ್ನು ಅರ್ಥಮಾಡಿ

ಕೊಳ್ಳಲಾರದ ಸಖಿಯರು ಭೀಮರಾಜನಲ್ಲಿ ದೂರಿತ್ತಾಗ ಪರಿಸ್ಥಿತಿ ಅರ್ಥವಾಗುತ್ತದೆ. ತನ್ನ ಮಗಳ ಸ್ವಯಂವರದ ವ್ಯವಸ್ಥೆ ಮಾಡುತ್ತಾನೆ ಭೀಮರಾಜ.

ನಾರದ ಈ ಸ್ವಯಂವರದ ವಾರ್ತೆಯನ್ನು ಇಂದ್ರನಿಗೆ ತಿಳಿಸುತ್ತಾನೆ. ಇಂದ್ರನ ಮನಸ್ಸು ಆಕೆಯನ್ನು ಬಯಸುತ್ತದೆ. ಇಂದ್ರ, ವರುಣ, ಅಗ್ನಿ, ಯಮ — ಈ ನಾಲ್ವರೂ ಒಂದೇ ಉದ್ದೇಶದಿಂದ ಭೂಲೋಕಕ್ಕೆ ಕೂಡಲೇ ಹೊರಡುತ್ತಾರೆ. ಭೂಲೋಕದ ಹೆಣ್ಣೊಬ್ಬಳನ್ನು ಬಯಸಿಹೋದ ದೇವತೆಗಳನ್ನು ಕಂಡು ಅಪ್ಸರೆಯರೂ ಅಸೂಯೆಗೊಳ್ಳುತ್ತಾರೆ. ಶಚೀದೇವಿ ಚಿಂತಿಸುತ್ತಾಳೆ.

ದೇವತೆಗಳಿಗೆ ದಾರಿಯಲ್ಲಿ ನಳ ಎದುರಾಗುತ್ತಾನೆ. ದಮಯಂತಿಯಲ್ಲಿ ಆತ ಅನುರಕ್ತನಾಗಿರುವ ವಿಚಾರ ಅವರಿಗೂ ತಿಳಿಯುತ್ತದೆ. ಅವನನ್ನೇ ತಮ್ಮ ದೂತನಾಗಿ ದಮಯಂತಿಯಲ್ಲಿಗೆ ಕಳುಹಿಸುವ ಹಂಚಿಕೆಗೆ ಮೊದಲು ನಳ ಒಡಂಬಡದಿದ್ದರೂ ಕೊನೆಗೆ ದೇವತೆಗಳು ಆತನನ್ನು ಅದಕ್ಕೆ ಒಪ್ಪಿಸುತ್ತಾರೆ.

ದೇವತೆಗಳು ಅನುಗ್ರಹಿಸಿದ್ದ 'ತಿರಸ್ಕರಣೀ' ವಿದ್ಯೆಯ ಸಹಾಯದಿಂದ ಯಾರಿಗೂ ಕಾಣಿಸಿಕೊಳ್ಳದೆ ನಳ ದಮಯಂತಿಯ ಅಂತಃಪುರವನ್ನು ಪ್ರವೇಶಿಸಿ, ಇಂದ್ರನು ನೀಡಿದ್ದ ಮಂದಾರ ಮಾಲೆಯನ್ನು ಆಕೆಗೆ ನೀಡುತ್ತಾನೆ. ದಮಯಂತಿ ಏನಾದರೂ ತಾನು ಅವರಾರನ್ನೂ ವರಿಸಲಾರೆ. ನಳನೇ ತನಗೆ ಸೇವನೀಯ ಎನ್ನುತ್ತಾಳೆ. ಆಕೆಯ ಆ ದುಸ್ಥಿತಿಯಲ್ಲಿ ನಳನು ತನಗರಿವಿಲ್ಲದಂತೆ ತಾನೇ ನಳನೆಂದು ತಿಳಿಸುತ್ತಾನೆ. ಆಗ ದಮಯಂತಿಗೂ ನಾಚುಗೆಯಾಗುತ್ತದೆ. ಆ ದೇವತೆಗಳ ಮನವೊಲಿಸಿ ತಾನು ನಳನನ್ನೇ ವರಿಸುವುದಾಗಿ ತಿಳಿಸುತ್ತಾಳೆ ದಮಯಂತಿ.

ಸ್ವಯಂವರ ವಿಜೃಂಭಣೆಯಿಂದ ನಡೆಯುತ್ತದೆ. ಭೀಮರಾಜನ ಆಹ್ವಾನದ ಮೇರೆಗೆ ಸಾಕ್ಷಾತ್ ಭಾರತಿಯೇ ಬಂದು ದಮಯಂತಿಯ ಸಖಿಯಾಗಿ ಅಲ್ಲಿ ನೆರೆದಿದ್ದ ರಾಜಾಧಿರಾಜರ ಪರಿಚಯ ಮಾಡಿಕೊಡುತ್ತಾಳೆ. ಪಂಚ ನಳರ ಬಳಿಗೆ ಬಂದಾಗ ಮಾತ್ರ ಶ್ಲೇಷಾರ್ಥ ಬರುವಂತೆ

ಪರಿಚಯಿಸುತ್ತಾಳೆ. ದಮಯಂತಿ ನಳನನ್ನೇ ವರಿಸುತ್ತಾಳೆ. ದೇವತೆಗಳು ದಮಯಂತಿಯನ್ನು ನಳನಿಗೆ ಧಾರೆಯೆರೆದು ಕೊಡಿಸಿ ದೇವಲೋಕಕ್ಕೆ ಹೊರಟಾಗ ಇದೇ ಸ್ವಯಂವರಕ್ಕೆಂದು ಬರುತ್ತಿದ್ದ ಕಲಿ ದ್ವಾಪರ ಅವರಿಗೆ ಎದುರಾಗುತ್ತಾರೆ. ಇಂದ್ರನಿಂದ ದಮಯಂತಿಯ ಸ್ವಯಂವರ ನಡೆದ ವಿಚಾರ ತಿಳಿದಾಗ ಕಿಡಿಕಿಡಿಯಾದ ಕಲಿ, ನಳದಮಯಂತಿಯರನ್ನು ಅಗಲಿಸುವುದಾಗಿ ಪಣತೊಡುತ್ತಾನೆ. ಇತ್ತ ನಳದಮಯಂತಿಯರ ಮೊದಲ ರಾತ್ರಿಯ ಮಧುರ ಸನ್ನಿವೇಶಗಳೊಂದಿಗೆ ಈ ಕಾವ್ಯ ಮುಕ್ತಾಯಗೊಳ್ಳುವುದು.

ಈ ಕಾದಂಬರಿಯನ್ನು ಕುರಿತು

ಪ್ರಸ್ತುತ ಈ ಕಾದಂಬರಿ ಸಂಪೂರ್ಣವಾಗಿ ಚೌಂಡರಸನ 'ನಳ ಚಂಪೂ'ವನ್ನೇ ಆಧರಿಸಿದ್ದರೂ ಅಲ್ಲಲ್ಲಿ ಸಣ್ಣಪುಟ್ಟ ಹೊಂದಾಣಿಕೆ — ಈ ಕಾದಂಬರಿಯ ದೃಷ್ಟಿಯಿಂದ, ಆವಶ್ಯವೆಂದು ಕಂಡುಬರುವುದರಿಂದ ಹಾಗೆ ಮಾಡಲಾಗಿದೆ.

ಮಹಾಭಾರತದ ನಳೋಪಾಖ್ಯಾನಕ್ಕೂ, ಈ ಕಾದಂಬರಿಗೂ ತುಂಬಾ ವ್ಯತ್ಯಾಸವಿರಬಹುದು ; ಕನಕದಾಸರ 'ನಳ ಚರಿತ್ರೆ' ಇದಕ್ಕಿಂತ ಭಿನ್ನವಾಗಿರಲೂ ಬಹುದು ; ನೈಷಧ ಕಾವ್ಯದ ಕೆಲ ಅಂಶಗಳು ಇಲ್ಲಿ ಗೋಚರಿಸಿದರೂ ಗೋಚರಿಸಬಹುದು. ಅಂತೂ ಕನ್ನಡದಲ್ಲಿ ಮೊತ್ತ ಮೊದಲು ಬಂದ ನಳ–ದಮಯಂತಿಯರ ಕಾವ್ಯವನ್ನು ಕಾದಂಬರಿಯ ರೂಪದಲ್ಲಿ ಬರೆದಿದ್ದೇನೆ.

ಕನ್ನಡದ ಕೆಲವೇ ಪೌರಾಣಿಕ ಕಾದಂಬರಿಗಳ ಸಾಲಿಗೆ 'ನೈಷಧ ಚಕ್ರವರ್ತಿ' ನನ್ನದೊಂದು ಕಿರು ಕಾಣಿಕೆ. ಈ ಕೃತಿ ಬೆಳಕಿಗೆ ಬರಲು ಸಹಕರಿಸಿದವರಿಗೆಲ್ಲ ನನ್ನ ಆತ್ಮೀಯ ಅಭಿವಂದನೆಗಳು.

— ಕಾ. ರಾ. ಸಾರಂಗ.

ಪರಿವಿಡಿದು ನಳಚರಿತ್ರಂ
ಪರಮಪವಿತ್ರಂ ನಿತಾಂತಪುಣ್ಯಶ್ಲೋಕಂ
ವಿರಚಿಸುವನದಟನೀ ಚೌಂ
ಡರಸಂ ಕರ್ನಾಟಕವಂಶ ಶೃಂಗಾರರಸಂ

* * *

ಭೂಮಿಗೆ ಮಂಡನಂ ಭುವನಭೂಭುಜಕೋಟಿಗೆ ಕರ್ಣ ಕುಂಡಲಂ
ಪ್ರೇಮಮಿಳಾಜನಕ್ಕೆ ಬುಧಸಂತತಿಗಾತ್ಮಹಿತಂ ಚತುರ್ವಿಧ
ಸ್ತ್ರೀಮುದಕಾರಣಂ ಕವಿಗೆ ನಾಲಗೆಯುತ್ಸವಮುಗ್ರವೈರಿಗು
ದ್ದಾಮ ಶಿಲಾಭಿಘಾತಮೆನಿಕುಂ ನೃಪನುನ್ನತಕೀರ್ತಿ ಕೌತುಕಂ

* * *

ಮನಸಿಜಮೋಹನಾಸ್ತ್ರಮಬಲಾಕೃತಿಯಾದುದೊ ಚಂದ್ರಲೇಖೆ ಕಾ
ಮಿನಿಯೆನಿಸಿತ್ತೊ ನಿರ್ಮಲಸುಧಾರಸಮಂಗನೆಯಾಯ್ತೊ ಮಿಂಚು ಮಾ
ನಿನಿಯೆನಿಸಿತ್ತೊ ಭೂಮಿಗೆ ರತಿ ತಾನಿಳಿತಂದಳೊ ಪೇಳಿನಲ್ಕೆ ಮೋ
ಹನತರಮೂರ್ತಿಯಂ ತಳೆದು ಭಾವಕಿ ಬಂದಳತೀವಲೀಲೆಯಿಂ

(‘ ನಳಚಂಪು ’ ವಿನಿಂದ)

ನೈಷಧ ಚಕ್ರವರ್ತಿ

ನಿಷಧ ದೇಶ ....

ಹಾಲು ಹರಿವ ನಾಡು ; ಜೇನು ಸುರಿಯುವ ಬೀಡು ; ಸುಖ ಸಂತೋಷದ ತವರೂರು ! ರಾಜಾ ವೀರಸೇನನ ವೈಭವದ ರಾಜ್ಯಭಾರ ದಲ್ಲಿ ಯಾವುದಕ್ಕೂ ಕೊರತೆಯಿಲ್ಲ. ವೀರಸೇನನ ದಕ್ಷ ನಾಯಕತ್ವ ನಿಷಧ ದೇಶವನ್ನು ಸುಖದ ಸಂಪತ್ತಿನಲ್ಲಿ ಮೆರೆಸಿದೆ.

ತೊಲಗದ ಸಂಪದ : ಆ ಸೊಬಗು ; ಆ ವೈಭವ ; ಆ ಸಂತಸದ ಸಿರಿ — ಶಬ್ದ ಸಂಪತ್ತಿಗೂ ಮಿಗಿಲಾದುದು. ಹೊಟ್ಟೆಗೆ ಹಿಟ್ಟಿಲ್ಲದೆ, ಉಡಲು ಬಟ್ಟೆಯಿಲ್ಲದೆ ನರಳುವ ಜನರೇ ಇಲ್ಲ.

ಧರ್ಮ, ಸಂಸ್ಕೃತಿ, ದೇವತಾರಾಧನೆ — ಯಾವುದಕ್ಕೂ ಕೊರತೆ ಯಿಲ್ಲ. ಗಾಳಿಯಲ್ಲೆಲ್ಲ ಮಂತ್ರಘೋಷಣೆಯೇ ತೇಲಾಡುತ್ತಿರುತ್ತದೆ.

ಆ ಬದುಕೊಂದು ಮಧುರ ಕಲ್ಪನೆ ; ಪ್ರೇಮಿಗಳಿಗೆ ಸುಖದ ಕನಸು ! ಅಲ್ಲಿ ಮತ್ಸರ, ವೈಮನಸ್ಸುಗಳಿಗೆ ಆಸ್ಪದವೇ ಇರಲಿಲ್ಲ. ವನ್ಯಮೃಗಗಳೂ ತಮ್ಮ ಕ್ರೌರ್ಯವನ್ನು ಕಳೆದುಕೊಂಡು ಪರಸ್ಪರ ಪ್ರೀತಿಯಿಂದ ಜೀವಿಸುತ್ತಿದ್ದುವು.

ಸಿರಿಯು ಬೆಡಗಿನಲ್ಲಿ ದರ್ಪದಿಂದ ತಲೆಯೆತ್ತಿ ನಿಂತಿರುವ ಗಗನ ಚುಂಬಿ ಮಹಲುಗಳಿಗೆ ಅಲ್ಲಿ ಕೊರತೆಯೇ ಇರಲಿಲ್ಲ. ಕುಣಿಯುವ, ನಲಿಯುವ, ಹಾಡುವ ಭಂಗಿಗಳಲ್ಲಿ ರಾರಾಜಿಸುತ್ತಿರುವ ಬಿಂಕದ ಬೆಡಗಿಯರ ಸ್ಸುಂದರ ಶಿಲ್ಪಾಕೃತಿಗಳು ಒಂದೇ ಎರಡೇ.......... ಕಲಾಮಾತೆ ಮುಗುಳುನಗು ಚೆಲ್ಲುತ್ತ, ತನ್ನ ವರ್ಣರಂಜಿತ ಸೆರಗನ್ನು ಹಾಸಿ ಅಲ್ಲಿ ವಿಹರಿಸಿದ್ದಳು.

ಈ ದೇಶಕ್ಕೆ ಕಸ್ತೂರಿಯ ಬೊಟ್ಟಿಟ್ಟಂತೆ ಮೆರೆಯುವ ಊರು ವಿಮಲಾ ಪಟ್ಟಣ. ಇದೇ ನಿಷಧದೇಶದ ರಾಜಧಾನಿ. ದಿನ ಬೆಳಗಾದರೆ ಮನೆಯ ಮುಂಭಾಗದಲ್ಲಿ ದೇವರ ನಾಮ ಹಾಡುತ್ತಾ ರಂಗವಲ್ಲಿಯಿಡುವ ಮಂಗಳಾಂಗಿಯರ ಚೆಲುವು, ನಲಿವು ಆ ಪಟ್ಟಣಕ್ಕೆ ಭೂಷಣ ! ಸುಗಂಧ ತುಂಬಿದ ಮಂದಾನಿಲ. ಮೈಗೆ ಸೋಂಕಿದಾಗಲೆಲ್ಲ ಸುಪ್ತಚೇತನ ಪುಟಿದೇಳಬಲ್ಲುದು : ಬದುಕು ಸುಖದ ರಾಗ ಹಾಡಬಲ್ಲುದು : ಗರಿಗೆದರಿ ನಿಂತ ತೆಂಗಿನ ಸೋಗೆಗಳೇ ಚಟೀಲು ನುಡಿಸಬಲ್ಲವು. ಇಲ್ಲಿ ಹಸನಾಗಿ ಬೆಳೆದ ಮಾಮರಗಳು ಸದಾ ಚಿಗುರುವಡೆಯುತ್ತಲೇ ಇರುತ್ತವೆ. ಮರವನ್ನಪ್ಪಿದ ಲತೆಗಳು ಹೂ ಬಿಡುತ್ತಲೇ ಇರುತ್ತವೆ.

ಎತ್ತರ, ಎತ್ತರದಿಂದ, ಮರಗಳ ಮರೆಯಿಂದ ಕೇಳಿಸುವ ಕೋಗಿಲೆಯ 'ಕೂಹೂ' ನಿನಾದ — ನಾಡಿಗಳನ್ನು ಸ್ಪಂದಿಸುವಂತಹುದು : ಅಂತಃಕರಣವನ್ನು ಕೆದಕಿ, ಕೆದಕಿ ರಸದ ಹೊನಲನ್ನು ಹರಿಸುವ ಗಳಿಗೆಗಳ ತೊದಲುನುಡಿ ಸುರಮ್ಯವಾದುದು : ತುಂಬಿಯ ಝೇಂಕಾರಕ್ಕೆ ತಲೆದೂಗುವ ಮಧುತುಂಬಿ ನಿಂತ ಸುಮಗಳು ನಯನ ಮನೋಹರವಾದುವುಗಳು.

ನಿರ್ಜನ ವನ ಪ್ರದೇಶವೂ, ಸುಂದರ............... ! ವಸಂತ ನಿರಂತರ ಅಲ್ಲಿ ನೆಲೆಯಾಗಿರುತ್ತಾನೆ. ಋಷಿ, ಮುನಿಗಳ ಆಶ್ರಮದಷ್ಟು ಪಾವನ ಆ ನೆಲ.

ಈ ವೈಭವ, ಈ ಮೇಲ್ಮೆ ಎಲ್ಲ ವೀರಸೇನ ಮಹಾರಾಜನದ್ದು : ಈತ ಮಹಾ ಪರಾಕ್ರಮಿ : ಧರ್ಮನಿಷ್ಠ : ಈತನ ಸಾಮ್ರಾಜ್ಯ ವಿಶಾಲವಾಗಿತ್ತು. ತನ್ನ ವೈಭವಕ್ಕೆ ಕಳಶವಿಟ್ಟಂತೆ ನಳನೆಂಬ ಸುಪುತ್ರನ ಜನನವಾಗಿತ್ತು. ಉದಯರವಿಯಂತೆ ಪ್ರಭೆಬೀರಿ ಬೆಳಗುವ ಸುಕುಮಾರನ ಜನನದಿಂದ ಆತನ ಬದುಕು ಪರಿಪೂರ್ಣವಾಗಿತ್ತು.

ಆ ಪುತ್ರೋತ್ಸವದ ಸಂಭ್ರಮದಲ್ಲಿ ನಾಡಿನ ಪ್ರಜೆಗಳೆಲ್ಲ ಸಂತಸದಿಂದ ನಲಿದಿದ್ದರು. ಇನ್ನೂ ಎಳೆಯನಾದ ನಳ, ಬಾಲಲೀಲೆಯನ್ನು ತೋರುತ್ತಿದ್ದ ದಿನಗಳು ಕಳೆದು ಯೌವನಕ್ಕೆ ಕಾಲಿಟ್ಟಾಗ ಆತನ ರೂಪ ಮನ್ಮಥನನ್ನು ಮೀರಿಸುವಂತಿತ್ತು.

ಮಗನಿಗೆ ಮೋರೆಯಲ್ಲಿ ಮೀಸೆ ಮೊಳೆತಾಗ ರಾಜ್ಯಸೂತ್ರವನ್ನು ಹಿಡಿಯಲು ಸಮರ್ಥ ಎಂದು ತಿಳಿದುಕೊಂಡ ವೀರಸೇನ ಮಹಾರಾಜ. ಆತನಿಗೂ ಆಗ ಮುಪ್ಪು. ರಾಜ್ಯಭಾರದ ಸಂಪೂರ್ಣ ಹೊಣೆಯನ್ನು ಕುಮಾರ ನಳನಲ್ಲಿ ಹೊರಿಸಿ ನಿಶ್ಚಿಂತನಾಗಿ ಬದುಕಿನ ಅಪರಾಹ್ನವನ್ನು ಕಳೆಯುವುದೆಂದು ನಿಶ್ಚಯಿಸಿದನಾತ.

“ಮಗೂ, ನನಗೆ ವಯಸ್ಸಾಗಿದೆ.......... ಇನ್ನು ಈ ರಾಜ್ಯದ ಅಧಿಪತ್ಯ ನಿನಗೆ ಸೇರಿದ್ದು” — ಮಗನನ್ನು ಕರೆದು ಹೇಳಿದ ವೀರಸೇನ ಮಹಾರಾಜ.

“.....................” — ನಳ ಉತ್ತರಿಸಲಿಲ್ಲ. ತಂದೆಯ ಮಾತುಗಳನ್ನು ಆಲಿಸುತ್ತಲೇ ಇದ್ದ. ಮನಸ್ಸು ಮಾತ್ರ ಭವಿಷ್ಯ ವನ್ನು ಚಿಂತಿಸುತ್ತಿತ್ತು.

“ನಮ್ಮ ಪೂರ್ವಜರೆಲ್ಲ ಹೀಗೆ ಮಾಡುತ್ತಿದ್ದರು ; ತಮ್ಮ ಉತ್ತರಾಧಿಕಾರಿಗಳು ಪ್ರಾಯಕ್ಕೆ ಬಂದಾಗ ಅವರಿಗೆ ರಾಜ್ಯದ ಕಾರ್ಯಭಾರವನ್ನು ಒಪ್ಪಿಸಿ ಆಶ್ರಮವಾಸಿಗಳಾಗುತ್ತಿದ್ದರು. ಕೊನೆಗೆ ಅಲ್ಲೇ ಮುಕ್ತಿಯನ್ನೈದುತ್ತಿದ್ದರು........ ನಾವೂ ಹಾಗೆ ಮಾಡಬೇಕೆಂದಿದ್ದೇವೆ........”.

“ಈಗ ಅಷ್ಟೇಕೆ ಅವಸರ ಅಪ್ಪಾಜಿ........ ನಾನಿನ್ನೂ ಚಿಕ್ಕವನು. ಅಲ್ಲದೆ ನಿಮಗೂ ಅಷ್ಟೇನೂ ವಯಸ್ಸಾಗಿಲ್ಲ........”.

— ಮಗನ ಮಾತು ವೀರಸೇನನಿಗೂ ಹೌದೆಂದು ಅನಿಸಿತು. [illegible]ಗೆ ಯುವರಾಜಪಟ್ಟವನ್ನು ಕಟ್ಟಿದನಾತ. ಸಂಭ್ರಮದ ಈ ಯುವರಾಜ ಪಟ್ಟಾಭಿಷೇಕಕ್ಕೆ ದೇಶದ ಮೂಲೆ ಮೂಲೆಗಳಿಗೂ ಕರೆಹೋಯಿತು

ಸಮಾರಂಭಕ್ಕೆ ಆಗಮಿಸಿದ ದೇಶವಿದೇಶಗಳ ರಾಜಾಧಿರಾಜರು ನಳನ ಗುಣ ವಿಶೇಷಗಳ ಬಗೆಗೆ ತಮ್ಮ ತಮ್ಮಲ್ಲೇ ಮಾತಾಡಿಕೊಂಡರು. “ಎಂತಹ ರಾಜಕಳೆ ತುಂಬಿದೆ ಅವನ ಮೋರೆಯಲ್ಲಿ.......... ” — ಎಂದನ್ನದ ಬಾಯಿಗಳೇ ವಿರಳ. ಆಗಲೇ ಕಿವಿಯಿಂದ ಕಿವಿಗೆ ಈತನ ಉನ್ನತಿ ಹರಡಿತ್ತು.

ಪಟ್ಟಾಭಿಷೇಕದ ಉತ್ಸಾಹ ಕಡಿಮೆಯಾಗುವ ಮೊದಲೇ ವೀರಸೇನ ಮಹಾರಾಜ ದಿಗ್ವಿಜಯಕ್ಕೆ ಹೊರಟ. ಚತುರ್ಬಲ ಸೇನೆಯೊಂದಿಗೆ ಹೊರಟ ವೀರಸೇನನಿಗೆ ಎಲ್ಲೆಲ್ಲೂ ವೈಭವದ ವಿಜಯಶ್ರೀಯೆ ಒಲಿದಿದ್ದಳು. ಆಡಳಿತದ ಸಂಪೂರ್ಣ ಜವಾಬ್ದಾರಿ ಆಗ ನಳನ ಮೇಲಿತ್ತು.

ದಂಡಯಾತ್ರೆಯಿಂದ ಹಿಂದಿರುಗಿದ ವೀರಸೇನ ಮಹಾರಾಜ ನಳನನ್ನು ಸಾಮ್ರಾಜ್ಯಾಧಿಪತಿಯನ್ನಾಗಿ ಮಾಡಿ ವನವಾಸಕ್ಕೆ ಹೊರಟು ನಿಂತ. ನಳನ ಕಣ್ಣಾಲಿಗಳಾಗ ತೇವಗೊಂಡವು. ತಾನು ಒಂಟಿಯೆಂಬ ಭಾವನೆ ಮನದಲ್ಲಿ ಮೂಡಿದಾಗ-ಕರ್ತವ್ಯದ ಹೊರೆ ಬೆನ್ನುಹತ್ತಿ ನಿಂತಾಗ-ನಳನಿಗೆ ಮಾತು ಹೊರಡಲಾಗಲಿಲ್ಲ. ಅಳುತ್ತ "ಅಪ್ಪಾಜಿ" ಅಂದನಾತ.

"ಯಾಕೆ ಮಗು. ಬೆಳೆದು ದೊಡ್ಡವನಾಗಿದ್ದೀಯಾ .... ರೆಕ್ಕೆಗೆ ಪುಕ್ಕ ಬಂದಾಗ ಮರಿಹಕ್ಕಿ ಕೂಡಾ ಬಾನೆತ್ತರದಲ್ಲಿ ಸ್ವತಂತ್ರವಾಗಿ ಹಾರಾಡುವುದಿಲ್ಲವೆ ? ಅದು ಜೀವನದ ಕ್ರಮ : ತಲೆತಲಾಂತರಗಳಿಂದ ನಡೆದುಬಂದ ಪದ್ಧತಿ. ನೀನೀಗ ಸ್ವತಂತ್ರ : ನಿಷಧದೇಶದ ಅಧಿಪತಿ ! ಈ ದೇಶದ ಪ್ರಜೆಗಳೆಲ್ಲರ ಯೋಗಕ್ಷೇಮ ನಿನಗೆ ಸೇರಿದ್ದು. ಧರ್ಮವನ್ನು ಪಾಲಿಸು. ವಿದ್ವಾಂಸರನ್ನು ಸನ್ಮಾನಿಸು. ಬ್ರಾಹ್ಮಣರನ್ನು ರಕ್ಷಿಸು- ಉತ್ತಮನಾಗಿ ರಾಜ್ಯಭಾರಮಾಡು. ನಿನಗೆ ಮಂಗಳವಾಗುವುದು.

— ವೀರಸೇನ ಮಹಾರಾಜ ತನ್ನ ಕುಮಾರನನ್ನು ಹರಸಿದ ; ಪ್ರಜೆಗಳ ಆದರದ ಬೀಳ್ಕೊಡುಗೆಯೊಂದಿಗೆ ತನ್ನ ಪರಿವಾರ ಸಮೇತ ಸಂತಸದಿಂದ ವನವಾಸಿಯಾದ.

ನಳನ ವೈಭವದ ರಾಜ್ಯಭಾರ ಆರಂಭವಾಯಿತು. ದೇಶದ ಹಿತಕ್ಕಾಗಿ ಶ್ರಮಿಸತೊಡಗಿದನಾತ. ವಿದ್ವಾಂಸರು ಈತನ ಆಶ್ರಯ ಪಡೆದರು. ಕಲೆ, ಸಂಸ್ಕೃತಿ. ಸಾಹಿತ್ಯಗಳು ಈತನ ಕಾಲದಲ್ಲಿ ಚಿಗುರಿ ಪಲ್ಲವಿಸಿದವು. ವೀರಸೇನ ಮಹಾರಾಜನಿಗಿಂತ ಇಮ್ಮಡಿ ಕೀರ್ತಿಯನ್ನು ಅಲ್ಪಾವಧಿಯಲ್ಲೇ ಗಳಿಸಿಕೊಂಡ ನಳಮಹಾರಾಜ.

ಆತನಿಗಿನ್ನೂ ಎಳೆಯ ವಯಸ್ಸು — ಆಗಲೇ ಭೂಭುಜರಿಗೆ ಕರ್ಣಕುಂಡಲದಂತೆ ಇದ್ದನಾತ. ತಮ್ಮ ಕುವರಿಯನ್ನು ಅವನಿಗಿತ್ತು

ಸೌಭಾಗ್ಯವತಿಯರನ್ನಾಗಿ ಮಾಡಲು ಮುಂದೆ ಬರುವ ರಾಜಾಧಿರಾಜರುಗಳಿಗೆ ಕೊರತೆಯೇ ಇಲ್ಲವಾಯಿತು. ಆದರೆ ನಳನನ್ನು ಧೈರ್ಯದಿಂದ ಕೇಳುವ ಸಾಹಸ ಯಾರೂ ಮಾಡಲಿಲ್ಲ.

ಆತನ ವ್ಯಕ್ತಿತ್ವ ಅಂತಹದ್ದು. ಅಂತಹ ಅರಸನಿರುವುದೆ ಬುವಿಗೆ ಸೌಂದರ್ಯ; ಭೂಮಂಡಲದ ರಾಜಾಧಿರಾಜರಿಗೆಲ್ಲ ಕಿರೀಟಪ್ರಾಯನಾಗಿ ಮೆರೆದ ನಳರಾಜ. ಆತನ ಆಳ್ವಿಕೆಯಲ್ಲಿ ಪ್ರಜೆಗಳು ವಾತ್ಸಲ್ಯಪೂರಿತ ಜೀವನ ಸಾಗಿಸಿದರು; ವಿದ್ವಾಂಸರು ಆತ್ಮಸಂತುಷ್ಟಿಯನ್ನು ಹೊಂದಿದರು; ಮಾನಿನಿಯರೆಲ್ಲರೂ ಮುದದಿಂದ ನಲಿದಾಡಿದರು; ವೈರಿಗಳು ಆತನ ಹೆಸರನ್ನು ಕೇಳುವಾಗಲೇ ನಡುಗಿದರು. ಇಂತಹ ಕೌತುಕಮಯ ಕೀರ್ತಿ ಇನ್ನಾರಿಗೆ ತಾನೇ ಲಭ್ಯ!

ತನ್ನ ದೇಶ ಸೌಂದರ್ಯದ ಸೋಪಾನವಾಗಬೇಕೆಂದು ಬಗೆದ ನಳರಾಜ. ಹೆತ್ತಮ್ಮ ಮಗುವನ್ನು ತೊಟ್ಟಿಲೊಳಿಟ್ಟು ತೂಗುವಂತೆ ಭೂಮಾತೆಯನ್ನು ಲಾಲಿಸಿ, ಪಾಲಿಸಿ ಸಂರಕ್ಷಿಸಿದನಾತ. ಮೇದಿನಿಯೂ ಆಳರಸನ ಮನಸ್ಸನ್ನು ಆಹ್ಲಾದಗೊಳಿಸಿದಳು; ನಯನಮನೋಹರಳಾಗಿ ಮೆರೆದಳು. ವಸಂತ ಮಾಸವೇ ಚಿರಂತನವಾಗಿ ನೆಲೆಸಿದೆಯೋ–ಅನ್ನುವಂತೆ ರಾರಾಜಿಸಿತ್ತು ಅಂದು ನಿಷಧದೇಶ.

ವಿದರ್ಭದೇಶದ ಚೆಲುವನ್ನು ಚೆಲ್ಲುವ ಅಗ್ಗಳಿಕೆಯ ನಾಡು ಕುಂಡಿನಪುರ. ಭೀಮನೃಪಾಲ ಅಲ್ಲಿ ರಾಜ್ಯಭಾರಮಾಡುತ್ತಲಿದ್ದ. ವಿದರ್ಭ ದೇಶದ ಕೀರ್ತಿಗೆ ಕಳಸವಿಟ್ಟಂತೆ, ಭೀಮರಾಜನ ಕುವರಿ ದಮಯಂತಿ ಸೌಂದರ್ಯದ ಅಧಿದೇವತೆಯೆಂಬಂತೆ ಮೆರೆಯುತ್ತಿದ್ದಳು. ಆಕೆಯ ಸೌಂದರ್ಯ ಅಪೂರ್ವ!

ಆ ನಡಿಗೆಯಲ್ಲೂ ಸಾಪೇಕ್ಷ್ಯವಿದೆ; ಮೈಕಟ್ಟಿನಲ್ಲಿ ವೈವಿಧ್ಯವಿದೆ; ನುಡಿಯಲ್ಲೂ ಮಾಧುರ್ಯ ತುಂಬಿದೆ. ದೈವಿಕವಾದ ಸೌಂದರ್ಯವನ್ನು ಯಾರು ತಾನೇ ಆಶಿಸದೆ ಇರರು........

ಪ್ರಜೆಗಳ ಬಾಯಲ್ಲೆಲ್ಲ ಆಕೆಯದೇ ಸೌಂದರ್ಯವರ್ಣನೆ—ಹಂಸಗಳು ಆಕೆಯ ನಡಿಗೆಯನ್ನು ಬಯಸಿ ಅನುಕರಿಸಿರಬಹುದೇ? ಕೋಗಿಲೆಯ ಕಂಠವೂ ಆಕೆಯದೇ ವರವಿರಬಹುದೇ? ಆಕೆಯ ಇಂಪಾದ ಇನಿಮಾತುಗಳನ್ನು ಕೇಳಿ ಕೇಳಿ ಗಿಳಿಗಳು ಮಾತು ಕಲಿತಿರಬಹುದೇ? ಇವೆಲ್ಲವುಗಳಿಂದ ಮಿಗಿಲಾಗಿ ಪ್ರಕೃತಿಯೇ ಆಕೆಯ ಸೌಂದರ್ಯಕ್ಕೆ ಮಾರುಹೋಗಿತ್ತು ಎಂದರೇನು!? ಆಕೆಯ ಕುಡಿಗಣ್ಣಿನ ಚೆಲುವಿನ ನೋಟ, ಮಿಂಚನ್ನು ನಾಚಿಸುವಂತಿತ್ತು. ಇಲ್ಲಿ ಅತಿಶಯಕ್ಕೆ ಎಡೆಯೇ ಇಲ್ಲ.

ಬ್ರಹ್ಮನ ಸೃಷ್ಟಿಯಲ್ಲೆಲ್ಲ ಅದ್ಭುತವಾದುದು ದಮಯಂತಿಯ ಅಂಗಸೌಂದರ್ಯ. ಕುರೂಪಿಗಳನ್ನು, ಕುಟಿಲಬುದ್ಧಿಯುಳ್ಳವರನ್ನು, ಕೋಪಪಥಿಕವುಳ್ಳವರನ್ನು, ದರಿದ್ರರನ್ನು, ಚಪಲಚಿತ್ತರನ್ನು, ಸೃಷ್ಟಿಸಿ, ಸೃಷ್ಟಿಸಿ ಬೇಸರಗೊಂಡ ಬ್ರಹ್ಮದೇವ, ತನ್ನ ಕಲಾಕುಶಲತೆಯನ್ನು ಕಂಡ ಜಗತ್ತಿನ ಜನ ಬೆರಗಾಗಬೇಕು ಎನ್ನುವಂತೆ, ಸಂಪೂರ್ಣ ಶ್ರಮವಹಿಸಿ ದಮಯಂತಿಯನ್ನು ಸೃಷ್ಟಿಸಿದನೋ ಎಂಬಷ್ಟು ಅಪೂರ್ವವಾಗಿತ್ತು ಆಕೆಯ ಸೌಂದರ್ಯ. ಈಕೆಯ ಸೃಷ್ಟಿಯಿಂದಲೆ ಬ್ರಹ್ಮದೇವ ತನ್ನೆಲ್ಲ ಪಾಪಗಳನ್ನು ತೊಡೆದು ಹಾಕಿ ಕೃತಾರ್ಥನಾಗಿರಬಹುದೇ?

ದಮಯಂತಿಗಂತು ಇದೊಂದರ ಯೋಚನೆಯೇ ಇಲ್ಲ. ದೇಹದ ಮೇಲೆ ಯೌವನ ಆಕ್ರಮಣ ನಡೆಸಿದಾಗ, ಮನಸ್ಸೂ ಮಾಗಬೇಕಲ್ಲ. ಆಸೆ ಬಯಕೆಯಾಗಿ, ಮನದ ಮೂಲೆಯಲ್ಲಿ ಕುದಿದು, ಕುದಿದು, ದೇಹದ ಸಂದಿ ಸಂದಿಗಳಲ್ಲಿ ಬೇಗೆ ತುಂಬಿದಾಗ—ಇವೆಲ್ಲ ಯಾಕೆ....? ಯಾಕೆ? ಎಂದು ಪರಿತಪಿಸಿದ್ದಳು.

ಈಕೆಯ ಈ ಪ್ರಶ್ನೆಗೆ ಉತ್ತರಕೊಡುವವರು ಯಾರು? ಸಖಿಯರಾದರೂ ಹಾಸ್ಯಮಾಡಿ ಕೆಣಕುವವರೇ! ಸುಪ್ತ ಬಯಕೆಯ ಬೇಗೆಯಿಂದ ಬಳಲಿ ಬೆಂಡಾದಾಗ ಒಮ್ಮೆ ಆಕೆ ಸಖಿಯರನ್ನೆಲ್ಲ ತೊರೆದು ತಾವರೆಯ ಸರೋವರದಲ್ಲಿ ಕಾಲುಚಾಚಿ ಕುಳಿತುಕೊಳ್ಳುತ್ತಾಳೆ; ಸ್ವಲ್ಪವಾದರೂ ಬೇಗೆ ನೀಗಲೆಂದಿರಬಹುದು!

ಅಲ್ಲೆಲ್ಲ ಸ್ವತಂತ್ರವಾಗಿ ವಿಹರಿಸುವ ರಾಜಹಂಸೆಗಳು: ವಿರಹವೇದನೆಯಿಂದ ನರಳುವ ದಮಯಂತಿಯನ್ನು ಕಂಡು ಅವುಗಳಿಗೆಲ್ಲ ನಗುಬಂದಿರ

ಬೇಕು. ಕೊಕ್ಕಿಗೆ ಕೊಕ್ಕನ್ನು ಸೋಂಕಿಸಿ ಅವುಗಳು ನಿಂತಾಗ ದಮಯಂತಿಯನ್ನೇ ಹಾಸ್ಯ ಮಾಡುತ್ತಿವೆಯೋ ಎಂದೆನಿಸುತ್ತದೆ. ದಮಯಂತಿ ಅತ್ತ ನೋಡಿದರೂ ತುಟಿ ತೆರೆಯಳು........"ಹಂಸಗಳಿರಾ ಯಾಕೆ ಕೆಣಕುವಿರಿ ನನ್ನ........"—ಆಕೆಯ ನೆಟ್ಟ ನೋಟವೇ ಹೀಗೆ ಹೇಳುತ್ತಲಿತ್ತು....

ಕೊನೆಯಿಲ್ಲದ ಯೋಚನೆಗೆ ತಡೆಯೆಂಬಂತೆ ಮೇಲೆ ಮರದಲ್ಲಿ ಅರಳಿನಿಂತ ಸುಮವೊಂದು ಕೆಳಗುದುರಬೇಕೆ? ಅದೂ ಆಕೆಯ ತಲೆಯ ಮೇಲೆಯೇ ಬೀಳಬೇಕೇ? ಬೆಚ್ಚಿಬಿದ್ದು ಕಿರುಚಿದಳು ದಯಯಂತಿ. ಸರೋವರದ ಉದ್ದಗಲಕ್ಕೂ ಆಟವಾಡುತ್ತಿದ್ದ ಹಂಸಗಳು ಕಲಕಲಗೈಯುತ್ತ ದಡಸೇರಿ ನಿಂತುಕೊಂಡವು. ಅಲ್ಲೆ ಸನಿಹದಲ್ಲಿ ಹೂವಿನಹಾರ ನೇಯುತ್ತಲಿದ್ದ ಸಖಿಯರು ಓಡಿಬಂದು ಕೇಳಿದರು.

"ಏನಾಯಿತು ಒಡತಿ........ಹಗಲಲ್ಲೂ ಕನಸು ಕಂಡೆಯಾ...."

ದಮಯಂತಿ ತನ್ನ ಅಚಾತುರ್ಯವನ್ನು ನೆನೆದು ನಕ್ಕಳು. ಈಕೆಯ ನಗು ಅವರಲ್ಲಿ ಸಂಶಯದ ಬೀಜ ಬಿತ್ತಿತು. ಒಬ್ಬಾಕೆ ಪ್ರಶ್ನಿಸಿದಳು—

"ನಳಮಹಾರಾಯರಾ........?"

"ಉಹುಂ........ಇಲ್ಲ ....ಅವರೇಕೆ ಇಲ್ಲಿ ಬರುತ್ತಾರೆ....?"

"ಕನಸಿನಲ್ಲೂ ಬರಬಾರದೇ?"

"ನಿನಗೆಲ್ಲೊ ಹುಚ್ಚು........" ನಗುತ್ತ ಅಂದಳು ದಮಯಂತಿ.

"ನನಗ್ಯಾಕಮ್ಮ ಹುಚ್ಚು....ಈ ಹುಚ್ಚಿನಲ್ಲಿ ಕಿರುಚಿದವಳು ನಾನೋ ನೀನೋ...."

ಆಕೆಯ ಮಾತು ಕೇಳಿಸಿ ಉಳಿದ ಸಖಿಯರೂ ಗೊಳ್ಳೆಂದು ನಕ್ಕರು.

ದಮಯಂತಿಗೆ ತಾನು ಅಳಬೇಕೊ, ನಗಬೇಕೋ ತಿಳಿಯಲಿಲ್ಲ. ಸಾವರಿಸಿಕೊಂಡು ಮತ್ತೆ ಮಾತಾಡಿದಳಾಕೆ. ನಳನ ವಿಚಾರ ಬಂದಾಗ, ಆತನ ವಿಚಾರ ಮತ್ತಷ್ಟು ಕೇಳಿ ತಿಳಿದುಕೊಳ್ಳಬೇಕೆಂಬ ಆಶೆ ಆಕೆಗೆ. ಆದರೆ ಅಷ್ಟು ಮಂದಿಯ ಎದುರು ಆತನ ವಿಷಯ ತಿಳಿಯುವುದು

ದಮಯಂತಿಗೆ ಇಷ್ಟವಿಲ್ಲ. ತನ್ನ ಮೆಚ್ಚಿನ ಸಖಿಯೊಂದಿಗೆ ಆಕೆ ಪಕ್ಕದ ಲತಾಮಂಟಪದ ನೆರಳಿಗೆ ನಡೆದಳು.

ಬೀಸುತ್ತಿದ್ದ ತಂಗಾಳಿ ಪುಷ್ಪಕಂಪನ್ನು ಹೊತ್ತುತಂದು ಮನಸ್ಸನ್ನು ಆಹ್ಲಾದಗೊಳಿಸುತ್ತಿತ್ತು. ಗಿಳಿಗಳ ಗುಂಪೊಂದು ಅಲ್ಲೆಲ್ಲೋ ಲತೆಗಳ ಮರೆಯಲ್ಲಿ ಅವಿತು ತಮ್ಮ ಮಾತುಕತೆಗೆ ಆರಂಭಿಸಿದ್ದುವು. ಅದೊಂದನ್ನೂ ಕಿವಿಗೆ ಹಚ್ಚಿಕೊಳ್ಳದೆ, ದಮಯಂತಿ ಸಖಿಗೆ ಪ್ರಶ್ನಿಸಿದಳು—

"ಯಾರಮ್ಮ ಆ ನಳಮಹಾರಾಜರು....?"

"ಓಹ್ ನಿನಗಿನ್ನೂ ತಿಳಿದಿಲ್ಲವೇ....ಯಾಕೆ ದೇವಿ ಈ ನಾಟಕ...." —ಹಾಸ್ಯದ ಚಟಾಕಿ.

"ಹೆಸರಷ್ಟೇ ಕೇಳಿಬಲ್ಲೆ...ಆದರೆ..."

"ಹೆಸರು ತಿಳಿದರೆ ಮುಗಿಯಿತು.... ಮತ್ತೆ ಗೊತ್ತೆ ಇದೆಯಲ್ಲ... ಮುಂದೆಯು ಬಳಿಕ ಅವರೇ ಎಲ್ಲ ತಿಳಿಸುತ್ತಾರೆ...."

"ನೀನು ನನ್ನನ್ನು ಹಾಸ್ಯಮಾಡುತ್ತಿಯಾ...."-ಹುಸಿಮುನಿಸು....

"ಇಲ್ಲಮ್ಮ ನನ್ನೊಡತಿ.... ನಿನ್ನ ತಂದೆಯವರು ನಿನಗೆ ಅನುರೂಪನಾದ ವರನ ಅನ್ವೇಷಣೆಯಲ್ಲೇ ಇದ್ದಾರೆ.... ನಳಮಹಾರಾಜರ ವಿಚಾರವೂ ಅವರಿಗೆ ತಿಳಿದಿರಬಹುದಲ್ಲ....?"

"ನನ್ನ ವಿವಾಹದ ಬಗೆಗೆ ನನಗೆ ಪೂರ್ಣ ಸ್ವಾತಂತ್ರ್ಯವಿದೆ...."

"ಓಹ್, ಹಾಗೋ....ಅದಕ್ಕಾಗಿಯೇ ಈ ವಿಷಯ ಸಂಗ್ರಹಣೆ!"

"ಹೂಂ....ತಿಳಿದಿದ್ದರೆ ಹೇಳಮ್ಮ ಬೇಗ....ನನಗೇಕೋ ತಿಳಿಯಬೇಕೆಂಬ ಆಸೆ...."

ಇನ್ನು ಹೇಳದಿರಬಾರದೆಂದು ಬಗೆದ ಸಖಿ, ತಾನೂ ಅವರಿವರಿಂದ ಕೇಳಿ ತಿಳಿದ ವಿಚಾರವನ್ನು ತಿಳಿಸುವಳು—

"ನಳನೆಂಬುವರು ನಿಷಧ ದೇಶದ ಮಹಾರಾಜರು.... ಅವರ ಶೌರ್ಯ, ಪರಾಕ್ರಮ ಅಪ್ರತಿಮವಂತೆ.... ಪ್ರಜೆಗಳ ಪಾಲನೆಯಲ್ಲಿ

ಅವರು ಅಗ್ರಗಣ್ಯರಂತೆ. ಈ ಭೂಮಂಡಲದಲ್ಲಿ ಅವರನ್ನು ಸರಿದೂಗ ಬಲ್ಲ ರಾಜಾಧಿರಾಜರು ಇಲ್ಲವೇ ಇಲ್ಲವಂತೆ...."

"ಹೂಂ ... ಮತ್ತೆ...."

"ಅವರಿಗೆ ಅನುರೂಪಳಾದ ಕನ್ಯೆ ಯಾರೆಂದು ಬಲ್ಲೆಯಾ........."

"ಯಾರು.........! ? ಯಾರು !! ? "

"ಇದು ನನ್ನ ಅಭಿಪ್ರಾಯವಲ್ಲ ...... ಜನರು ಹೀಗೆ ಆಡಿಕೊಳ್ಳು ತ್ತಾರೆ.............. "

"ಏನೆಂದು .... ! ? "

"ಸೌಂದರ್ಯದ ಅಧಿದೇವತೆಯಾದ, ದಮಯಂತಿಯಲ್ಲದೆ ಇನ್ನಾರಿಗೆ ಆ ಯೋಗ ಹೇಳು.... "

"ಥೂ ಹೋಗಮ್ಮ.... ಅವರಂಥ ಪ್ರತಿಭಾವಂತರ ಮುಂದೆ ನನ್ನ ಸೌಂದರ್ಯವೆಲ್ಲ ತುಚ್ಛವಾಗಿ ಕಾಣುತ್ತದೆ.... "

"ಹಾಗಾದರೆ ನಿನಗಿಷ್ಟವಿಲ್ಲವೇ ದೇವಿ.... "

"ಹಾಗೆಂದು ನಾನು ಹೇಳಿಲ್ಲವಲ್ಲ.... "

"ನಿನಗೊಪ್ಪಿಗೆಯೇ ದಮಯಂತಿ.... "

ನಾಚುಗೆಯಿಂದ ತಲೆತಗ್ಗಿಸಿದಳು ದಮಯಂತಿ. ಸಖಿ ಅಲ್ಲಿ ನಿಲ್ಲದೆ ತನ್ನ ಉಳಿದ ಗೆಳತಿಯರಿಗೆ ವಿಷಯ ತಿಳಿಸಲು ಅತ್ತ ಓಡಿದಳು. ದಮಯಂತಿ ತಡೆದರೂ ಆಕೆ ನಿಲ್ಲಲಿಲ್ಲ....

"ನಿನಗೊಪ್ಪಿಗೆಯೇ ದಮಯಂತಿ.... "

— ಅತ್ತ ನೋಡುತ್ತಲಿದ್ದ ದಮಯಂತಿಗೆ ಮೈಯಲ್ಲಿ ತಣ್ಣೀರು ಸುರಿದಂತಾಯ್ತು. ಯಾರು ಹೇಳಿದರು ಹಾಗೆ.... ! ? ಸುತ್ತಲೊಮ್ಮೆ ತಿರುಗಿ ನೋಡಿದರೆ ಗಿಳಿಯೊಂದು ಮರೆಯಾಗಿ ಕುಳಿತು ಮತ್ತೊಮ್ಮೆ ಹೇಳಿತು—"ನಿನಗೊಪ್ಪಿಗೆಯೇ ದಮಯಂತಿ !"

ಏನು ಸಂಪತ್ತು, ಎಷ್ಟು ವೈಭವ ಇದ್ದರೇನು....ದಮಯಂತಿಯಂತಹ ಸ್ತ್ರೀರತ್ನವೊಂದು ಬಳಿಯಲ್ಲಿದ್ದರೇನೇ ಆ ಬದುಕು ಪರಿಪೂರ್ಣ! ಎಂದು ಈ ಅವಕಾಶ ಒದಗಬಹುದು? ಹಾತೊರೆಯುತ್ತಿತ್ತು ನಳ ಮಹಾರಾಜನ ಅಂತರಂಗ.

ಯಾವುದರಲ್ಲೂ ಉತ್ಸಾಹವಿಲ್ಲ. ಯಾವುದರಲ್ಲೂ ಆಸಕ್ತಿಯಿಲ್ಲ. ದಿನವಿಡೀ ಉದ್ಯಾನವಲ್ಲಿ ಶತಪಥ ಸುತ್ತುವ ನಳನ ಬಗೆಗೆ ಎಲ್ಲರೂ ಮಾತಾಡಿಕೊಳ್ಳುವವರೇ.

ಜನ ಸಾಮಾನ್ಯನೊಬ್ಬನ ವಿರಹದುರಿಯ ಪ್ರತಿಕ್ರಿಯೆಗೂ ರಾಜಾಧಿರಾಜನಾದ ನಳನ ವಿರಹವೇದನೆಗೂ ಎಷ್ಟೊಂದು ಅಂತರ. ನಾಡಿನ ಅರಸನೇ ಉದಾಸೀನನಾಗಿ ಹೀಗೆ ಇದ್ದರೆ — ಪ್ರಜೆಗಳು ಎಂತು ಸುಖಿಗಳಾಗಿರಲು ಸಾಧ್ಯ!

ಇದೇ ದುಃಖದಲ್ಲಿ, ದಮಯಂತಿಯನ್ನು ಪಡೆಯುವ ಚಿಂತೆಯಲ್ಲಿ, ನಳ ಓಲಗಸಾಲೆಗೆ ಬರುವುದನ್ನೇ ಬಿಟ್ಟುಬಿಟ್ಟಿದ್ದ. ತಲೆಯಲ್ಲಿ ಸುತ್ತುತ್ತಿದ್ದ ಯೋಚನೆಯ ಸುಳಿ ಒಮ್ಮೆ ಆತನನ್ನು ತಪ್ಪಿ ಅಲ್ಲಿಗೆ ಬರುವಂತೆ ಮಾಡಿತ್ತು. ಬರಬೇಕೆಂಬ ಉದ್ದೇಶ ಆತನಲ್ಲಿರದಿದ್ದರೂ ಹಳೆಯ ದಿನಚರಿ ಆತನನ್ನು ಅಲ್ಲಿಗೆ ಬರುವಂತೆ ಪ್ರೇರೇಪಿಸಿತ್ತು.

ಓಲಗಸಾಲೆಯಲ್ಲಿ ಸಾಲುಗಟ್ಟಿ ಅರಸನ ದರ್ಶನಾಕಾಂಕ್ಷಿಗಳಾಗಿ ನಿಂತು ಭಯಂಕರರೂಪಿಗಳಾದ ಬೇಟೆಗಾರರು ವಿನಂತಿಸಿಕೊಂಡರು—

"ಮೃಗಬಾಧೆ ಹೆಚ್ಚುತ್ತಿದೆ ಒಡೆಯಾ...."
"ನಮಗೆ ರಕ್ಷಣೆ ನೀಡು ತಂದೆ...."
"ನಮ್ಮ ಸಂರಕ್ಷಣೆ ನೀನಲ್ಲದೆ ಇನ್ನಾರು ಮಾಡಬೇಕು...."

ತನ್ನ ಕರ್ತವ್ಯವನ್ನು ಪ್ರಶ್ನಿಸುವ ಈ ವಿನಂತಿಗಳು ಅರಸನನ್ನು ಸುಪ್ತವಾಗಿ ಕಾಡುತ್ತಿದ್ದ ವಿರಹದುರಿಯನ್ನು ಮರೆಮಾಡಿ ಬೇಟೆಯಲ್ಲಿ ಮನ ನೆಡುವಂತೆ ಮಾಡಿತ್ತು. ಆಗಬಹುದೆಂದು ಒಪ್ಪಿದನಾತ.

ಬೇಟೆಗಾರರ ತಂಡ ಸಿದ್ಧವಾಯಿತು....

ಸೀಮೋಲ್ಲಂಘನೆಗೆ ಹೊರಟ ಕ್ಷತ್ರಿಯ ಸೇನೆಯಂತೆ ಬೇಟೆಗಾರರ ತಂಡ ನಳಮಹಾರಾಜನಿಂದೊಡಗೂಡಿ ಉತ್ಸಾಹದಿಂದ ಮುಂದೊತ್ತಿತು. ಬೇಟೆಯಾಡುವುದರಲ್ಲಿ ನಿಸ್ಸೀಮವಾದ ಸಾಳುವ, ವೇಗ, ತೊರಗ, ಹೆಗ್ಗಾಳ, ಜೂಗ, ಜಾಯಿಲ, ಸೀಗುರಿಗ, ಕೆಂಗಣ್ಣ, ವೇಗಿ, ಸುಬ್ಬುರ ವಾಲ, ಗದುಗ ಇವೇ ಮೊದಲಾದ ಹೆಸರಾಂತ ನಾಯಿಗಳ ತಂಡ, ಬೇಟೆಗಾರರನ್ನು ಹಿಂದೆ ಹಾಕಿ 'ತಾ ಮುಂದು, ತಾ ಮುಂದು' ಎಂದು ಹಾರಾಡುತ್ತಿದ್ದುವು. ಅವುಗಳಿಗೂ ರಕ್ತದ ಆಸೆ. ಹಲವು ಕಾಲದಿಂದ ಈ ಸ್ವತಂತ್ರವಾದ ಬೇಟೆಯ ಅವಕಾಶ ಅವುಗಳಿಗೆ ದೊರೆತಿರಲಿಲ್ಲ.

ಮೌನವಾವರಿಸಿದ್ದ ಕಾನನ ಒಮ್ಮಿಂದೊಮ್ಮೆಲೇ ಎಚ್ಚೆತ್ತು, ಇದೇನು ಸೋಜಿಗ ಇಲ್ಲಿ ನಡೆಯುತ್ತಿದೆ ಎಂದು ನೋಡಿತು. ಹುಲ್ಲೆ ಮೊದಲಾದ ಸಾಧುಪ್ರಾಣಿಗಳು ನಾಯಿಗಳ ವಾಸನೆಯನ್ನು ತಿಳಿದು ಆಗಲೇ ಎತ್ತೆತ್ತಲೊ ಕಾಲು ಕಿತ್ತಿದ್ದವು. ಕೋತಿಗಳು ಭಯಗೊಂಡಂತೆ ಕೀರಲು ಧ್ವನಿಯಲ್ಲಿ ಕೂಗಿ, ಬೇಟೆಯಗಾರರ ತಂಡ ಅಡವಿಯನ್ನು ಹೊಕ್ಕಿದ ವಾರ್ತೆಯನ್ನು ವನದ ಗವಿ ಬಿಲಗಳಲ್ಲೂ ಪ್ರತಿಧ್ವನಿಸುವಂತೆ ಹೇಳಿದವು. ಬೇಟೆಗಾರರ, ನಾಯಿಗಳ ಕಾಲುಗಳ ತುಳಿತಕ್ಕೆ ಸಿಕ್ಕ ಧೂಳು ಆಗಸದೆತ್ತರಕ್ಕೆ ಹರಡಲು, ಮರದೆತ್ತರದಲ್ಲಿ ಮನೆಮಾಡಿದ್ದ ಪಕ್ಷಿಸಂಕುಲ ದೆಸೆಗೆಟ್ಟು ಓಡಹತ್ತಿದವು. ಬೇಟೆಗಾರರ ಉತ್ಸಾಹದ ಕೇಕೆಯಿಂದ ಸ್ಫೂರ್ತಿಗೊಂಡ ನಾಯಿಗಳು ಮುಂದಾಗಿ ಪೊದೆ, ಗವಿಗಳಲ್ಲಿ ಅವಿತಿದ್ದ ಮೃಗಗಳನ್ನು ಹೊರಕ್ಕೆ ತರಲು ಅಲ್ಲಿ, ಇಲ್ಲಿ ಹುಡುಕಾಡುತ್ತಿದ್ದವು.

ವಿಧ ವಿಧದ ಮಾರಕಾಯುಧಗಳನ್ನು ಹೊಂದಿದ್ದ ಬೇಟೆಗಾರರ ತಂಡ ನೂರಾರು ವನ್ಯಮೃಗಗಳನ್ನು ಆಗಲೇ ಬಲಿತೆಗೆದುಕೊಂಡಿತ್ತು. ಹುಲಿ, ಚಿರತೆ, ಕರಡಿಯೆನ್ನದೆ, ಎಲ್ಲವೂ ಅವರ ಶಸ್ತ್ರಗಳಿಗೆ ಬಲಿಯಾಗಿದ್ದವು.

ಬೇಟೆಗಾರರ ಈ ಅಮಿತ ಉತ್ಸಾಹ, ರಾಜನಲ್ಲೂ ಕ್ಷಾತ್ರತೇಜಸ್ಸನ್ನು ತುಂಬಿತ್ತು. ತಾನೂ ಬೇಟೆಯಾಡಬೇಕೆಂಬಂತೆ ಆತನ ಅಂಗಾಂಗಗಳು ಸ್ಫುರಿಸತೊಡಗಿದವು. ಆದಾಗಲೇ ಎದುರಾಯಿತು ಸೊಕ್ಕಿದ

ಹೆಬ್ಬುಲಿ! ಹುಲ್ಲೆ ಹಿಂಡುಗಳ ಮೇಲೆ ಜಿಗಿದು ಬಿಸಿರಕ್ತ ಹೀರಿ ಸೊಕ್ಕಿದ ಪಟ್ಟೆಹುಲಿ ಆ ಕಾನನದಲ್ಲಿ 'ತನಗಾರು ಎಣೆ?' ಎಂಬಂತೆ ಮೆರೆದಾಡುತ್ತಿತ್ತು—ಆ ಕೆಂಗಣ್ಣು, ಉದ್ದವಾದ ಮೀಸೆ, ಭಯಹುಟ್ಟಿಸುವ ರೂಪ! ಮೈಬಣ್ಣ ಚೆಲುವಾಗಿದ್ದರೂ ಆ ಗುಣ ಅದೆಲ್ಲವನ್ನು ಮರೆಸಿತ್ತು.

ದರ್ಪದಿಂದ ಹುಲ್ಲೆಗಳತ್ತ ಅಡಿಯಿಡುತ್ತಿದ್ದ ಹುಲಿಯನ್ನು ಕೊಲ್ಲಲು ನಳಮಹಾರಾಜನೇ ಮುಂದೆ ಬಂದ. ತನ್ನ ಅಪ್ರತಿಮ ಶರ ಸಂಧಾನದಿಂದ ಆ ಹೆಬ್ಬುಲಿ ರಕ್ತದ ಮಡುವಿನಲ್ಲಿ ಅಸುನೀಗುವಂತೆ ಮಾಡಿದ. ರಾಜನ ಪರಾಕ್ರಮವನ್ನು ಕಂಡು ಇತರ ಬೇಟೆಗಾರರೂ ತಲೆದೂಗಿದರು; ಇನ್ನಷ್ಟು ಉತ್ಸಾಹದಿಂದ ಮುಂದಡಿಯಿಟ್ಟರು.

ಬೇಟೆಯ ಆಯಾಸದಿಂದ ಬೇಟೆಗಾರರ ಸೇನೆಗೆ ಆಗಲೇ ಬಾಯಾರಿಕೆ ಬಾಧಿಸಿತ್ತು. ನೀರಿನ ಇರವನ್ನು ಅರಸಿ ಮುಂದೆ ನಡೆದಾಗ ಹಂಸಗಳ ಹಿಂಡೊಂದು ಅವರಿಗೆ ಗೋಚರಿಸಿತು. ಮುಂದೆ ಹೋದರೆ ಅಲ್ಲೊಂದು ಸುಂದರವಾದ ತಾವರೆಯ ಕೊಳ ಕಾಣಿಸಿತು.

ಇಷ್ಟು ಸುಂದರವಾದ ಹೂಗೊಳ ಈ ಕಾನನದ ನಡುವೆ ಹೇಗೆ ಬಂತು? ಇಲ್ಲಿಯ ಪ್ರಕೃತಿ ಎಷ್ಟು ಮನೋಹರವಾಗಿದೆ! ನಳರಾಜ ಆಗಲೇ ಬೇಟೆಗಾರರಿಗೆ ನಾಯಿಗಳನ್ನು ಹಿಡಿದಿರಿಸಲು ಆಜ್ಞೆ ಮಾಡಿದ್ದ. ಮನತಣಿಯುವಂತೆ ಆ ಸರೋವರದ ಸೌಂದರ್ಯ ಶ್ರೀಮಂತಿಕೆಯನ್ನು ಮತ್ತೆ ಮತ್ತೆ ನೋಡುತ್ತಲಿದ್ದ ನಳಮಹಾರಾಜ.

ಆ ಸರೋಜಷಂಡಕ್ಕೆ ಕಳೆಯೇರಿಸುವಂತೆ ರಾಜಹಂಸವೊಂದು, ನಲ್ಲೆಗೆ ಮುತ್ತಿನ ಹಾರವನ್ನು ಈಯುವ ನಲ್ಲನಂತೆ, ಪ್ರೀತಿಯಿಂದ ತನ್ನಿನಿಯಳಿಗೆ ಚಂಚುಪುಟದಲ್ಲಿ ತಾವರೆಯ ದಂಟಿನ ಸುಧಾರಸವನ್ನು ಹೀರಿತಂದು ಈಯುತ್ತಿತ್ತು. ಅದನ್ನು ನೋಡುತ್ತಲಿದ್ದಂತೆ ಮತ್ತೆ ರಾಜನ ಮನಸ್ಸು, ದಮಯಂತಿಯತ್ತ ಹರಿದಿತ್ತು. ಬೇಟೆಯ ಉತ್ಸಾಹ ಸಂಪೂರ್ಣವಾಗಿ ಇಳಿದುಹೋಗಿತ್ತು.

ಮದನನ ಪಂಚಶರ ಎದೆಯನ್ನು ನಾಟಿದಾಗ, ಆ ಪ್ರದೇಶವೆಲ್ಲ ನಯನ ಮನೋಹರ! ಸರೋವರದಲ್ಲಿ ಅತ್ತಿತ್ತ ಹರಿದಾಡುವ ಬಾಳೆ

ಮೀನುಗಳು; ಅಲ್ಲಲ್ಲಿ ಉದುರಿದ ಪದ್ಮಪರಾಗದಲ್ಲಿ ಹೊರಳಾಡಿ, ನಲಿದಾಡಿ ಸಂತಸದಿಂದ ಮೈಮರೆಯುವ ಹಂಸಗಳು; ಕೆಂಪಾದ ಕುಸುಮಾಂಜಲಿಯನ್ನು ಹೀರಿ ಹೀರಿ ಸುಖಿಸುವ ಮರಿದುಂಬಿಗಳು; ಅರಳಿನಿಂತ ಕಮನೀಯವಾಗಿರುವ ತಾವರೆಗಳು—ಒಂದೇ ಎರಡೇ!

ಮನಸ್ಸು ಏತಕ್ಕೆ ಭಾವಪರವಶವಾಗುತ್ತಿದೆ? ಬೇಟೆಯ ಬಳಲಿಕೆಯಿದ್ದರೂ ಯಾವುದೋ ಅವ್ಯಕ್ತ ಶಕ್ತಿ ಅಂತರಂಗವನ್ನು ಕೆದಕುತ್ತಿದೆಯಲ್ಲ—ನಳರಾಜ ಚಿಂತಿಸಿ ಚಿಂತಿಸಿ ಮತ್ತೆ ಸರೋವರದತ್ತ ದೃಷ್ಟಿ ಬೀರುತ್ತಲೆ ಇದ್ದ. ಮನಸ್ಸು ಆದರೂ ಸ್ಥಿಮಿತಕ್ಕೆ ಬಾರದು!

ಅತ್ತ ನೋಡುತ್ತಿದ್ದ ನಳನ ದೃಷ್ಟಿಕೋನದಲ್ಲಿ ಹೊಸದೊಂದು ಅದ್ಭುತ ಕಾಣಿಸಿಕೊಂಡಿತು — ಅಪೂರ್ವವಾದುದು, ಅನರ್ಘ್ಯವಾದುದು........! ಹೊನ್ನಿನ ಬಣ್ಣದ ಹಂಸವೊಂದು ಆ ಸರೋವರದ ತಟದಲ್ಲಿ ಕಾಣಿಸಿಕೊಂಡಾಗ ರಾಜನ ಮನಸ್ಸೆಲ್ಲ ಅಲ್ಲಿ ಕೇಂದ್ರೀಕೃತವಾಗಿತ್ತು.

ಏನು ಆಶ್ಚರ್ಯ! ಹೊನ್ನಿನ ಹಂಸಗಳೂ ಈ ಭೂಮಿಯ ಮೇಲೆ ಜೀವಿಸಿರಲು ಸಾಧ್ಯವೇ? — ನಳರಾಜ ಚಿಂತಿಸಿದ.

ಬ್ರಹ್ಮದೇವನ ಸೃಷ್ಟಿಯಲ್ಲಿ ಈ ಹಂಸೆಯದು ಅಗ್ರಸ್ಥಾನ; ಸೌಂದರ್ಯವನ್ನೆಲ್ಲವನ್ನು ಎರಕಹೊಯ್ದು ಹೊನ್ನಹಂಸದ ರೂಪದಲ್ಲಿ ಸುರಿದಿರಲೂ ಬಹುದು; ಆ ಜಲಪಕ್ಷಿಗಳ ನಡುವಿನಲ್ಲಿ ರಾರಾಜಿಸುತ್ತಿದ್ದ ಹಂಸ ತನ್ನದಾಗಬೇಕು; ತಾನು ಅದನ್ನು ಹಿಡಿಯಬೇಕು — ರಾಜನ ಬಯಕೆ ಅತಿಯಾಯಿತು! ಬ್ರಹ್ಮದೇವ, ತನ್ನ ಆದಿ ಸೃಷ್ಟಿಯನ್ನು ನೋಡಿಕೊಂಡು ಬರಲು ಈ ಹಂಸವನ್ನು ಅಟ್ಟಿದನೊ — ಎಂಬಷ್ಟು ಅದ್ಭುತವಾದ ಹಂಸ ನಳರಾಯನ ಮನಸ್ಸನ್ನು ಸಂಪೂರ್ಣವಾಗಿ ಸೂರೆಗೊಂಡಿತ್ತು.

ಈ ಹಂಸ ದೈವಿಕವಾದುದು. ಇದು ದೇವಲೋಕದಲ್ಲಿ ಮಾತ್ರ ಇರಲು ಯೋಗ್ಯ. ಇಂತಹದ್ದು ಇಲ್ಲಿಗೇತಕ್ಕೆ ಬಂತು? ತನ್ನ ಮನಸ್ಸನ್ನು ಏಕಿಂತು ಆಕರ್ಷಿಸಿತು? ಅದನಿಂದು ಬಿಟ್ಟಿರಲು ತನ್ನಿಂದ

ಸಾಧ್ಯವಿಲ್ಲ. ಮೆಲ್ಲನೆ ಅಡಿಯ ಮುಂದೊತ್ತಿದ ನಳರಾಯ.

ಆ ಹಂಸದ ಮೈಯೆಲ್ಲ ಮಿನುಗುತ್ತಿತ್ತು; ಚಿಂಬುಪ್ಪಟ ಮಾಣಿಕ್ಯದ ವರ್ಣವನ್ನು ಹೊಂದಿತ್ತು: ಇಂತಿರ್ದ ಆ ರಾಜಹಂಸ ಸುಖಸಂತೋಷ ದಿಂದ ಇತರ ಹಂಸಗಳೊಂದಿಗೆ ಕೂಡಿ ಆಡುತ್ತಿರಲು ನಳರಾಜ ತನ್ನನ್ನು ಹಿಡಿಯಲು ಬರುವ ವಿಷಯ ಅದಕ್ಕೆ ತಿಳಿಯಿತು.

ಇನ್ನೇನು, ಮಹಾರಾಜ ಹಿಡಿದೇಬಿಡುತ್ತಾನೆ — ಭಯಗೊಂಡು ನಿಂತು, ನಡೆದು ಕೊನೆಯಲ್ಲಿ ಬೇರೆ ದಾರಿಗಾಣದೆ ಆ ಹಂಸ ಬಳಲಿ ರಾಜನ ಕೈಗೆ ಸಿಕ್ಕಿಕೊಂಡಿತು.

ಈ ಅಮೂಲ್ಯವಾದ ಹೊನ್ನಿನ ಬಣ್ಣದ ಹಂಸ ತನ್ನದಾಯಿತಲ್ಲ ಎಂಬ ಸಂತೋಷ ನಳಮಹಾರಾಯನಿಗೆ. ಆದರೆ ಓಡಾಡಿ ದಣಿದುದ ರಿಂದ ರಾಜನ ಕೈಯಲ್ಲಿ ಕಂಪಿಸುತ್ತ ಕುಳಿತಿದ್ದ ಹಂಸ ಭಯಗೊಂಡಿತ್ತು.

ಹಂಸದಲ್ಲಿ ಅನುರಾಗಗೊಂಡ ನಳರಾಯ, ಅದರ ನಯವಾದ ಗರಿ ಗಳನ್ನು ತನ್ನ ಕೈಗಳಿಂದ ನೇವರಿಸಿದ. ಮರಗಳ ನೆರಳಿನಲ್ಲಿ ಕುಳಿತು ಆ ಹಂಸದ ಸೌಂದರ್ಯಗಳನ್ನು ಒಲುಮೆಯಿಂದ ನೋಡಿದ: ನೋಡಿದಷ್ಟು ಮನತಣಿಯದ ಸೌಂದರ್ಯ ಅದು!

"ಹಂಸರಾಜ, ಎಲ್ಲಿಂದ ಬಂದೆ ನೀನು?"

ನಳನ ಪ್ರಶ್ನೆಗೆ ಉತ್ತರಕೊಡಬೇಕು. ಹಂಸಕ್ಕಾದರೋ ಭಯ ದಿಂದ ಮಾತೇ ಬಾರದು. ಮತ್ತೆ ಪ್ರಶ್ನಿಸಿದ ನಳರಾಯ—

"ಹಂಸೋತ್ತಮ, ಎಲ್ಲಿಂದ ಬಂದೆ ಹೇಳು?"

"ನಾನಿರುವುದು ಮಾನಸ ಸರೋವರದಲ್ಲಿ"

"ಓಹೋ, ನಿನ್ನ ದೇಹಕ್ಕೆ ಈ ಹೊನ್ನಿನ ಗರಿಗಳು ಎಲ್ಲಿಂದ ಬಂದವು ಹೇಳಲಾರೆಯಾ?"

"ನಿನಗೆ ತಿಳಿಯಲಿಚ್ಛೆಯಿದ್ದರೆ ಹೇಳುವೆನು ಕೇಳು... ಮಹಾರಾಜ, ಆ ಸರೋವರದಲ್ಲಿ ಹುಟ್ಟಿ ಬೆಳೆದ ಪದ್ಮಬೀಜದ ಹಾಗೂ ನಿರ್ಮಲವಾದ ಜಲದ ಸೇವನೆಯಿಂದ ನನ್ನ ತನುವೇ ಹೇಮವರ್ಣವನ್ನು ತಳೆಯಿತು"

"ಬಹಳ ಸೊಗಸಾಗಿದೆ ನಿನ್ನ ಕಥೆ. ಇನ್ನೂ ನಿನ್ನ ವೃತ್ತಾಂತವನ್ನು ಹೇಳು ಹಂಸರಾಜ; ನೀನೀಗ ಎಲ್ಲಿರುವೆ ? ಎಲ್ಲಿಗೆ ಹೊರಟಿರುವೆ ? ನನಗಿದೆಲ್ಲವನ್ನು ವಿವರಿಸು ಹಂಸರಾಜ. ನಿನ್ನನ್ನೀಗ ಆವರಿಸಿರುವ ಚಿಂತೆಯನ್ನು ಬಿಟ್ಟುಬಿಡು. ಹೇಳು.... ಎಲ್ಲವನ್ನು ಹೇಳಿ ನನ್ನ ಆತುರವನ್ನು ಕಡಿಮೆಮಾಡು...."

— ನಳರಾಜ ಇಂತು ಕೆದಕಿ, ಕೆದಕಿ ಕೇಳುತ್ತಿರಲು ಹಂಸ ನಿಜ ವಿಷಯುವನ್ನು ಅರುಹಿತು —

"ಇಲ್ಲಿಯ ಚೆಲುವಿನ ಹೂಗೊಳವನ್ನು ನೋಡಲೆಂದು ಬಂದೆ; ಇಲ್ಲಿಯ ಪ್ರಕೃತಿಯ ಸೌಂದರ್ಯವನ್ನು ಆಸ್ವಾದಿಸಲೆಂದು ಸಂತಸದಿಂದ ಬಂದಿದ್ದರೆ ನೀನು ನನ್ನನ್ನು ಅಟ್ಟಸಿ, ಹಿಡಿದು, ಬಳಲಿಸಿದೆಯಲ್ಲ........ ಮಹಾರಾಜ. ಇದು ನ್ಯಾಯವೆ ಹೇಳು ? "

ಹಂಸದ ಪ್ರಶ್ನೆಗೆ ನಳರಾಯ ನಿರುತ್ತರ. ಮತ್ತೆ ತನ್ನ ಕರುಳಿನ ಕಥೆಯನ್ನು ಮುಂದುವರಿಸಿತು ಆ ಹಂಸ—

"ನೋಡು ರಾಜ, ನನಗೆ ಅನೇಕ ಬಂಧುಗಳಿದ್ದಾರೆ. ಹೆತ್ತ ತಂದೆ ತಾಯಿಂದಿರು ವೃದ್ಧರು. ನನ್ನ ಈ ಬಂಧನದ ವಾರ್ತೆ ಅವರಿಗೆ ತಿಳಿದರೆ ಒಂದು ನಿಮಿಷವೂ ಅವರು ಬದುಕಿ ಉಳಿಯೋಲ್ಲ; ಆಗಲೇ ಆತ್ಮಹತ್ಯೆ ಮಾಡಿಕೊಂಡಾರು. ಓ ದೇವಾಧಿದೇವ, ನೀನು ದಯಾನಿಧಿ; ಕೃಪಾಳು ದಾನಿ, ಶರಣಾಗತರಕ್ಷಕ ನನ್ನ ಅಸುವ ಬಿಟ್ಟುಕೊಡಲಾರೆಯಾ ಹೇಳು...."

"....ಯಾಕೆ ಸುಮ್ಮನಿರುವೆ ರಾಜಾ.... ಬ್ರಾಹ್ಮಣರ ಪಾಲಿಸುವುದು ಭೂಭುಜನಾದ ನಿನ್ನ ಕರ್ತವ್ಯವಲ್ಲವೇ ? ಎಲೆ ಭೂಪಾಲಕ, ಬ್ರಾಹ್ಮಣನಾಗಿದ್ದು, ತೀರ್ಥವಾಸಿಯಾಗಿದ್ದ ನನ್ನನ್ನು ಬಂಧಿಸಿದರೆ ನಾಳೆ ಈ ಭೂಲೋಕದ ಜನ ನಿನ್ನನ್ನು ನಿಂದಿಸಲಾರರೇ.... ? "

ಹಂಸ ಎಷ್ಟು ಅಂಗಲಾಚಿದರೂ ನಳರಾಯ ಉತ್ತರಿಸಲಿಲ್ಲ. ಅದರ ಸೌಂದರ್ಯವನ್ನು ನೋಡುವುದರಲ್ಲೇ ಆತನ ನಯನಗಳು ಲೀನವಾಗಿದ್ದವು. ಮನಸ್ಸು ಮುಗ್ಧವಾಗಿತ್ತು ! ಹಂಸದ ಮೊರೆಯನ್ನು ಆಲಿಸಲೂ ಆತನ ಮನಸ್ಸಿನಲ್ಲಿ ಅವಕಾಶವಿಲ್ಲವಾಗಿತ್ತು.

ಅರಸನು ಮನಸ್ಸು ಬದಲಾಯಿಸದೇ ಮತ್ತೆ ಮತ್ತೆ ತನ್ನನ್ನು ನೋಡುತ್ತಿರುವುದನ್ನು ಕಂಡು ಪುನಃ ಪ್ರಾರ್ಥಿಸಿತು ಹಂಸ—

"ಯಾಕೆ ಮಹಾರಾಜ, ನನ್ನ ದುರುಗುಟ್ಟಿಕೊಂಡು ನೋಡುತ್ತಿರುವೆ? ನಿನಗೆ ನನ್ನಿಂದ ಏನೂ ಪ್ರಯೋಜನವಿಲ್ಲ. ನನ್ನ ಕೊಂದು ತಿಂದೆಯಾದರೂ ನಿನ್ನ ಹಸಿವು ಹಿಂಗದು; ಹೇಮ ವರ್ಣದ ಗರಿಗಳು ನನ್ನ ದೇಹದಲ್ಲಿದ್ದರೂ ಹಣವನ್ನು ಲಭಿಸಲಾರೆ; ನನ್ನ ಆಸೆ ವ್ಯರ್ಥ; ನಿನ್ನ ರಾಜವೈಭವಕ್ಕೆ ಮನೋಹರವಾದ ಸೊಗಸಾಗುವುದಿಲ್ಲ. ಹಂಸ ಮೊದಲಾದ ಪಕ್ಷಿಗಳೂ ಇವೆಯಲ್ಲ. ಯಾಕೆ ನನ್ನನ್ನು ಬಯಸುತ್ತಿರುವೆ ಹೇಳು. ನನ್ನನ್ನು ಬಿಟ್ಟುಬಿಡು ನೃಪಾಲ, ಅದರಿಂದ ನಿನಗೆ ಸತ್ಕೀರ್ತಿ ಲಭಿಸುತ್ತದೆ....

...ಮತ್ತೂ ಹಾಗೆಯೇ ನೋಡುತ್ತಿರುವೆಯಲ್ಲ... ಹಿಂದೆ ಶಿಬಿ ಮಹಾರಾಜ ಪಾರಿವಾಳವನ್ನು ಗಿಡುಗನ ಬಾಯಿಂದ ರಕ್ಷಿಸಲು ತನ್ನ ದೇಹದ ಮಾಂಸವನ್ನೇ ಕಡಿದು ಇತ್ತದ್ದನ್ನು ಅರಿಯಲಾರೆಯಾ ನಳಮಹಾರಾಜಾ... ನನ್ನನ್ನು ರಕ್ಷಿಸು, ರಕ್ಷಿಸು...."

ಪರಿಪರಿಯಾಗಿ ತನ್ನನ್ನು ಬೇಡಿಕೊಳ್ಳುವ ಹಂಸವನ್ನು ಆಗಲೇ ಹಿಡಿದಿದ್ದು ಬಿಟ್ಟು ಬಿಡಲು ನಳರಾಜನ ಮನಸ್ಸು ತಾನೇ ಹೇಗೆ ಒಪ್ಪಬೇಕು? ಆದರೂ ಹಂಸವನ್ನು ಮೆಲ್ಲನೆ ಬಿಟ್ಟು ಬಿಟ್ಟ ನಳರಾಜ.

ನೃಪನ ಕೈಯಿಂದ ಬಂಧಮುಕ್ತಗೊಂಡ ಹಂಸವನ್ನು ಅಲ್ಲಿ ಸೇರಿದ್ದ ಪಕ್ಷಿಸಂಕುಲವೆಲ್ಲ ನೋಡುತ್ತಲೇ ಇದ್ದವು. ಹಂಸ ಹಾರಲೆಂದು ಮುಂದಿಟ್ಟ ಅಡಿಯನ್ನು ಹಿಂದಿರಿಸಿ ಮತ್ತೆ ಅರಸನಲ್ಲಿ ಏನನ್ನೋ ಹೇಳಲು ಉತ್ಸುಕವಾಗಿರುವಂತೆ ತಡೆದು ನಿಂತಿತು.

"ನಿನ್ನನ್ನು ನಾನು ಬಂಧಮುಕ್ತನನ್ನಾಗಿ ಮಾಡಿದ್ದೇನೆ... ನೀನಿನ್ನು ಹೊರಡಬಹುದು ಹಂಸ...."—ನಳರಾಯನೆಂದ.

"ನನ್ನ ಪ್ರಾಣವನ್ನು ಉಳಿಸಿದ ನಿನಗೆ ನಾನೊಂದು ಮಹದುಪಕಾರ ಮಾಡಬೇಕಾಗಿದೆ ಮಹಾರಾಜಾ....!?

"ಎಲೆ ಹಂಸವೇ ... ನೀನು, ನೈಷಧ ಚಕ್ರವರ್ತಿಯಾದ ನನಗೆ ಉಪಕಾರ ಮಾಡುವೆಯಾ ! ? "

"ಹುಂ.... ಯಾಕೆ ಸಂಕೋಚ.... ನಾನೀಗ ಕುಂಡಿನಪುರಕ್ಕೆ ಹೋಗಿ ದಮಯಂತಿಗೆ ನಿನ್ನ ಮೇಲೆ ಪ್ರೇಮಮೂಡುವಂತೆ ಮಾಡುವೆ — ನಿನ್ನನ್ನಾಕೆ ವಿವಾಹವಾಗಲು ಒಪ್ಪುವಂತೆ ಮಾಡುವೆ— "

"ಹೋ ಹಂಸ.... ಇದೇನು ಹೇಳುತ್ತಿರುವೆ ನೀನು.... ನನ್ನ ಮನದಿಂಗಿತವನ್ನು ಅರ್ಥಮಾಡಿಕೊಂಡ ನೀನು ಮಹಾಜ್ಞಾನಿ.... ! ನಿನ್ನನ್ನು ಹೇಗೆ ಸತ್ಕರಿಸಬೇಕೆಂದು ನನಗೆ ತಿಳಿಯದಾಗಿದೆ. ....ನೀನು ಈಗ ಹೇಳಿದಂತೆ ಖಂಡಿತಾ ಮಾಡುವೆಯಾ ?

"ಇದು ಖಂಡಿತ ನಳಮಹಾರಾಜ....ನೀನು ನನ್ನ ಪ್ರಾಣವನ್ನು ಉಳಿಸಿ ಪುಣ್ಯಕಟ್ಟಿಕೊಂಡೆ ; ನಾನು ನಿನಗೀ ಉಪಕಾರವನ್ನು ಮಾಡಿ ಪಾವನನಾಗುತ್ತೇನೆ.... "

— ಎಂದೆನ್ನುತ್ತ ಹಂಸ ಕೂಡಲೇ ಕುಂಡಿನಪುರಕ್ಕೆ ಸಾಗಿತು.

ನಳಮಹಾರಾಜ, ಇದೊಂದೂ ಅರ್ಥವಾಗದಂತೆ ಚಿಂತಿಸಿದ ! ಇದೆಲ್ಲ ಏತಕ್ಕೆ ಹೀಗಾಗುತ್ತಿದೆ ? ತಾನು ಬೇಟೆಯಾಡಲು ಏತಕ್ಕೆ ಬಂದೆ ? ಈ ಸರೋವರ ಹೇಗೆ ಕಾಣಿಸಿಕೊಂಡಿತು ? ಈ ಹಂಸ ಹೇಗೆ ಬಂದಿತು ? ತನ್ನ ಮನದಿಂಗಿತವನ್ನು ಹಂಸ ತಿಳಿವುದಾದರೂ ಹೇಗೆ ? — ಹೀಗೆ ಒಂದೊಂದಾಗಿ ಯೋಚಿಸಿದ ರಾಜ ಬೇಟೆಯನ್ನು ಅಲ್ಲಿಯೇ ನಿಲ್ಲಿಸಿ ತನ್ನ ರಾಜಧಾನಿಯಾದ ವಿಮಳ ಪಟ್ಟಣಕ್ಕೆ ನಡೆದ.

ಮನಸ್ಸು ಮಾತ್ರ ಆ ದಮಯಂತಿಯನ್ನೇ ಚಿಂತಿಸುತ್ತಿತ್ತು.... ಆ ಹಂಸ ಏನೇನೆಸಗಿರಬಹುದೆಂದು ತರ್ಕಿಸುತ್ತಿತ್ತು.

ಜೊತೆಯಲ್ಲಿ ಬಂದಿದ್ದ ಬೇಟೆಗಾರರ ತಂಡ, ಅರಸ ಒಮ್ಮೆಲೇ ನಿರುತ್ಸಾಹನಾದುದನ್ನು ಕಂಡು ತಾವೂ ಅರ್ಧದಲ್ಲಿಯೇ ಬೇಟೆ ನಿಲ್ಲಿಸಿದರು. ಈ ವರೆಗೆ ಹಾರಾಡಿ, ಕುಣಿದಾಡಿದ ಆಯಾಸವನ್ನು ನೀಗಲೆಂಬಂತೆ ಅಲ್ಲಿ, ಇಲ್ಲಿ ಮರಗಳ ನೆರಳಿನಲ್ಲಿ, ಪೊದೆಗಳ ನಡುವಿನಲ್ಲಿ ಕುಳಿತು, ಮಲಗಿ ಮಂದಮಾರುತನಿಗೆ ಮೈಯೊಡ್ಡಿದರು.

ಬೇಟೆಯ ನಾಯಿಗಳೂ ಆಯಾಸದಿಂದ ಕೆನ್ನಾಲಗೆಯನ್ನು ಬಾಯಿಯಿಂದ ಉದ್ದಕ್ಕೆ ಇಳಿಬಿಟ್ಟು ತಾವೂ ವಿಶ್ರಾಂತಿಯನ್ನು ಪಡೆದವು.

ಸತ್ತುಬಿದ್ದಿದ್ದ ವನ್ಯಮೃಗ, ಪಕ್ಷಿಗಳನ್ನೆಲ್ಲ ಕೆಲವರು ಆರಿಸಿ ಒಂದೆಡೆ ಸೇರಿಸಿದರು; ಕೆಲವು ಆಗಲೇ ಇಹಲೋಕದ ಯೋಚನೆಯನ್ನು ಬಿಟ್ಟವುಗಳು; ಇನ್ನು ಕೆಲವು ಅರ್ಧಜೀವದಿಂದ ನರಳುವಂತಹವುಗಳು. ಬೇಡರಿಗೇನು ಗೊತ್ತು, ಅವುಗಳ ವೇದನೆಯ ಮರ್ಮ—ಎಲ್ಲವನ್ನು ಬೇಳದ ರಾಶಿಯಂತೆ ಒಂದೆಡೆ ಕೂಡಿಟ್ಟು ಒಳ್ಳೆ ಹತ್ತಾರು ಮೂಟೆಕಟ್ಟಿಕೊಂಡರು. ಆಯಾಸ ನೀಗಿದಾಗ, ಸೂರ್ಯನಬಿಸಿಲು ಪಶ್ಚಿಮಾಂಬುಧಿಯಲ್ಲಿ ಇಳಿದಾಗ, ಈ ತಂಡ ನಾಡಿನತ್ತ ಕೇಕೆ ಹಾಕುತ್ತ ಹೊರಟಿತು. ಪೊದೆಗಳಲ್ಲಿ ಅವಿತಿದ್ದ ಕೆಲ ಪ್ರಾಣಿಗಳು ಈ ಕೇಕೆಯನ್ನು ಕೇಳಿದಾಗ ಪಲಾಯನಕ್ಕೆ ಆರಂಭಿಸಿದವು; ಕೆಲ ಬೇಟೆನಾಯಿಗಳು ಬೊಗಳುತ್ತ ಅವುಗಳನ್ನು ಅಟ್ಟಿ ಓಡಿಸಲೆತ್ನಿಸುತ್ತಿದ್ದವು.

ಆಗಲೇ ಕತ್ತಲಾದುದರಿಂದ ಬೇಡರು ನಾಯಿಗಳನ್ನೆಲ್ಲ ಸಂಕಲೆಯಿಂದ ಬಂಧಿಸಿದ್ದರು. ಕಾಡನ್ನೇ ನಡುಗಿಸಿದ ಬೇಟೆಗಾರರ ತಂಡ ಸಂಭ್ರಮದಿಂದ ನಾಡು ಸೇರಿತು..! ಆ ಜನಕ್ಕೆಲ್ಲ ಅಂದು ವೈಭವದ ಸುಖಭೋಜನ!

[illegible]ನ ವಿರಹವೇದನೆ ಬೂದಿ ಮುಚ್ಚಿದ ಕೆಂಡದಂತೆ. ಒಳಗೆ ಕುದಿದು, ಕುದಿದು ಆತ್ಮವೆಲ್ಲ ಸುಟ್ಟು ಬೂದಿಯಾಗುವವರೆಗೆ, ವೇದನೆಯ ತಾಪ ಏರುತ್ತಲೇ ಇರುತ್ತದೆ.

ಕುಳಿತರೂ ನಿಂತರೂ ಪಲ್ಲಂಗದಲ್ಲಿ ಪವಡಿಸಿದರೂ ತಲೆಯಲ್ಲೆಲ್ಲ ನಳನ ರೂಪ — ಆತನದೇ ಕಲ್ಪನಾಚಿತ್ರ — ಬೇಡವೆಂದು ಕುಳಿತರೂ ಮನಸ್ಸಿನಲ್ಲಿ ಬೇರೆ ಯೋಚಿಸಲು ಅವಕಾಶವೇ ಇಲ್ಲ. ಜೊತೆಗೆ ಆಗಾಗ ಬಂದು ಕಾಡುವ ಸಖೀ ಜನರು. ಚಿಂತನೆಯ ಸುಳಿಯಲ್ಲಿ ಸಿಲುಕಿದ್ದಾಗ ಯೋಚನಾಭಂಗವಾಗುತ್ತದೆ; ಮನಸ್ಸು ಅಲ್ಲೋಲ ಕಲ್ಲೋಲ

ವಾಗುತ್ತದೆ; ದಮಯಂತಿಯ ಅಂಗಾಂಗಗಳಿಗೆಲ್ಲ ವಿರಹದ ಲೇಪನ ಮೆತ್ತಿಕೊಂಡಿತ್ತು.

ಏಕಾಂತ! ಏಕಾಂತವೊಂದೇ ಮನಸ್ಸನ್ನು ಶಾಂತಿಯಲ್ಲಿ ಅದ್ದಲು ಸರಿಯಾದ ಮಾರ್ಗವೆಂದು ದಮಯಂತಿ ಬಗೆದರೆ, ಆಕೆಗೆ ಅದಕ್ಕೆ ಅಸ್ಪದವೇ ಇರಲಿಲ್ಲ. ಕುಂಡಿನಪುರದ ಭೀಮನೃಪಾಲನ ಸುಕುಮಾರಿಯನ್ನು ಏಕಾಂಗಿಯಾಗಿ ಬಿಟ್ಟು ಸಖಿಯರು ದೂರವಿರಲು ಸಾಧ್ಯವೇ? ತಾನೇಕೆ ಒಬ್ಬ ಸಾಮಾನ್ಯ ಮನೆತನದಲ್ಲಿ ಹುಟ್ಟಲಿಲ್ಲ — ಎಂದು ಬಗೆದಳು ದಮಯಂತಿ. ರಾಜಕುಮಾರಿಯಾಗಿ ಹುಟ್ಟಿದ ತಪ್ಪಿಗೆ ಚಿಂತಿಸಲೂ ಸ್ವಾತಂತ್ರ್ಯವಿಲ್ಲ....

ಸಖಿಯರ ಒಂದು ಗುಂಪೇ ಆಕೆಯ ಸುತ್ತಲೂ ಬಂದು ಸೇರಿತ್ತು. ಮನಸ್ಸು ಮತ್ತಷ್ಟು ಕಸಿವಿಸಿಗೊಂಡಾಗ ದಮಯಂತಿ ಪ್ರಶ್ನಿಸಿದಳು—

"ನೀವೆಲ್ಲ ಏತಕ್ಕೆ ಬಂದಿರಿ!?"

"ಬರಬಾರದೇನು?"—ಒಬ್ಬಳ ಪ್ರಶ್ನೆ.

"ಈಗಲೇ ಏತಕ್ಕೆ ಅಂತಹ ಪ್ರಶ್ನೆ"—ಮತ್ತೊಬ್ಬಳ ಕೆಣಕುನುಡಿ.

"ಮತ್ತೆ ನೀವಿಬ್ಬರೇ ಇರಬಹುದು" — ನಗೆಯ ಬುಗ್ಗೆಯೊಂದಿಗೆ ಹೊರಟ ಮಾತು.

"ನೀವೆಲ್ಲ ನನ್ನನ್ನು ಏತಕ್ಕೆ ಈ ರೀತಿ ಹಿಂಸಿಸುತ್ತೀರಿ.... ನನ್ನನ್ನು ಬಿಟ್ಟುಬಿಡಿ, ನನ್ನನ್ನು ಬಿಟ್ಟುಬಿಡಿ" — ಏನೇನೋ ಅಂದಳು ದಮಯಂತಿ.

ಒಂದು ನಿಮಿಷ ನಿಶ್ಯಬ್ದ, ದೇವಿಯ ಮನಸ್ಸಿಗೆ ಹೆಚ್ಚಿನ ನೋವನ್ನುಂಟುಮಾಡುವುದು ಅವರಿಗಾರಿಗೂ ಇಷ್ಟವಿರಲಿಲ್ಲ. ಒಬ್ಬಾಕೆ ದೈನ್ಯತೆಯಿಂದ ನುಡಿದಳು.

"ಜಲಕೇಳಿಗೆ ಸಮಯ ದೇವಿ ಇದು....ಹೊರಡೋಣವೇ?"

"ದೇವಿಯರಿಗೆ ಅದೆಲ್ಲ ಈಗ ಮರೆತಂತಿದೆ...." — ಒಬ್ಬಾಕೆ ಅಂದಳು.

"ಇಲ್ಲ... ನಾನು ಮರೆತಿಲ್ಲ..." — ಗರಬಡಿದವಳಂತೆ ಅಂದಳು ದಮಯಂತಿ.

ಸಖಿಯರು ಒಬ್ಬೊಬ್ಬರಾಗಿ ಆಕೆಯ ಅಂಗಾಂಗಗಳನ್ನು ಸುಗಂಧ ಲೇಪನದಿಂದ ಸವರಿದರು; ಕೆಲವರು ಚಾಮರ ಬೀಸಿದರು. ಎಲ್ಲ ಮುಗಿದ ಬಳಿಕ ಅವರೆಲ್ಲ ಮತ್ತೆ ಮುಂದುವರಿಯುತ್ತಿದ್ದರು; ರಾಜಕುಮಾರಿಯ ಪರಿವಾರ ಉದ್ಯಾನದ ಸರೋವರದೆಡೆಗೆ ಸಾಗಿತು.

ಕೋಮಲೆ ದಮಯಂತಿ ಮುಂದೆ. ಮುಂದೆ ಬಿಡಿಬಿಟ್ಟಂತೆ ಹಿಂದೆ ಹಿಂದೆ ಆಕೆಯನ್ನು ಅನುಸರಿಸಿ ಬರುತ್ತಿದ್ದ ಸಖಿಯರು ಸಂತಸದ ಸಂಭ್ರಮದಲ್ಲಿ ಚೆಲ್ಲಾಟವಾಡುತ್ತಿದ್ದರು.

ಆ ಸರೋವರ ನಯನ ಮನೋಹರವಾಗಿತ್ತು: ಅಲ್ಲಿಯ ವಾತಾವರಣವೇ ಆಹ್ಲಾದಕರವಾಗಿತ್ತು — ಅಲ್ಲೆಲ್ಲ ಅರಳಿ ನಿಂತಿರುವ ಕಮಲದ ಹೂಗಳು: ಅತ್ತಿತ್ತ ತೇಲಾಡುವ ಹಂಸಗಳು: ಅಕ್ಕಪಕ್ಕದ ಹೂಬಳ್ಳಿಗಳ ಮರೆಯಲ್ಲಿ ಕುಳಿತು ಮಾತನಾಡುವ ಗಿಳಿಗಳು. ಗುಬ್ಬಚ್ಚಿ ಮೊದಲಾದ ಪಕ್ಷಿಸಂಕುಲ—ಮಾನಸ ಸರೋವರದಂತೆ ರಾರಾಜಿಸುತ್ತಿತ್ತು ಅದು!

ಜಲಕ್ರೀಡೆಯಲ್ಲಿ ಆಸಕ್ತರಾಗಿದ್ದ ಆ ಲಲನೆಯರು ಒಬ್ಬೊಬ್ಬರಾಗಿ ಸರೋವರಕ್ಕೆ ಧುಮುಕಿದರು. ಅತ್ತ ಇತ್ತ ಹೊರಳಾಡಿ ಮತ್ತೆ ದಮಯಂತಿಯನ್ನು ನೀರಿನ ಮಧ್ಯೆ ಕರೆತಂದರು. ಸುತ್ತಲೂ ಇವರ ಚೆಲ್ಲಾಟ — ಒಬ್ಬರಿಗೊಬ್ಬರು ನೀರು ತೇಕುವುದು, ಅಲ್ಲಲ್ಲಿ ಮುಳುಗಿ ಮರೆಯಾಗಿ ಮತ್ತೆ ಮತ್ತೊಬ್ಬಳ ಪಕ್ಕದಲ್ಲಿ ಒಮ್ಮೆಲೇ ಮೇಲೆದ್ದು ಆಕೆ ಬೆದರುವಂತೆ ಮಾಡುವುದು — ಯಾವುದೊಂದು ಪರಿವೆಯಿಲ್ಲದೆ, ಮದ ತುಂಬಿದ ಆ ಕನ್ನಿಕೆಯರು ನಲಿದಾಡಿದರು. ಜಲಕ್ರೀಡೆಯಲ್ಲಿ ಅಂದು ಮಾತ್ರ ಇಷ್ಟವಿಲ್ಲದೆ, ಸುಮ್ಮನೆ ನಿಂತಿರುವ ದಮಯಂತಿಯನ್ನು ಕಂಡು ಸಖಿಯರು, ಆಕೆಯನ್ನು ಜಲಕೇಳಿಯಲ್ಲಿ ಉದ್ರೇಕಗೊಳ್ಳುವಂತೆ ಮಾಡಿದರೂ ಪ್ರಯೋಜನವಾಗಲಿಲ್ಲ. ಆಕೆಯ ಮನಸ್ಸು ಚಿಂತಿಸುತ್ತಲೇ ಇತ್ತು. ಆ ತಟಾಕದ ತಟದಲ್ಲಿ ನಡೆದಾಡುವ ಹಂಸದಂಪತಿಗಳನ್ನು ಕಂಡಾಗ ದಮಯಂತಿಯ ಮನಸ್ಸು — ಎಲ್ಲಿಂದೆಲ್ಲಿಗೋ ಹೋಯಿತು.

ಮತ್ತೆ ಮತ್ತೆ ಹಂಸಗಳನ್ನೆ ನೋಡಿದಳವಳು.

ಆ ಎಲ್ಲ ಹಂಸಗಳಲ್ಲಿ ಮಿಗಿಲೆನಿಸುವಂತೆ ಹೊನ್ನ ಗರಿಗಳನ್ನು ಹೊಂದಿದ್ದ ರಾಜಹಂಸವೊಂದು ಒಂಟಿಯಾಗಿ ಅಲ್ಲಿ ನಿಂತಿತ್ತು. ದಮಯಂತಿಯಂತೆ ಅದು ಕೂಡಾ ಇತರ ಹಂಸಗಳ ಸರಸದಾಟವನ್ನು ಈಕ್ಷಿಸುತ್ತಿದೆಯೋ ಎನ್ನುವಂತೆ ಕಾಣಿಸುತ್ತಿತ್ತು. ಚಿತ್ರಪಟದಲ್ಲಿ ರಾರಾಜಿಸುವಂತೆ, ಬೀಸುತ್ತಿದ್ದ ತಂಗಾಳಿಗೆ ಕೂಡಾ ಅಲುಗಾಡದೆ, ನಿಂತಿದ್ದ ಆ ರಾಜಹಂಸ-ದಮಯಂತಿಯ ಅಂತಃಕರಣವನ್ನು ಕೆದಕಿ, ಕೆದಕಿ ಮತ್ತೆ ನೋಡುವಂತೆ ಮಾಡಿತು.

ಸಖಿಯರೆಲ್ಲ ಇದನ್ನು ಗಮನಿಸಿದ್ದರೂ ಅವರು ಜಲಕೇಳಿಯಲ್ಲಿ ಮಗ್ನರಾಗಿಯೇ ಇದ್ದರು. ದಮಯಂತಿ ಸರೋವರದ ಏರಿಯನ್ನು ಹತ್ತಿ ಮುಂದೆ ನಡೆದಳು. ಚಿತ್ರಪಟದಂತೆ ನಿಶ್ಚಲವಾಗಿ ನಿಂತಿದ್ದ ಹಂಸ ಕದಲಿತು. ನಿಧಾನವಾಗಿ ಒಂದೊಂದೇ ಹೆಜ್ಜೆಯನ್ನು ಎತ್ತಿ ಇಡುತ್ತಿದ್ದ ಆ ಹಂಸವನ್ನು ತಾನು ಈಗ ಹಿಡಿಯುತ್ತೇನೆ. ಇನ್ನೊಂದು ಗಳಿಗೆಯಲ್ಲಿ ಹಿಡಿಯುತ್ತೇನೆಂದು ಬಗೆದು ದಮಯಂತಿ ಆಗಾಗ ಬಾಗಿದಾಗ ಹಂಸ ತಪ್ಪಿಸಿಕೊಳ್ಳುತ್ತಿತ್ತು.

ಈ ರೀತಿಯ ನಾಟಕ ಆಡುವುದೇ ಆ ಹಂಸದ ಉದ್ದೇಶವೂ ಇರಬಹುದು. ದಮಯಂತಿಯನ್ನು ಬಳಲಿಸಿ, ಬಳಲಿಸಿ ಅಷ್ಟು ದೂರ ಕರೆದೊಯ್ದ ಮೇಲೆ ಹಂಸ ತಾನಾಗಿಯೇ ದಮಯಂತಿಯ ಕೈಯಲ್ಲಿ ಬಂಧಿಯಾಗಿತ್ತು.

"ಓಹ್, ಎಷ್ಟು ಸುಂದರವಾಗಿದೆ ಈ ಹಂಸ. ಕೊನೆಗೂ ನಾನು ಹಿಡಿದೇ ಬಿಟ್ಟೆನಲ್ಲ"—ಸಂತಸದ ನಗು ಆಕೆಯ ಮುಖದಲ್ಲಿ ಚಿಮ್ಮಿತ್ತು.

"ದಮಯಂತೀ, ನೀನು ನನ್ನನ್ನಂತು ಹಿಡಿದಿಡಲು ಸಾಧ್ಯ.... ನಾನು ನಳಮಹಾರಾಯನ ಪ್ರೀತಿಯ ವಸ್ತು; ನನ್ನನ್ನಾತ ಗೌರವದಿಂದ, ಅತ್ಯಾದರದಿಂದ ಸಾಕಿ, ಸಲಹಿದ್ದಾನೆ; ಆ ಕರುಣಾಮಯಿಯಾದ ಸ್ಫುರದ್ರೂಪಿ— ಸತ್ಯವಂತ, ನಿಷ್ಕಾಮವಂತ.... ನನ್ನ ಒಡೆಯ....; ನನ್ನ ಮಾತುಗಳನ್ನು ಆಲಿಸು ದಮಯಂತಿ! ಏತಕ್ಕೆ ಹಾಗೆ

ಹೋಗುತ್ತಿರುವೆ? ನಾನು ನಳಮಹಾರಾಜನ ಅರಮನೆಯ ವನದಲ್ಲಿ ಜೀವಿಸಬೇಕಾದವನು...."

ಹಂಸದ ವಾಗ್ವೈಖರಿ ದಮಯಂತಿಯನ್ನು ಮಂತ್ರಮುಗ್ಧಳನ್ನಾಗಿಸಿತ್ತು. ಈ ರಾಜಹಂಸ ಹೇಳುವ ಮಾತುಗಳೆಲ್ಲ ನಿಜವಾಗಿರಬಹುದೇ? ತನ್ನ ಅಂತರಂಗಕ್ಕೆ ಸೇರಿದ ವಿಷಯವನ್ನು ಈ ಹಂಸವೂ ತಿಳಿದಿರಲು ಸಾಧ್ಯವೇ? ನೈಷಧನ ಈ ವರ್ಣನೆಯನ್ನೆಲ್ಲ ಹಂಸವೊಂದು ಬಂದು ತನ್ನಲ್ಲಿ ಹೇಳುವ ಉದ್ದೇಶವಾದರೂ ಏನಿರಬಹುದು....!?– ಚಿಂತಿಸಿ, ಚಿಂತಿಸಿ ಬಳಲಿದಳು ದಮಯಂತಿ. ಹೃದಯದಾಳದಲ್ಲಿ ಸುಪ್ತವಾಗಿದ್ದ ಬಯಕೆ ಮತ್ತೆ ಗರಿಗೆದರು ಹಾರತೊಡಗಿತು. ಮತ್ತೆ ಕೇಳಿದಳಾಕೆ—

"ಹಂಸರಾಜ, ಯಾವ ನೈಷಧ!? ನೀನೆಲ್ಲಿಂದ ಬಂದೆ!!? ಇಲ್ಲಿಗೆ ಬಂದು ಈ ವಿಚಾರವನ್ನೆಲ್ಲ ನೀನು ಹೇಳಿದೆಯಲ್ಲ....? ಮತ್ತೊಮ್ಮೆ ಸರಿಯಾಗಿ ಅದನ್ನು ಹೇಳಲಾರೆಯಾ ಹಂಸರಾಜ....?"

"ಹಾಗಾದರೆ ನಾನು ಹೇಳಿದ ವಿಚಾರ ನಿನಗೆ ಅರ್ಥವಾಗಲಿಲ್ಲ...." ....ಕೇಕೆ ನುಡಿಯಿತು ಹಂಸ.

"ಇಲ್ಲ ಹಂಸರಾಜ.... ದಯೆಯಿಟ್ಟು ಮತ್ತೊಮ್ಮೆ ಹೇಳಲಾರೆಯಾ...."

"ನಿಷಧದೇಶದ ಮಹಾವೀರಸೇನನ ಸುಪುತ್ರ, ರಣಧೀರ ಸಾರ್ವಭೌಮ, ಸದ್ಗುಣವಂತ, ಸಾಧು-ಸಜ್ಜನಗಳ ಸಂರಕ್ಷಣೆಯೇ ಉದ್ದೇಶವಾಗಿರುವಾತ, ನೀತಿ ಸಾಮ್ರಾಟ, ಭೂಪಾಲಾಗ್ರಣಿ, ಎಲ್ಲರ ಬಾಯಿಯಿಂದಲೂ ಹೊಗಳಿಕೆಗೆ ಪಾತ್ರನಾದ ನೈಷಧರಾಜ! ಆ ರಾಜಾಧಿರಾಜನ ವಿಚಾರವನ್ನೇ ನಾನಿಂದು ನಿನಗೆ ಹೇಳಿದ್ದು. ತ್ರಿಭುವನ ಸುಂದರಿ! ಇದು ಸತ್ಯ."

"ಹ್ಞಾಂ...."... ದಮಯಂತಿಯ ಉದ್ಗಾರ.

"ಯಾಕೆ, ಆಶ್ಚರ್ಯವಾಯಿತೇ? ನಿನ್ನ ಅಂದ, ಸೌಂದರ್ಯವನ್ನೆಲ್ಲ ಕೇಳಿ ಬಲ್ಲ ಆತನೆನಗೆ ಪರಮಮಿತ್ರ! ನನ್ನ ಮಾತನ್ನು ನಂಬು ಕಮಲನಯನೆ...."

ಹಂಸದ ಮಾತುಗಳನ್ನು ಕೇಳುತ್ತ, ಭಾವಪರವಶಳಾದ ದಮಯಂತಿ ಮತ್ತೆ ಮತ್ತೆ, ಹಂಸವನ್ನು ಒತ್ತಾಯಿಸಿ, ಹೆಚ್ಚಿನ ವಿವರಗಳನ್ನು ಕೇಳಲು ಉತ್ಸುಕಳಾಗಿದ್ದಳು.

ಹಂಸ ನಳರಾಯನ ಪ್ರಶಂಸೆಯನ್ನು ಮತ್ತೆ ಮುಂದುವರಿಸಿತು.

"ಭುವನಮಂಡಲದಲ್ಲಿ ಸಜ್ಜನರನ್ನು ರಕ್ಷಿಸಿ, ದುಷ್ಟರನ್ನು ಶಿಕ್ಷಿಸಿ ತನ್ನ ಗುಣ ವಿಶೇಷದಿಂದಲೇ ಕೀರ್ತಿವೆತ್ತ ನಳಮಹಾರಾಜ ಸಾಮಾನ್ಯ ನೆಂದು ತಿಳಿದೆಯಾ ... ! "

"ಹೇಳು ರಾಜಹಂಸ.... ಆ ಮಹಾನುಭಾವನ ವಿಚಾರ ಮತ್ತಷ್ಟು ಹೇಳು ... "

"ದಮಯಂತೀ, ಆ ನಳನೃಪ, ನಿನ್ನ ಗುಣ ಪ್ರಖ್ಯಾತಿಯೆಲ್ಲವನ್ನು ಹಲವು ಮುಖಗಳಿಂದ ಕೇಳಿ ಒಲ್ಲ. ಅಷ್ಟರಿಂದಲೇ ಮೆಚ್ಚಿಕೊಂಡು, ಆ ಸೌಂದರ್ಯದ ಖಣಿಯನ್ನು ನೋಡಿಕೊಂಡು ಬಾ ಎಂದು, ನನ್ನನ್ನಿಲ್ಲಿಗೆ ಅಟ್ಟಿದ, ಆ ಪ್ರಭು.... "

"ಆ ರಾಜಾಧಿರಾಜರೇ ನಿನ್ನನ್ನು ನನ್ನಲ್ಲಿಗೆ ಕಳುಹಿಸಿದರೇ ?

"ಅಹುದು ದಮಯಂತೀ.... ನಿನ್ನ ಹೆಸರು ಎಲ್ಲ ದೇಶಗಳಿಗೆ ಜ್ಯೋತಿಯಂತೆ ಹೇಗೆ ಹರಡಿಹುದೋ, ಅಂತೆಯೇ, ನಳನ ಕೀರ್ತಿಯೂ ದೇಶವಿದೇಶಗಳಲ್ಲಿ ಹರಡಿದೆ. ನೀವಿಬ್ಬರೂ ಒಂದುಗೂಡಲು ಅರ್ಹ ರೆಂದು ಬಗೆದೇ ನಾನಿಲ್ಲಿಗೆ ಬಂದೆ, ಅಬ್ಜದಳಾಕ್ಷಿ.... "

"ಓ ಎನ್ನ ದೇವತೆ.... ಹಂಸರಾಜ.... ನಿನ್ನಿಂದ ನನಗಿಂದು ಮಹ ದುಪಕಾರವಾಯ್ತು. ನಳರಾಯರು ಸುಖದಿಂದಿರುವರೇ ? "

"ಆ ಸುಖವನ್ನು ಏನೆಂದು ಬಣ್ಣಿಸಲಿ ದಮಯಂತಿ.... ವಿರಹದ ಅಗ್ನಿಯಿಂದ ಬಾಧಿತನಾದವನಾಗಿ, ಅದರಿಂದ ಶಾಂತಿಯನ್ನು ಹೊಂದ ಲೋ ಎಂಬಂತೆ ಮೃಗಯಾವಿಹಾರಿಯಾಗಿ ಹೊರಟಿದ್ದಾನೆ.... ಆದರೂ ಆತನ ಮನಸ್ಸು ಪ್ರಸನ್ನವಾಗಲಿಲ್ಲ.... ನಿನ್ನನ್ನು ಹೊಂದದೆ ಅದು ಸಾಧ್ಯವೂ ಇಲ್ಲ.... "

"ಓಹ್, ಎಷ್ಟೊಂದು ಕಷ್ಟಪಡುತ್ತಿದ್ದಾರೆ ಆ ನನ್ನ ದೊರೆ.... ! ಹೇಳು ಹಂಸ ಸದಾ ಆತ ನನ್ನ ಹೆಸರನ್ನು ಹೇಳಿ, ದಮಯಂತಿಯೆಂಬುವ ಳಾರೆಂದು ಪ್ರಶ್ನಿಸುವರೇ?"

"ಅದನ್ನು ಏನೆಂದು ಬಣ್ಣಿಸಲಿ ದಮಯಂತಿ... ನಳರಾಯನ ಹೃದಯ ಮಂದಿರದಲ್ಲಿ ನೀನೇ ಮೂರ್ತೀಭವಿಸಿ ನಿಂತಿದ್ದೀಯಾ...."

"ಹೂಂ... ಹೇಳು ಹಂಸರಾಜ. ನಿನ್ನ ಮಾತುಗಳನ್ನು ಕೇಳಲು ನನ್ನ ಕಿವಿಯೇ ಏಕೆ, ಅಂಗಾಂಗಗಳೂ ಕಿವಿಗಳಾಗಿವೆ. ಹೇಳು.... ನನ್ನ ಮನ ತಣಿಯುವಂತೆ, ಆ ನನ್ನವರ ವಿಚಾರ ಹೇಳು ಹಂಸರಾಜ..."

"ದಮಯಂತೀ....ನಳ. ರಾಜಾಧಿರಾಜ.... ಆತನಿಗೆ ಯಾವುದಕ್ಕೆ ಕೊರತೆಯಿದೆ ಹೇಳು.... ಆತನ ದೇಶದಲ್ಲಿ ಸೌಂದರ್ಯವತಿಯರಿಗೆ ಏನು ಕಡಿಮೆ ಹೇಳು.... ಆ ಮಹಾಪರಾಕ್ರಮಿ ಬಯಸಿದೊಡೆ 'ತಾ ಮುಂದು' ಎಂದು ಬರುವ ರಾಜಕುಮಾರಿಯರ ಸಂಖ್ಯೆ ಒಂದೇ, ಎರಡೇ.... ! ಅಂತಿರುವಾಗ, ಆತನ ಹೃದಯವನ್ನೆಲ್ಲ ನೀನೇ ಆವರಿಸಿದ್ದೀಯಾ.... ನೀನಲ್ಲದೆ ಅನ್ಯರನ್ನು ಬಳಿ ಅಶಿಸಲಾರ.... ನೀನೇ ಆತನ ಆರಾಧ್ಯದೇವತೆ ದಮಯಂತಿ...."

—ಹಂಸದ ನುಡಿಮುತ್ತುಗಳು ಮನ್ಮಥನ ಪುಷ್ಪಶರದಂತೆ ಒಂದೊಂದಾಗಿ ಬಂದು ದಮಯಂತಿಯ ಅಂಗಾಂಗಗಳನ್ನು ಚುಚ್ಚಿದವು. ಕಾಮಬೇಗೆಯನ್ನು ತಾಳಲಾರದೆ ದಮಯಂತಿ, ಬೋಧಹೀನಳಾಗಿ ಅಲ್ಲೆ, ನೆಲದಲ್ಲಿ ಒರಗಿದಳು. ಹಂಸವೇ ಆಕೆಯನ್ನು ಸಂತೈಸಿ ಚೇತರಿಸುವಂತೆ ಮಾಡಿತು. ಹಂಸಕ್ಕೆ ತನ್ನ ಉದ್ದೇಶ ಸಾಧನೆಯಾದ ಬಗೆಗೆ ಸಂತಸ: ದಮಯಂತಿಯನ್ನು ಅಗಲಿ, ನಳಮಹಾರಾಯನಿಗೆ ನಡೆದುದೆಲ್ಲವನ್ನು ವರ್ಣಿಸಲು, ತವಕದಿಂದ, ನಲಿನಲಿಯುತ್ತ ನಿಷಧದೆಡೆಕ್ಕೆ ತೆರಳಿತು.

ಅತ್ತ ಹಂಸ ಹೋದ ದಿಕ್ಕನ್ನೇ ನೋಡುತ್ತಿದ್ದ ದಮಯಂತಿಯ ಮನಸ್ಸಿನಲ್ಲಿ ಅವ್ಯಕ್ತಭೀತಿ ಮನೆಮಾಡಿತು. ಹೊನ್ನಹಂಸ ನಳರಾಯನಿಗೆ, ಏನು ಹೇಳುವುದೋ. ಅದಕ್ಕೆ ನಳನೇನೆಂದು ಉತ್ತರಿಸುವನೋ, ತನ್ನ ಜನ್ಮಾಂತರದ ಕರ್ಮಫಲ ಏನೆನ್ನುವುದೋ, ಆ ನನ್ನ ತಂದೆ ಇದನ್ನೆಲ್ಲ

ತಿಳಿವರೆ ಏನನ್ನುವನೋ.... — ಒಂದೂ ಅರಿಯದವಳಂತೆ ಹಲವು ಚಿಂತೆಗಳ ನಡುವೆ ತೊಳಲಾಡುತ್ತಿದ್ದ ದಮಯಂತಿ, ತನ್ನ ಅಂತಃಪುರಕ್ಕೆ ನಡೆದಳು.

"ನಳನೆನ್ನ ಬಗೆದಿಹನೋ, ಕರುಣೆಯಿಂದ ನನ್ನ ವರಿಸುವನೋ" ಈ ಆತುರ ಆಕೆಗೆ ಎಲ್ಲವನ್ನು ಮರೆಯುವಂತೆ ಮಾಡಿತು. ಹೊಟ್ಟೆಗೆ ಸರಿಯಾಗಿ ಆಹಾರವನ್ನು ಸೇವಿಸದೆ, ತನ್ನಂತಃಪುರದಲ್ಲಿ ಮಾತುಬಾರದೆ, ಮುಖವನ್ನು ಮರೆಸಿ, ಲಜ್ಜೆಯಿಂದ ಕುಳಿತು ಯೋಚಿಸಿದ ದಮಯಂತಿಯ ಮನಸ್ಸಿಗೆ ನೋವುಂಟಾಗಬಾರದೆಂಬಂತೆ ಪರಿಚಾರಿಕೆಯರು ಆಕೆಯನ್ನು ಹಿಂಬಾಲಿಸಿ ಹಿಂಬಾಲಿಸಿ ಹೊನ್ನ ಬೀಸಣಿಕೆಯಿಂದ ಗಾಳಿ ಬೀಸುತ್ತಿದ್ದರು.

ದೂರದಲ್ಲಿ ಅವಿತು, ದಮಯಂತಿಯ ವಿರಹವನ್ನು ಕಂಡು, ಆಕೆ ಬಳಲಿ ಬೆಂಡಾಗಿರುವುದನ್ನು ತಿಳಿದ ಮನ್ಮಥನಿಗೆ — ತಾನಿನ್ನು ಪುಷ್ಪಶರದಿಂದ ಆಕೆಯ ಅಂಗಾಂಗಗಳನ್ನು ಬೇಧಿಸಿದೆನೇ ಆದರೆ, ಆ ಶರಗಳು ವಿರಹತಾಪದಿಂದ ಮುರುಟಿಹೋಗುವವೋ ಎಂಬ ಭಯ!

ಕುಳಿತಲ್ಲಿ ಕುಳ್ಳಿರದೆ, ಅಂತಃಪುರದೊಳಗಿಡೀ ಸುತ್ತಾಡಿ, ಸುತ್ತಾಡಿ ಬೇಸತ್ತು; ಮತ್ತೆ ನಡೆಯಲಾರದೆ, ನಿಲ್ಲಲಾರದೆ ಪಲ್ಲಂಗದಲ್ಲಿ ಪವಡಿಸಿದಲ್ಲೇ ಪವಡಿಸಿ; ತನ್ನಿನಿಯನ ಚಿಂತೆಯಲ್ಲಿ ರೋಗಗ್ರಸ್ತಳಂತೆ ಕಾಣಿಸುವ ದಮಯಂತಿಯ ಬಗೆಗೆ ಪರಿಚಾರಿಕೆಯರು ಭಯಗೊಂಡು ಕಂಚುಕಿಯ ಮೂಲಕ ಈ ವಿಚಾರವನ್ನು ರಾಜಾಧಿರಾಜ ಭೀಮಸೇನನಿಗೆ ತಿಳಿಸಿದರು.

ತನ್ನ ಸುಕುಮಾರಿಯ ದುಃಸ್ಥಿತಿಯನ್ನು ನೆನೆದು, ನೆನೆದು ಆತುರದಿಂದ ನೋಡಲೆಂದು ಬಂದ ಭೀಮರಾಜ—

"ಯಾಕಿಂತು ಬಡವಾದೆ ಮಗಳೇ?"—ಎಂದು ಮರುಗಿದ.

ದಮಯಂತಿ ಉತ್ತರಿಸುವ ಸ್ಥಿತಿಯಲ್ಲಿರಲಿಲ್ಲ.

ಸುತೆಯನ್ನು ಯಾವುದೋ ಬಲವಾದ ರೋಗವೊಂದು ಕಾಡುತ್ತಿದೆ ಎಂದು ಬಗೆದು ಭೀಮನೃಪಾಲ, ಅದಾನ – ನಿದಾನರೇ ಮೊದಲಾದ ವೈದ್ಯೋತ್ತಮರನ್ನು ಕರೆಸಿ, ದಮಯಂತಿಯ ರೋಗವನ್ನು ಗುಣಪಡಿಸಬೇಕೆಂದು ಕೇಳಿಕೊಂಡ.

ಮಹಾರಾಜನ ಕೋರಿಕೆಯನ್ನು ಮನ್ನಿಸಿ ಬಂದ ನೂರಾರು ಜನ ವೈದ್ಯೋತ್ತಮರು, ಆಕೆಯ ರೋಗವಾವುದೆಂದು ಪತ್ತೆಹಚ್ಚಲಾರದೆ ಹೋದರು. ಕೊನೆಗೆ ಅವರಲ್ಲೊಬ್ಬರು ಇಂತೆಂದರು:

"ಮಹಾರಾಜ.... ದಮಯಂತಿಯನ್ನು ಯಾವುದೇ ರೋಗ ಬಾಧಿಸಿಲ್ಲ. ಆಕೆ ಯೌವನಭರಿತೆ. ವಯಸ್ಸಿಗೆ ತಕ್ಕಂತೆ ಆಕೆಯಲ್ಲಿ ಮನೋವಿಕಾರವುಂಟಾಗಿದೆ....ಅದನ್ನು ಶಮನಿಸುವ ಮಾರ್ಗವನ್ನು ನೀನೇ ಹುಡುಕಬೇಕು ಮಹಾರಾಜ...."

ಅವರ ನುಡಿಯನ್ನು ಕೇಳಿದ ಭೀಮರಾಜ ತನ್ನೊಳಗೇ ಸಂತಸ ಪಡುತ್ತ ವೈದ್ಯರನ್ನು ಯಥೋಚಿತ ಗೌರವಿಸಿ, ಕಳುಹಿಸಿದ; ಪ್ರಾಯ ಪ್ರಬುದ್ಧಳಾದ ದಮಯಂತಿಯ ಸ್ವಯಂವರವನ್ನು ಆದಷ್ಟು ಬೇಗ ನಡೆಸುವುದು ತನ್ನ ಕರ್ತವ್ಯ—ಎಂದು ಬಗೆದ ಆ ನೃಪಾಲ.

ಹಂಸವದೇಕೆ ಇನ್ನೂ ಬಂದಿಲ್ಲ... ತಾನು ವನಾಂತರಕ್ಕೆ ಹೋಗಿ ಬೇಟೆಯಾಡಿದ್ದು; ಸರೋಜವನದಲ್ಲಿ ಹೊನ್ನಹಂಸವನ್ನು ಕಂಡುದು; ಅದು ತನ್ನ ಅಂತಃಕರಣವನ್ನು ಕದ್ದುದು; ಅದನ್ನು ಹಿಡಿದೊಡನೆಯೇ ಅದು ದಮಯಂತಿಯ ವೃತ್ತಾಂತವನ್ನು ಅರುಹಿದ್ದು .... ಇವೆಲ್ಲ ಏಕೆ....! ಏಕೆ....! ? — ನಳರಾಯನ ಚಿಂತನೆಗೆ ಕೊನೆಯೇ ಇಲ್ಲ. ಎಲ್ಲ ಒಂದು ಕನಸಿನಲ್ಲಿ ನಡೆದಂತೆ.... ನೆನೆಸಿದರೂ ನಿಜವೆಂದು ನಂಬಲಾಗದ, ಹೇಳಿದರೂ ಮತ್ತೊಬ್ಬರು ಅರ್ಥಮಾಡಿಕೊಳ್ಳಲು ಅಸಾಧ್ಯವಾದ ಈ ಪ್ರಸಂಗವೆಷ್ಟು ಅದ್ಭುತ! ತೀರಾ ಅಸಹಜವೆನಿಸಿದರೂ ಸತ್ಯ!

ತಮ್ಮೊಡೆಯ ಬೇಟೆಯ ಉತ್ಸಾಹವನ್ನು ಅರ್ಧದಿಂದಲೇ ಕೈಬಿಟ್ಟುದರಿಂದ ಬೇಟೆಗಾರರೂ ರಾಜಧಾನಿಯತ್ತ ಹಿಂತಿರುಗಿ ಬಂದು ಸುಖಭೋಜನ ಮುಗಿಸಿ, ಸುಖದ ಕನಸನ್ನು ಕಾಣುತ್ತಿದ್ದರು.

ವಚನವಿತ್ತು ದಮಯಂತಿಯಲ್ಲಿಗೆ ಹೋಗಿದ್ದ ಹೊನ್ನಹಂಸ ಈಗ ಬರಬಹುದು.... ಇನ್ನೊಂದು ಗಳಿಗೆಯಲ್ಲಿ ಬರಬಹುದು ಎಂಬ ಉತ್ಸುಕತೆ

ಯಿಂದ ಅದರ ಬರವನ್ನೇ ಎದುರುನೋಡತೊಡಗಿದ ನಳಮಹಾರಾಜ. ಆದರೆ ಹಂಸವೆಲ್ಲಿ!? ಅದರ ಸುಳಿವೇ ಇಲ್ಲ....

ಸಂಶಯದ ಛಾಯೆ, ಆಗೊಮ್ಮೆ ಈಗೊಮ್ಮೆ ಮನದ ಮೂಲೆಯಲ್ಲಿ ಸುಳಿದು ಮಾಯವಾಗದಿರಲಿಲ್ಲ. ಹಂಸ ತನ್ನ ಆತ್ಮರಕ್ಷಣೆಗಾಗಿ ತನ್ನಲ್ಲಿ ಸುಳ್ಳು ಹೇಳಿ, ನಾಟಕ ಹೂಡಿ, ತನ್ನ ಕೈಯಿಂದ ತಪ್ಪಿಸಿಕೊಂಡಿತೋ....!? ಛೇ ಇಲ್ಲ. ಖಂಡಿತಾ ಇಲ್ಲ — ಅನ್ನುತ್ತಿತ್ತು ಮನಸ್ಸಿನ ಇನ್ನೊಂದು ಮುಖ. ಹಂಸ ಖಂಡಿತಾ ಈಗ ಬರಬಹುದು!

ದಮಯಂತಿಯೇನಾದರೂ 'ನಾ ನಳನನ್ನೊಲ್ಲೆ' ಯೆಂದುಬಿಟ್ಟಳೇ....!? ಹಂಸ ಬೇಸರದಿಂದ ತನಗೆ ಹೇಗೆ ಮುಖ ತೋರಿಸಲಿ —ಎಂಬ ಬೇಸರದಿಂದ ಹಿಂದಿರುಗಿ ಬಾರದೇ ಇರಬಹುದೆ? ತಾನು ರಾಜಾಧಿರಾಜ ನಿಜ; ಆದರೆ ಭುವನಸುಂದರಿಯಾದ ದಮಯಂತಿಯ ಪಾಲಿಗೆ ತುಚ್ಛನಾಗಲೂ ಬಹುದಲ್ಲ....!

—ನಿಂತಲ್ಲಿ ನಿಲ್ಲದೆ, ಒಂದೆಡೆ ಕುಳಿತಿರದೆ ಶತಪಥ ಹಾಕುತ್ತಿದ್ದ ನಳರಾಯನಿಗೆ ಇಹದ ಪರಿವೆಯೇ ಇರಲಿಲ್ಲ. ಮನಸ್ಸು ಅಲ್ಲೋಲ ಕಲ್ಲೋಲವಾದಾಗ, ನಯನಗಳು ಹಂಸದ ಬರವನ್ನು ಪ್ರತೀಕ್ಷಿಸುತ್ತಿದ್ದವು. ಯಾವ ಹಂಸವೇ ಬರಲಿ, ಅವು ಹೊನ್ನಹಂಸದಂತೆಯೇ ಕಾಣಿಸುತ್ತಿದ್ದವು ನಳರಾಯನಿಗೆ.

ಅರಮನೆಯ ಉದ್ಯಾನದಲ್ಲಿ ಎಷ್ಟೊಂದು ಹಂಸಗಳಿಲ್ಲ. ಅವುಗಳಲ್ಲೊಂದು, ಆ ಹೊನ್ನಹಂಸವಾಗಬಾರದೇಕೆ.... ತನ್ನ ಮನಸ್ಸಿಗೆ ಶಾಂತಿ ನೀಡಬಲ್ಲ ವಾರ್ತೆಯನ್ನು ಹೇಳಿ ತನ್ನ ಅಂತಃಕರಣವನ್ನು ಹಗುರಪಡಿಸಬಾರದೇಕೆ....? — ನಳ ಚಿಂತಿಸಿದಷ್ಟು ಸಮಯ ದೀರ್ಘವಾಗುತ್ತಿತ್ತು. ಆದರೂ ಕತ್ತಲು ಆವರಿಸುವ ಸೂಚನೆ, ಸೂರ್ಯ ಪಶ್ಚಿಮಾಂಬುಧಿಯಲ್ಲಿ ಮರೆಯಾಗಲು ಇನ್ನೇನು ಒಂದು ಗಳಿಗೆ!

ಆ ಕತ್ತಲೆಯಲ್ಲಿ ಹಂಸ ಬರುವುದಾದರೂ ಹೇಗೆ; ಬಂದು ವಿಚಾರವನ್ನೆಲ್ಲ ತಿಳಿಸುವುದಾದರೂ ಹೇಗೆ? — ನಳ ಸುತ್ತ ನೋಡುತ್ತಿದ್ದಂತೆ ದೂರದಲ್ಲೊಂದು ಹಂಸ ವೇಗವಾಗಿ ಬರುತ್ತಿತ್ತು. ನಳ ನೋಡಿದ,

ಅದು ಅದೇ ಹೊನ್ನ ಹಂಸ...ದಿಗ್ವಿಜಯಕ್ಕೆ ಹೋಗಿದ್ದ ಶೂರ ಭೂಪಾಲಕನಂತೆ ಹೆಮ್ಮೆಯಿಂದ ತಲೆಯೆತ್ತಿ ಬರುತ್ತಿತ್ತು. ಅದರ ನಡಿಗೆಯಲ್ಲಿ ಸೌಂದರ್ಯವಿತ್ತು—ವಿಜಯದ ಸಂಕೇತವಿತ್ತು!

"ಬಾ ಹಂಸ.... ಬಾ.... ನನ್ನ ಅಂತರಂಗವನ್ನು ಬೆಳಗುವ ವಾರ್ತೆಯನ್ನು ತಿಳಿಯ ಹೇಳು...."

— ಉತ್ಸುಕತೆಯಿಂದ ಹಂಸವನ್ನು ಸ್ವಾಗತಿಸಿದ ನಳರಾಜ. ಹಾರಿ ಬಂದಿದ್ದ ಹಂಸದ ಬೆನ್ನನ್ನು ತಡವಿ, ಕೆದರಿದ ಗರಿಗಳಿಗೆ ನೋವಾಗದಂತೆ ಸವರಿದ. ಬಳಲಿಕೆಯನ್ನು ಹೊಂದಿದ್ದರೂ ಹಂಸ ತಾನು ಎಸಗಿದ ಮಹತ್ಕಾರ್ಯವನ್ನು ನಳರಾಯನಿಗೆ ಅರುಹಿತು : ಆತನ ಮೈಯೆಲ್ಲ ಕಿವಿಯಾಗಿತ್ತು.

"ನಿನ್ನ ಬೇಸರಿಕೆಯನ್ನು ಬಿಡು ಮಹಾರಾಜ... ದಮಯಂತಿ ಇನ್ನು ನಿನ್ನವಳು. ನಿನ್ನ ಇಷ್ಟಾರ್ಥ ಸಿದ್ಧಿಸಿತೆಂದು ತಿಳಿ. ನಿನ್ನನ್ನಲ್ಲದೆ ಅನ್ಯರೆಡೆಗೆ ಆ ವಧು ಎಂದಿಗೂ ಮನಸ್ಸು ಮಾಡಳು .. ಇದು ನಿಶ್ಚಿತ!"

"ನೀನು ಹೇಳುತ್ತಿರುವುದು ನಿಜವೇ ಹಂಸರಾಜ.... ನಿನ್ನನ್ನು ನಾನು ಏನೆಂದು ಗೌರವಿಸಲಿ .. ನಿನ್ನ ಉಪಕಾರಕ್ಕೆ ಯಾವ ರೀತಿಯ ಪ್ರತ್ಯುಪಕಾರ ಮಾಡಲಿ... ನಾನು ನಿನಗೆ ಸದಾ ಕೃತಜ್ಞ! ಹಂಸರಾಜ.... ನೀನು ನನ್ನ ಪಾಲಿನ ದೇವತೆ..."

"ಇದೇನು ವತ್ಸ.... ನಿನ್ನ ಮಾತಿನ ಅರ್ಥ ನನಗಾಗುತ್ತಿಲ್ಲವಲ್ಲ....! ನೀನು ನನ್ನ ಪ್ರಾಣವನ್ನು ಉಳಿಸಿದೆ. ನನ್ನವರು ನನ್ನ ಸಾವಿನಿಂದ ದುಃಖಿತರಾಗುವುದನ್ನು ತಪ್ಪಿಸಿದೆ. ಅದಕ್ಕೆ ಪ್ರತ್ಯುಪಕಾರವಾಗಿ ನಾನು ನಿನಗೆ ಈ ಕಿರು ಸಹಾಯವನ್ನು ಮಾಡಿದೆ—ಅಷ್ಟೇ!"

"ನೀನು ಮಹಾಜ್ಞಾನಿ ರಾಜಹಂಸ.... ನಿನ್ನ ಸೃಷ್ಟಿಯೇ ಹೇ ಅಲೌಕಿಕವೇ.... ನಿನ್ನ ಜ್ಞಾನವೂ ಅಷ್ಟೇ ಅತೀತವಾದುದು.... ನೀನು ನಿಜವಾಗಿಯೂ ದೇವ ಸಂಭೂತ...!"

"ನಳರಾಯ.... ಮಾತಿನಲ್ಲೇ ಸಮಯವಡಗುತ್ತಿದೆ. ದಮಯಂತಿ ಇನ್ನು ನಿನ್ನವಳು ಎಂಬ ವಿಚಾರದಲ್ಲಿ ಯಾವ ಶಂಕೆಯೂ ಬೇಡ

ನನ್ನ ಕಾರ್ಯಭಾರ ಇಲ್ಲಿಗೆ ಮುಗಿಯಿತು.... ನನ್ನನ್ನು ಬೀಳ್ಕೊಡು ಮಹಾರಾಜಾ...."

"ನಿನಗೆ ಶುಭವಾಗಲಿ"

— ಹಂಸವನ್ನು ಹರಸಿದ ನಳರಾಯ. ನಲಿಯುತ್ತ, ನಲಿಯುತ್ತ ಹಂಸ ಹೊರಟಿತು. ಕಣ್ಣಿಗೆ ಕಾಣಿಸುವಷ್ಟು ದೂರದ ವರೆಗೆ ಆ ಹೊನ್ನ ಹಂಸದ ಸೌಂದರ್ಯವನ್ನು ಸವಿದ ನಳರಾಯ.

ಎಲ್ಲೆಲ್ಲೂ ನಿಶೆ ಆವರಿಸಿದ್ದಳು. ಈ ಇರುಳೇ ತಮ್ಮ ನಿವಾಸ ಸ್ಥಾನವೆಂಬಂತೆ, ಅಸುರ ಸೇನೆ ನಿಷಧದೇಶವನ್ನೆಲ್ಲ ಆಕ್ರಮಿಸಿತೋ ಎಂದೆನಿಸುವಂತೆ, ಒಮ್ಮಿಂದೊಮ್ಮೆಲೇ ಕತ್ತಲೆ ಆವರಿಸಿತು. ಅಂತರಂಗ ಬಹಿರಂಗಗಳಲ್ಲಿ ಒಮ್ಮಿಂದೊಮ್ಮೆಲೇ ಆವರಿಸಿದ ಕತ್ತಲೆಯನ್ನು ತೂರಿ ಆಗತಾನೇ ಉದಿಸಿದ ಹಿಮಕರ, ತನ್ನ ಮಂದ ಪ್ರಕಾಶವನ್ನು ಎಲ್ಲೆಡೆಯೂ ಬೀರಿದ್ದ.

ನಳ ತನ್ನ ಅಂತಃಪುರವನ್ನು ಸೇರಿದರೂ ಮನಸ್ಸು ಮಾತ್ರ ದಮಯಂತಿಯನ್ನೇ ಕನಸು ಕಾಣುತ್ತಿತ್ತು. ಹೊರಗೆಲ್ಲ ಬೆಳ್ದಿಂಗಳು ಪಸರಿಸಿದ್ದರೂ, ನಡು ಮಧ್ಯಾಹ್ನದ ಬಿಸಿಲಿನಂತೆ, ಅಂತಃಪುರದ ಒಳಗೆ ಪಲ್ಲಂಗದಲ್ಲಿ ಒರಗಿದ್ದ ನಳರಾಯನ ಅಂಗಾಂಗಗಳೆಲ್ಲ ಸುಡಹತ್ತಿದವು. ಮದನನ ಪುಷ್ಪಶರ, ದಮಯಂತಿಯ ವಿರಹವನ್ನು ಎದೆಯಲ್ಲೆಲ್ಲ ಚುಚ್ಚಿದಾಗ ಉಂಟಾದ ಆ ತಾಪದ ಉರಿ ಸಾಮಾನ್ಯವೇ!?

ದಮಯಂತಿಯ ಸ್ವಯಂವರ ......

ತರುಣೀರತ್ನ, ಯೌವನಕಳಾಸಂಪನ್ನೆ, ಲಾವಣ್ಯಮಯಿಯಾದ ತನ್ನ ಕುವರಿಯನ್ನು ಅತ್ಯಂತ ವಾತ್ಸಲ್ಯದಿಂದ ಸಲಹಿದ್ದ ಭೀಮಸೇನ ನೃಪಾಲ. ಆಕೆಯ ಸ್ವಯಂವರವನ್ನು ಅತುಲ ವೈಭವದಲ್ಲಿಯೇ ನೆರವೇರಿಸಬೇಕೆಂಬುದು ಆತನ ಇಚ್ಛೆ.

ದಮಯಂತಿಯ ಮನಸ್ಸಿಗೆ ಎಳ್ಳಷ್ಟೂ ನೋವುಂಟಾಗಬಾರದು: ಮುದ್ದಿನ ಕುವರಿಯ ಬದುಕು ಬಂಗಾರವಾದರೇನೆ ಆ ಹೆತ್ತ ತಂದೆಯ ಪ್ರಯತ್ನ ಸಾರ್ಥಕವಾಗುತ್ತದೆ—ಬದುಕು ಪಾವನವಾಗುತ್ತದೆ. ದಮಯಂತಿಯ ಮನದಿಂಗಿತವನ್ನರಿತು ಕೂಡಲೇ ಸ್ವಯಂವರದ ಸಿದ್ಧತೆ ನಡೆಸಿದ ಭೀಮನೃಪಾಲನ ಈ ಕಾರ್ಯ, ಮಹತ್ಕಾರ್ಯವೇ ಸರಿ.

ನಾನಾ ದೇಶಗಳಿಗೆ ಸ್ವಯಂವರದ ವಾರ್ತೆ ಹಬ್ಬಿತು. ದಮಯಂತಿಯ ಸೌಂದರ್ಯದ ಕೀರ್ತಿ ದೇಶದೇಶಗಳಿಗೆ ಆಗಲೇ ಹರಡಿತ್ತು. ಚೋಳ, ಪಾಂಡ್ಯ, ಸಿಂಹ, ಕುರು, ಕೋಸಲ, ಕೊಂಕಣ, ಪೂರ್ವಕಾಮ, ನೇಪಾಳ, ಕಳಿಂಗ, ಸೌಭಗ, ಮಹೋದಯ, ಮಾಳವ, ಗೌಳ, ಸಿಂಧು, ಪಾಂಚಾಳ, ವಿದೇಹ ಮೊದಲಾದ ದೇಶಗಳ ಭೂಪಾಲಕರಿಗೆ, ವಿದರ್ಭಾಧಿಪ ಆಮಂತ್ರಣವನ್ನು ಕಳುಹಿಸಿದ್ದ. ಇಂತಹ ನಾರೀಮಣಿಯನ್ನು ಪಡೆಯಲು ಹಲವು ರಾಜಾಧಿರಾಜರು ಸ್ವಯಂವರದ ದಿನವನ್ನು ಕಾದುನೋಡುತ್ತಿದ್ದರು.

ಇತ್ತ ಕುಂಡಿನಪುರದ ಸಂಭ್ರಮ ಹೇಳತೀರದು. ನಾನಾ ರೀತಿಯ ಚಿತ್ರಪಟಗಳಿಂದಲೂ, ತಳಿರು ತೋರಣಗಳಿಂದಲೂ ರಾರಾಜಿಸುತ್ತಿತ್ತು—ಆ ನಾಡು. ' ಬೃಹದಾಕಾರವುಳ್ಳ ಸೌಧಗಳಿಂದ ಮೆರೆಯುತ್ತಿದ್ದ ನಗರದ್ವಾರಗಳು, ಬಾಳೆಯ ದಿಂಡಿನ ಅಲಂಕಾರದಿಂದ ಇಂದ್ರನ ಅರಮನೆಯಂತೆ ರಂಜಿಸುತ್ತಿದ್ದವು.

ಕುಂಡಿನಪುರ ಸುಸಜ್ಜಿತಗೊಂಡು ಸ್ವಯಂವರದ ದಿನವನ್ನು ಎದುರು ನೋಡುತ್ತಲಿತ್ತು. ದೇಶದೇಶಗಳ ಪರನೃಪಾಲರನ್ನು ಒಟ್ಟಿಗೆಯೇ ನೋಡುವ ಸುಯೋಗ ತಮಗೊದಗಿತಲ್ಲ ಎಂದು ಪ್ರಜೆಗಳು ಮೈಯುಬ್ಬಿ ನಲಿದರೆ, ತನ್ನ ಪ್ರತಿಷ್ಠೆ, ಅಂತಸ್ತಿಗನುಗುಣವಾಗಿ ಅತಿಥಿಗಳನ್ನು ಸತ್ಕರಿಸಲು ಕಂಕಣಬದ್ಧನಾಗಿದ್ದ ಭೀಮನೃಪಾಲ.

ದಮಯಂತಿಗಾದರೋ ಆ ನಳರಾಯನ ಚಿಂತೆ; ಆತನ ಮಂಗ ಮೂರುತಿಯೇ ಆಕೆಯ ಮನದಲ್ಲಿ ಮೂರ್ತಿಭವಿಸಿತ್ತು. ಸ್ವಯಂವರದ ದಿನ ಹತ್ತಿರವಾದಂತೆ ಉತ್ಸುಕತೆ ಹೇಳತೀರದು. ಅರಮನೆಯತ್ತ ಯಾ

ರಾಜರ ಪರಿವಾರ ಬರುವುದನ್ನು ಕಂಡರೂ ಸಖಿಯರನ್ನು ಕರೆದು ಪ್ರಶ್ನಿಸುವಳು— "ಯಾರದು ಬಂದವರು?" — ಎಂದು. ಆಕೆಯ ಅಂತರಂಗವನ್ನರಿತಿದ್ದ ಸಖಿಯರು "ನಳಮಹಾರಾಜರಲ್ಲ" — ಎಂದು ಉತ್ತರಿಸಿದರೆ ತನ್ನ ಲವಲವಿಕೆಗೆ ತನ್ನಲ್ಲೇ ನಾಚುವಳು ದಮಯಂತಿ.

ಚಿಂತಿಸಿ ಮನಸ್ಸು ಬಡವಾದಂತೆ. ದಮಯಂತಿಯ ದೇಹವೂ ಕೃಶವಾಗುತ್ತಿತ್ತು. ಮನಸ್ಸು ಸ್ಥಿಮಿತಕ್ಕೆ ಬಂದು ದೇಹ ಸುಧಾರಿಸಿ ಕೊಳ್ಳಬೇಕಾದರೆ—ಅದು ಸ್ವಯಂವರದ ಬಳಿಕವೇ! ಹೆಣ್ಣಿನ ಮನಸಿನಲ್ಲಿ ವಿರಹದುರಿ ಎಷ್ಟು ಗುಪ್ತವಾಗಿರುತ್ತದೋ ಅದರ ಪ್ರತಿಕ್ರಿಯೆ ನೂರ್ಮ ಡಿಯಾಗಿರುತ್ತದೆ!

ನಳನನ್ನು ದಮಯಂತಿ ಅಷ್ಟಾಗಿ ಪ್ರೇಮಿಸಿದ್ದಳು. ನಳನಿಗಲ್ಲದೆ ಆಕೆಯ ಹೃದಯದೇಗುಲದಲ್ಲಿ ಅನ್ಯರಿಗೆ ಸ್ಥಾನವಿರಲಿಲ್ಲ; ಆ ಗರ್ಭಗುಡಿ ಯಲ್ಲಿ ನಳನ ದಿವ್ಯಮೂರುತಿಗೆ ಮಾತ್ರ ಅಮೃತಾಭಿಷೇಕ. ಸಾಗರದ ತೆರೆಗಳಂತೆ ದಮಯಂತಿಯ ಅಂತರಾಳದಲ್ಲಿ ಅಲ್ಲೋಲ – ಕಲ್ಲೋಲ ವೇರ್ಪಡುತ್ತಿತ್ತು. ದೇಶದ ಜನಕ್ಕೆ ಇದೊಂದೂ ತಿಳಿಯದು; ಒಂದು ರೀತಿಯಲ್ಲಿ ಅವರೇ ಸುಖಿಗಳು. ದಮಯಂತಿಯ ಸ್ವಯಂವರದ ಸಂಭ್ರಮದಲ್ಲಿ ಹಾಡಿ ನಲಿಯುವವರು ಅವರು. ಅವರ ಉತ್ಸಾಹ, ಸಂಭ್ರಮಗಳಿಗೆ ಎಣೆಯೇ ಇಲ್ಲ.

ಕುಂಡಿನಪುರದ ಕಣ್ಣು ಕಟ್ಟುವಂತಹ ಅಲಂಕಾರ; ಜನರ ಸಂಭ್ರಮ; ಯಾರಿಗಾದರೂ ಮತ್ಸರ ಹುಟ್ಟಿಸುವಂತಹದ್ದು. ಸಂತಸದ ಕಡಲಿನಲ್ಲಿ ತೇಲಾಡುವ ಕುಂಡಿನಪುರವನ್ನು ತದೇಕ ಚಿತ್ತದಿಂದ, ನಭೋಮಂಡಲದಲ್ಲಿ ನಿಂತು ವೀಕ್ಷಿಸಿದ—ತ್ರಿಲೋಕ ಸಂಚಾರಿಯಾದ ನಾರದ ಮಹರ್ಷಿ.

ಮನಸ್ಸು ಆಗಲೇ ಎಲ್ಲವನ್ನು ಗ್ರಹಿಸಿತ್ತು. ದಮಯಂತಿಯ ಸ್ವಯಂವರಕ್ಕೆ ಇಷ್ಟೊಂದು ಆಡಂಬರವೇ? ಗುಂಪುಗುಂಪಾಗಿ ಬಂದು ಸೇರುವ ಭೂಭುಜರ ಹುಮ್ಮಸ್ಸನ್ನು ಕಂಡು ತನ್ನಲ್ಲೇ ನಸುನಕ್ಕ ನಾರದ. ಆ ಅವರಿಗೆಲ್ಲ—ದಮಯಂತಿ ತಮ್ಮನ್ನೇ ವರಿಸುವಳು, ಎಂಬ ಆತ್ಮ ವಿಶ್ವಾಸ. ದಮಯಂತಿಗಾದರೋ ನಳರಾಯನದೇ ಜ್ಞಾನ! ಮನಸ್ಸಿನ

ತಾಕಲಾಟದ ನಡುವೆ ಈ ಸಂಭ್ರಮವನ್ನು ನೋಡುವುದರಲ್ಲೇ ತಲ್ಲೀನನಾಗಿದ್ದ ನಾರದ.

ನಳರಾಯನಿಗೆ ಹೊನ್ನಹಂಸ ಬಂದು ದಮಯಂತಿಯ ಅನುರಾಗವನ್ನು ಅರುಹಿ ಹೋದಮೇಲೆ ಸ್ವರ್ಗವೇ ಭೂಮಿಗಿಳಿದು ಬಂದಷ್ಟು ಆನಂದ. ಆತನು ಲೋಕೈಕ ವೀರ; ದಮಯಂತಿಗೆ ಅನುರೂಪನಾದ ವರ. ಆದರೆ....!? — ನಾರದನಿಗೆ ಚಿಂತಿಸಿದಷ್ಟು ಕೊನೆ ಮುಟ್ಟದ ವಿಚಾರವಿದು.

ಅಲ್ಲಿ ನಳರಾಯ ಹೊರಟು ನಿಂತಿದ್ದಾನೆ: ಹೊರಡುವ ಮೊದಲು ವಿಶ್ವೇಶ್ವರನನ್ನು, ತನ್ನ ಇಷ್ಟದೇವರನ್ನು ಸ್ಮರಿಸಿದ್ದಾನೆ: ಆತನ ರಥ ವಿದರ್ಭ ನಗರಿಗೆ ಹೊರಟಿತ್ತು: ದಾರಿಯುದ್ದಕ್ಕೂ ಶುಭ ಶಕುನಗಳೇ ಘಟಿಸುವಾಗ ನಳ ಆನಂದದಿಂದ ಬಿರಿ ಹಿಗ್ಗುತ್ತಾನೆ— ನಭೋಮಂಡಲದಲ್ಲಿ ನಿಂತಿದ್ದ ನಾರದನಿಗೆ ಇದನ್ನು ನೋಡಿದಾಗ ನಾರಾಯಣನ ನಾಮಸ್ಮರಣೆ.

ದೇವಸ್ವರೂಪಿಯಂಥ ಶುಭಕರನ. ಈತನನ್ನು ಕಾಪಾಡಬೇಕು; ದಮಯಂತಿ ಒಲಿಯುವಂತೆ ಮಾಡಬೇಕು — ಈ ವಿನೋದವನ್ನೆಲ್ಲ ತಾನು ನೋಡಬೇಕು, ಎಂಬ ಛಲ ನಾರದನಿಗೆ.

ಸ್ವಯಂವರದಲ್ಲಿ ಏನಾದರೊಂದು ಕೋಲಾಹಲ ನಡೆಯುವಂತಾಗಬೇಕು. ದಮಯಂತಿಗೆ ನಳನನ್ನು ಅಷ್ಟು ಸುಲಭದಲ್ಲಿ ವರಿಸಲು ಬಾರದಾಗದು. ಯಾವ ಉಪಾಯ ಹೂಡಲಿ— ಯೋಚಿಸಿದ ನಾರದ.

ದೇವೇಂದ್ರನ ನೆನಪು ಆಗಲೇ ನಾರದನಲ್ಲಿ ಬಂದು ತುಂಬಿತ್ತು. ಆತನೇ ತನ್ನ ವಿನೋದನಾಟಕದಲ್ಲಿ ಮುಖ್ಯಪಾತ್ರಧಾರನಾಗಲು ಅರ್ಹ— ಎಂದು ಬಗೆದ ನಾರದ.

ಮುಂದೆ ಘಟಿಸಲಿರುವ ವೈಪರೀತ್ಯಗಳನ್ನು ಮನದಲ್ಲಿ ನೆನೆದು, ನಸುನಗುತ್ತ, ನಾರಾಯಣನ ನಾಮಸ್ಮರಣೆ ಮಾಡುತ್ತಿದ್ದಂತೆ ಆ ದೇವಮುನಿ ದೇವೇಂದ್ರನ ಒಡ್ಡೋಲಗಕ್ಕೆ ಬಂದಿದ್ದ.

ಇಂದ್ರನೊಡ್ಡೋಲಗದ ವೈಭವ, ಅನುಪಮವಾದುದು. ಆ ಆಡಂಬರದಲ್ಲಿ ರಾರಾಜಿಸುತ್ತಿದ್ದ ದೇವೇಂದ್ರ. ದೇವಸಭೆ ನಡೆಯು

ತ್ತಿದ್ದಂತೆ ನಾರದರ ಪ್ರವೇಶವಾದಾಗ ಎಲ್ಲರ ಗಮನ ಅತ್ತ ಹರಿದಿತ್ತು.

"ನಾರದ ಮಹರ್ಷಿಗಳು ದಯಮಾಡಿಸಬೇಕು...."—ಉದ್ಗಾರ ತೆಗೆದ ದೇವೇಂದ್ರ ಆಸೀನನಾದ ನಾರದನನ್ನು ಕುರಿತು ಮತ್ತೆ ಪ್ರಶ್ನಿಸಿದ.

"ತ್ರಿಲೋಕ ಸಂಚಾರಿಗಳೇ, ಅತಿಶಯವಾದ ಘಟನೆಗಳೇನೂ ನಡೆದಿಲ್ಲ ತಾನೇ?"

"ಅತಿಶಯವಾದ ಘಟನೆಯೆಂದರೇನು ದೇವೇಂದ್ರ......ನಿಮ್ಮೆಲ್ಲರ ಮುಖಕ್ಕೆ ಮಸಿ ಬಳಿಯುವಂತಹ ಘಟನೆಯೇ ನಡೆಯಲಿದೆ...."

"ಅಂದರೆ ...!? ಮುನಿಕುಲೋತ್ತಮರು ಏನನ್ನೊ ಮರೆಮಾಡು ತ್ತಿರುವರಲ್ಲ"

"ನಾರಾಯಣ......ನಾರಾಯಣ....... ನಿನ್ನಲ್ಲಿ ಮರೆಮಾಡಲೇ ದೇವೇಂದ್ರ......ಇದು ಅಪೂರ್ವ ವಾರ್ತೆ......ಮೂರು ಲೋಕದವರೂ ಅಚ್ಚರವಾಗುವ ವಾರ್ತೆ....ಅದನ್ನೆ ಹೇಳಲು ಬಂದೆ ದೇವೇಂದ್ರ...."

—ನಾರದನ ಪೀಠಿಕೆ ಎಲ್ಲ ದೇವತೆಗಳ ಉತ್ಸುಕತೆಯನ್ನು ಹೆಚ್ಚಿಸಿತು. ಎಲ್ಲರೂ ಆತುರದಿಂದ ಆಲಿಸತೊಡಗಿದರು.

"ಭೂಲೋಕದಲ್ಲಿ ಇದು ಕರ್ಣಕೌತುಕವಾದ ವಾರ್ತೆ—ವಿದರ್ಭ ದೇಶದ ರಾಜಕುಮಾರಿ. ಸುಂದರಿಯಾದ ದಮಯಂತಿಯ ಸ್ವಯಂವರ ವಾರ್ತೆ...."

"ಇದರಲ್ಲಿ ಕೌತುಕವೇನು ಬಂತು ಮುನಿಕುಲೋತ್ತಮಾ......."
—ಇಂದ್ರನ ಪ್ರಶ್ನೆ.

"ದಮಯಂತಿ ಸಾಮಾನ್ಯಳಲ್ಲ ದೇವೇಂದ್ರ...ತ್ರಿಭುವನಸುಂದರಿ... ಆಕೆಯನ್ನು ವರಿಸಬೇಕೆಂದು ಆಸೆಪಟ್ಟ ಭೂಲೋಕದ ರಾಜಾಧಿರಾಜರೆಲ್ಲ ಕುಂಡಿನಪುರದಲ್ಲಿ ಬಂದು ಸೇರುತ್ತಿದ್ದಾರೆ...."

"ಭೂಲೋಕದ ನಿಯಮವೇ ಇದಲ್ಲವೇ...?"—ಪ್ರಶ್ನಿಸಿದ ಆಸೀನ ನಾಗಿದ್ದ ಯಮಧರ್ಮ.

"ದಮಯಂತಿ ತನಗೆ ಮೆಚ್ಚುಗೆಯಾಗುವವರನ್ನು ಸ್ವಯಂವರದಲ್ಲಿ ವರಿಸುತ್ತಾಳೆ, ಅಷ್ಟೇ ತಾನೆ?"—ತಾತ್ಸಾರವಾಗಿ ನುಡಿದ ಅಗ್ನಿದೇವ.

"ಯಾರದರು ಈ ವಿಚಾರಕ್ಕೆ ಇನ್ನೊಂದು ಮಹತ್ವ ತುಂಬಬೇಕಾದರೆ, ಇದರಲ್ಲಿ ಏನಾದರೊಂದು ಮಹತ್ವ ಇದ್ದೇ ಇರಬೇಕು." — ವರುಣ ಅವರಿಗೆಲ್ಲ ಸಮಾಧಾನ ನೀಡಿದ.

ಏನಿದ್ದರೂ ನಾರದನಿಗೆ ತನ್ನ ಆಸೆ ಕೈಗೂಡಬೇಕು... ಮುನೀಂದ್ರ ಮಾತು ಮುಂದುವರಿಸಿದ—

"ದಮಯಂತಿಯ ಸ್ವಯಂವರ ತೀರಾ ಸಾಮಾನ್ಯ ದೇವೇಂದ್ರ.... ಅದು ಭೂಲೋಕದ ನಿಯಮವೆಂದ ಯಮರಾಯರ ಮಾತೂ ಸತ್ಯ; ಅಗ್ನಿದೇವನಂತೆ ದಮಯಂತಿ ತನಗಿಷ್ಟ ಬಿದ್ದವರನ್ನು ವರಿಸುತ್ತಾಳೆ"

"ಕೊನೆಗೂ ನಾನಂದುದರಲ್ಲೇ ಸಾಮ್ಯವಿದೆ. ನಾರದರನ್ನು ನಾನೊಬ್ಬನೆ ಅನುಮೋದಿಸಿದ್ದೇನೆ—" ಉಬ್ಬಿ ನುಡಿದ ವರುಣದೇವ.

"ನಿಜ, ನಿಜ....ದಮಯಂತಿ, ನಿಷಧಾಧಿಪತಿ ನಳಚಕ್ರವರ್ತಿಯನ್ನೇ ವರಿಸಲು ಪ್ರತಿಜ್ಞಿಸಿದ್ದಾಳೆ. ನಳನನ್ನಲ್ಲದೆ ಅನ್ಯರನ್ನು ಆಕೆ ಕಣ್ಣೆತ್ತಿಯೂ ನೋಡಲಾರಳು. ಈ ವಿಷಯ ಭೂಲೋಕದಲ್ಲೆಲ್ಲ ಜನಜನಿತವಾಗಿದ್ದರೂ ಆಸೆಪಟ್ಟು ಬರುವ ಸಾವಿರಾರು ಜನ ಭೂಭುಜರಿಗೆ ಏನೆಂದು ಹೇಳಬೇಕೋ ತಿಳಿಯುತ್ತಿಲ್ಲವಲ್ಲ.... ಸೌಂದರ್ಯರಾಶಿಯಾದ ದಮಯಂತಿಯನ್ನು ವರಿಸಲು ಆ ನಳನಲ್ಲಿ ಯಾವ ವಿಶೇಷಗುಣವಿದೆಯೋ....? ದೇವಾಧಿದೇವರುಗಳಾದ ನೀವೇ ಇದನ್ನು ವಿಚಾರಮಾಡಬೇಕು...."

—ನಾರದನ ಈ ಕೆಣಕುನುಡಿಗಳು ಇಂದ್ರನ ಒಡ್ಡೋಲಗವನ್ನೇ ಪುಳಕಗೊಳ್ಳುವಂತೆ ಮಾಡಿತ್ತು.

"ದಮಯಂತಿ ನಳನನ್ನೇ ಬಯಸಿರುವಳೇ?—" ವರುಣ.

"ಆಕೆಯ ಪಾತಿವ್ರತ್ಯವನ್ನು ಖಂಡಿತ ಕೆಡಿಸಬೇಕು...."—ಅಗ್ನಿ.

"ಈ ಸ್ವಯಂವರಕ್ಕೆ ವಿಘ್ನವೊಡ್ಡಿ ನಿಲ್ಲಿಸಿಬಿಡಬೇಕು......"—ಯಮಧರ್ಮ.

"ದಮಯಂತಿಯನ್ನು ವರಿಸಲು ದೇವತೆಗಳಾದ ನಾವೇ ಅರ್ಹರು."—ದೇವೇಂದ್ರ.

ನಾರದನ ಸಿಡಿಲುನುಡಿ ನಾಲ್ದೆಸೆಗಳಿಂದಲೂ 'ಪ್ರತಿಧ್ವನಿಯನ್ನು' ಉಂಟುಮಾಡಿತ್ತು. ನಾರದನಿಗೆ ನಾರಾಯಣನ ಸ್ಮರಣೆ; ಜೊತೆಗೆ ಮಂದಹಾಸ.

"ದೇವತೆಗಳಾದ ನಮ್ಮೆದುರು ಆ ನಳನ ಶೌರ್ಯಪರಾಕ್ರಮವೆಲ್ಲ ತುಚ್ಛ...."—ದೇವೇಂದ್ರ.

"ದಮಯಂತಿ" ದೇವತೆಗಳಾದ ನಮ್ಮಲ್ಲಿ ಒಬ್ಬರನ್ನು ವರಿಸದೆ ಇನ್ನೇನುಮಾಡುತ್ತಾಳೆ...." ಅಗ್ನಿಯ ಆತ್ಮಾಭಿಮಾನದ ನುಡಿಗಳು.

"ದಮಯಂತಿಯನ್ನು ಬಲಾತ್ಕಾರದಿಂದಲಾದರೂ ನಾವು ವರಿಸಲೇಬೇಕು...."—ಯಮಧರ್ಮನ ಉದ್ಧಟತನ.

"ನಾವೀಗಲೇ ಭೂಲೋಕಕ್ಕೆ ಹೋಗಬೇಕಾಗಿದೆ"—ವರುಣ ಅವಸರ ಪಡಿಸಿದ.

ದೇವಸಭೆಯನ್ನು ತೊರೆದು ಆ ನಾಲ್ವರೂ ಆಗಲೇ ಭೂಲೋಕಕ್ಕೆ ತೆರಳಿದ್ದರು. ಇವರ ಚಿತ್ತಭ್ರಾಂತಿಯನ್ನು ಕಂಡು ನಗದೆ, ನಾರದ ಇನ್ನೇನು ಮಾಡಬೇಕು....!

ಭೂಲೋಕವನ್ನು ಸೇರಿಯಾಗಿತ್ತು. ದಿವಿಜರ ಮನವೆಲ್ಲ ಚಂಚಲಗೊಂಡಿತ್ತು. ತಾವೀಗ ಏನು ಮಾಡುತ್ತಿದ್ದೇವೆ—ಮಾಡಲಿದ್ದೇವೆ—ಎಂಬುದರ ಪರಿವೆಯೇ ಅವರಿಗಿರಲಿಲ್ಲ. ನಾರದನ ಕೆಣಕುನುಡಿಗಳು ಅವರಲ್ಲಿ ಚಿತ್ತಕ್ಷೋಭೆಯನ್ನೇ ಉಂಟುಮಾಡಿದ್ದವು. ಚಿಂತಿಸಲೂ ಅವಕಾಶವಿಲ್ಲದೆ ಆ ನಾಲ್ವರೂ ಭೂಲೋಕದ ಮಾನವರಂತೆ ರೂಪ ಬದಲಾಯಿಸಿ ವಿದರ್ಭನಗರಿಗೆ ನಡೆದರು.

ದೂರದಿಂದಲೇ ಕೇಳಿಸುತ್ತಿತ್ತು – ಅಲ್ಲಿಯ ಕೊಂಬು – ಕಹಳೆಗಳ ನಿನಾದ; ಅಂಗನೆಯರು ಹಾಡುವ ಮಂಗಳಸ್ತೋತ್ರಗಳ ದಿವ್ಯನಾದ; ಪ್ರಜೆಗಳ ಸಂತಸದ ವಾಗ್ವಾದ. ಇವೆಲ್ಲ ಆ ದೇವತೆಗಳ ಕರ್ಣಗಳನ್ನು ಕೊರೆದು ಮನಸ್ಸನ್ನು ಮತ್ತಷ್ಟು ವಿಹ್ವಲಗೊಳಿಸಿದ್ದವು.

ಯಾವ ಅರಸನ ಪರಿವಾರ ಎದುರಾದರೂ ನಳನೆಂಬ ಭ್ರಮೆ ಆ ದೇವತೆಗಳಿಗೆ. ಕಂಡ ಕಂಡ ಭೂಪಾಲಕರನ್ನೆಲ್ಲ ಅಡಿಯಿಂದ ಮುಡಿಯ ವರೆಗೆ ವೀಕ್ಷಿಸುವರು. 'ನಳ' ಅವರೆಲ್ಲರ ಹೃದಯವನ್ನು ಕೊರೆಯುವ ಕೀಟವಾಗಿದ್ದ. ದಮಯಂತಿಯ ಬಗೆಗೆ ಚಿಂತಿಸಲೂ ಆಸ್ಪದವಿಲ್ಲದ ಹಾಗೆ ಆ ದೇವತೆಗಳ ಮನಸ್ಸಿನಲ್ಲಿ ನಳ ನೆಲೆಯಾಗಿದ್ದ.

ಕೊನೆಗೂ ನಳನ ದರ್ಶನವಾಯಿತವರಿಗೆ. ಆತನನ್ನು ತದೇಕ ಚಿತ್ತದಿಂದ ದೃಷ್ಟಿಸಿ ನೋಡಿದರವರು. ವಿಶ್ವ ರಾಜರನ್ನೆಲ್ಲ ಮಿಗಿಲೇರಿಸುವಂತಹ ದೇಹ ಸೌಷ್ಠವ, ಮುಖದ ಕಾಂತಿ-ಅವನೇ ನಳನೆಂಬುದನ್ನು ಇವರಿಗೆ ವಿದಿತಪಡಿಸಿತು.

ಆತನನ್ನು ತಮ್ಮ ಬಲೆಯಲ್ಲಿ ಸುತ್ತಿಕೊಳ್ಳುವ ಬಯಕೆ ದಿವಿಜರಿಗೆ. ಹೇಗಾದರೂ ಮಾಡಿ ಆತನನ್ನು ತಮ್ಮ ದೂತನನ್ನಾಗಿ ಮಾಡಿಕೊಳ್ಳಲು ಬಗೆದರವರು. ಆದರೆ ಮಾನವರಂತಿದ್ದ ಇವರನ್ನು ನಳ ಗುರುತಿಸುವುದಾದರೂ ಹೇಗೆ...! ತಮ್ಮ ನಿಜಸ್ವರೂಪವನ್ನು ಧರಿಸಿ ಆ ದೇವತೆಗಳು ನಳನನ್ನು ಎದುರುಗೊಂಡರು.

ಆ ಅವರ ವೇಷಭೂಷಣಗಳಿಂದಲೇ ಅವರಾರೆಂಬುದನ್ನು ಪತ್ತೆ ಹಚ್ಚಿದ ನಳರಾಯ. ಶುಭಕಾರ್ಯಕ್ಕೆ ಹೊರಟಾತನಿಗೆ ದೇವತೆಗಳೇ ದರ್ಶನನೀಡಿದರೆಂದು ನಳನ ಅಂತರಂಗ ಸಂತಸದಲ್ಲಿ ನಲಿದಿರಬಹುದು! ಭಕ್ತಿಯಿಂದ ನಮಿಸಿದನಾತ.

"ಈ ಶುಭವೇಳೆಯಲ್ಲಿ ತಮ್ಮೆಲ್ಲರ ದರ್ಶನವಾದುದು ನನ್ನ ಸೌಭಾಗ್ಯ"—ಎಂದ ನಳರಾಯ.

ಕೋರಿಕೆಯ ಗೌರವದಿಂದಲೇ ನಳನನ್ನು ಸತ್ಕರಿಸಿದರು, ಆ ದೇವತೆಗಳು: ಉಪಚಾರದ ಮಾತುಗಳನ್ನಾಡಿದರು. ಆದರೆ ಅವರ ಅಂತರಾಳದಲ್ಲಿ ಕುಹಕತನದ ಭೂತ ಹುಟ್ಟಿದ್ದು ನರ್ತಿಸುತ್ತಿತ್ತು.

"ಅಮರೇಂದ್ರ, ಅಗ್ನಿದೇವ, ಯಮರಾಜ, ವರುಣದೇವ— ನಿಮ್ಮೆಲ್ಲರ ದರ್ಶನದಿಂದ ನಾನು ಪುನೀತನಾದೆ. ನನ್ನ ಭಕ್ತಿಯನ್ನು

ನಿಮ್ಮಲ್ಲಿ ಹೇಗೆ ವ್ಯಕ್ತ ಪಡಿಸಲಿ...."—ಸಂತಸದ ಭರದಲ್ಲಿ ಅಂದ ನಳರಾಯ.

ಆ ದೇವತೆಗಳ ಉದ್ದೇಶಸಾಧನೆಯು ಸನ್ನಿವೇಶ ಸನ್ನಿಹಿತವಾಗಿತ್ತು; ಅವರೆಲ್ಲರ ಪರವಾಗಿ ದೇವೇಂದ್ರನೇ ಉತ್ತರಿಸಿದ—

"ನಿನ್ನಿಂದ ನಮಗಿಂದು ಮಹದುಪಕಾರವಾಗಬೇಕಾಗಿದೆ ನಳಮಹಾ ರಾಜ...."

"ನನ್ನಿಂದ, ದೇವತೆಗಳಾದ ತಮಗೆ ಉಪಕಾರವೇ...." ತುಸು ಶಂಕಿಸಿದ ಭೂಪಾಲ.

"ಹೌದು ನೃಪಾಲ....ನೀನು ಮಹಾಪರಾಕ್ರಮಿ, ಪರೋಪಕಾರಿ, ಉದಾರ ಗುಣಸಂಪನ್ನ. ನಿನ್ನ ಈ ಗುಣಗಳು ಸ್ವರ್ಗದಲ್ಲೆ ಪ್ರಶಂಸೆಗೆ ಪಾತ್ರವಾಗಿವೆ"—ಅಗ್ನಿ ಉತ್ತರಿಸಿದ.

"ನಿನ್ನ ಗುಣ ವಿಶೇಷವನ್ನು ದೇವತೆಗಳು ಹೊಗಳುವುದನ್ನು ಮನ ದಣಿಯೆ ಕೇಳು. ನಿನ್ನಿಂದ ಒಂದು ಉಪಕಾರವನ್ನು ಅಪೇಕ್ಷಿಸಿ, ನಾವು ಇಲ್ಲಿಯ ವರೆಗೆ ಬಂದವರಿದ್ದೇವೆ...."—ವರುಣನೆಂದ.

"ನೀನು ಮಾಡಲಿರುವ ಉಪಕಾರ ಶ್ರೇಷ್ಠವಾದುದು. ಇದರಿಂದ ನಿನಗೆ ಅಜರಾಮರ ಕೀರ್ತಿ ಲಭಿಸುತ್ತದೆ; ಈರೇಳು ಲೋಕಗಳಲ್ಲಿ ನಿನ್ನ ಹೆಸರು ಸ್ಥಿರವಾಗಿ ನಿಲ್ಲುತ್ತದೆ...."—ಯಮದೇವನೆಂದ.

"ದೇವತೆಗಳಾದ ನಿಮಗೆ ನನ್ನಿಂದ ಉಪಕಾರವೆಂದರೇನು, ದಿವಿಜರೆ....?" ದೇವಲೋಕದ ನಿಮಗೆ ಸಿದ್ಧಿಸದ ಗುಣವಿಶೇಷ ನನಗೆ ಸಿದ್ಧಿಸಿದೆಯೆ....! ಅಂತಿದ್ದರೆ ನಾನು ಧನ್ಯ...."

ಆನಂದಾಶ್ಚರ್ಯಗಳಿಂದ ನಳ ಮಾತು ನಿಲ್ಲಿಸಿದ. ದೇವೇಂದ್ರ ತನ್ನ ಉದ್ದೇಶವನ್ನು ವಿಷದೀಕರಿಸಿದ:

"ಕುಂಡಿನಪುರದ ರಾಜಕುಮಾರಿ, ವಿದರ್ಭಾಧಿಪತಿ ಭೀಮಸೇನನ ಕುಮಾರಿ ದಮಯಂತಿ ತ್ರಿಲೋಕ ಸುಂದರಿಯೆಂಬುದನ್ನು ಕೇಳಿಬಲ್ಲೆವು. ಆಕೆಯನ್ನು ದೇವತೆಗಳಾದ ನಾವಲ್ಲದೆ ಅನ್ಯರು ವರಿಸಲು ಅರ್ಹರಲ್ಲ.

ಅನರ್ಘವಾದುದೆಲ್ಲ ದೇವತೆಗಳಿಗೆ ಸೇರಬೇಕಾದುದು. ಆಕೆ ನಮ್ಮನ್ನು ಬಿಟ್ಟು ವರಿಸುವಂತೆ ಮಾಡುವ ಮಹತ್ವದ ಹೊಣೆ ನಿನ್ನದು ನಳರಾಯ........"

ತನ್ನ ಕನಸು ಕಾಣುತ್ತಿರುವ ವೇದನೇ ಎಂದೆನಿಸಿತು ನಳನಿಗೆ. ವೈಪರೀತ್ಯವನ್ನು ನೋಡಿ ಮುಗುಳ್ನಕ್ಕನಾತ. ತಾನು ಬಯಸಿದ ಲಲನೆಯನ್ನು ತನ್ನಿಂದಲೇ ಇನ್ನೊಬ್ಬರು ವರಿಸುವಂತೆ ಮಾಡುವ ಅಗ್ನಿಪರೀಕ್ಷೆಯು ಎದುರಾಗಿದೆಯಲ್ಲ ಎಂದು ಮರುಗಿದನಾತ. ದೇವತೆಗಳ ಈ ಯುಕ್ತಿ ತಬ್ಬಿಬ್ಬುಗೊಳಿಸಿದ ಸಂದಿಗ್ಧ ಪರಿಸ್ಥಿತಿಯೊಳಗೆ ಆತನನ್ನು ನೂಕಿದಂತೆ ಭಾಸವಾಯಿತು.

"ಏಕೆ ಭೂಪಾಲ, ನಗುತ್ತಿರುವೆಯಲ್ಲ........ ಇದರಲ್ಲಿ ಯಾವ ಅತಿಶಯವೂ ಇಲ್ಲ. ದಮಯಂತಿಯನ್ನು ವರಿಸುವ ಏಕಮೇವ ಉದ್ದೇಶದಿಂದಲೇ ನಾವು ದೇವಲೋಕದಿಂದ ಈ ಲೋಕಕ್ಕೆ ಬಂದಿದ್ದೇವೆ. ನಮ್ಮ ಒಂದು ಅಭೀಷ್ಟವನ್ನು ಈಡೇರಿಸಲು ಅಶಕ್ತನಾದೆಯಾ ಭೂಪಾಲ....."—ದೇವೇಂದ್ರ ಕೆಣಕಿ ನುಡಿದ.

"ಇದೇನು ವೈಪರೀತ್ಯ ದೇವೇಂದ್ರ...ದಮಯಂತಿ ಲೋಕಸುಂದರಿ, ಭೂಲೋಕರತ್ನ. ಧೀಮಂತ ಮಾನಿನಿ ಮುಗ್ಧನಾರಿ. ಆಕೆಯನ್ನು ಸ್ವಯಂವರದಲ್ಲಿ ವರಿಸಲು ಬಂದ ರಾಜಾಧಿರಾಜರಲ್ಲಿ ನಾನೂ ಒಬ್ಬ. ಸ್ವಯಂವರ ಸಮಾರಂಭ ನಡೆದ ಕಾಲದಲ್ಲಾಗ ಆಕೆ ಯಾರನ್ನು ವರಿಸುವಳೋ ನಾನೇನು ಹೇಳಲಿ...!? ಮತ್ತೆ ಆಕೆ ನಿಮ್ಮಲ್ಲಿ ಒಬ್ಬರನ್ನು ವರಿಸುವಂತೆ ನಾನು ಮಾಡುವುದಾದರೂ ಹೇಗೆಂದು ಯೋಚಿಸುತ್ತಿದ್ದೇನೆ...."—ನಳನೆಂದ.

ಈತನಿಗೆ ಹೇಗೆ ಉತ್ತರಿಸಬೇಕೆಂದು ದೇವತೆಗಳಿಗೆ ಕೂಡಲೇ ತೋಚಲಿಲ್ಲ. ಅವರ ಮನದಲ್ಲೆಲ್ಲ ದಮಯಂತಿಯನ್ನು ಪಡೆಯುವ ವಿಚಾರವೇ ತುಂಬಿರುವಾಗ, ಅದಕ್ಕೆ ಸೂಕ್ತ ಉಪಾಯವನ್ನು ಹುಡುಕಲೂ ಅವರು ಅಸಮರ್ಥರಾಗಿದ್ದಾರೆ.

ಈಗೇನು ಮಾಡುವುದು....—ತಮ್ಮಲ್ಲೇ ಚಿಂತಿಸಿದರು ದೇವತೆಗಳು.

"ಆ ದಮಯಂತಿ ಬಯಸಿದ ನಳರಾಯ ಈತನೇ"

"ಈತನನ್ನೇ ನಮ್ಮ ದೂತನನ್ನಾಗಿ ಆಕೆಯಲ್ಲಿಗೆ ಇಂದು ಕಳುಹಿಸಿ ಕೊಟ್ಟರೆ, ಈತ ಅವಮಾನಿತನಾಗುತ್ತಾನೆ; ತನ್ನ ಸಖಿಯರೆದುರಿನಲ್ಲಿ ಅವಮಾನಿತನಾದ ಈತನನ್ನು ದಮಯಂತಿ ಖಂಡಿತಾ ವರಿಸಲಾರಳು"

"ಹೆಂಗಳೆಯರಿದ್ದಲ್ಲಿಗೆ ಒಬ್ಬಂಟಿಯಾಗಿ ಬಂದ ಈತನನ್ನು ಆ ಅವರೆಲ್ಲ ಮೂರ್ಖನೆಂದು ಹಿಯಾಳಿಸಬಹುದು."

"ದಮಯಂತಿ, ಈತನನ್ನು ಹೀಗಳೆದು ದೇವತೆಗಳಾದ ನಮ್ಮನ್ನು ವರಿಸುವಂತಾಗಲು ಇದೊಂದೇ ಸರಿಯಾದ ಉಪಾಯ"

—ನಾಲ್ವರು ದೇವತೆಗಳ ಮನಸ್ಸು ಒಂದೇ ಉದ್ದೇಶದಿಂದ ಚಿಂತಿಸುತ್ತಿತ್ತು. ನಳನಿಗರಿಯದಂತೆ ಈ ನಾಲ್ವರೂ ವಿಚಾರಮಥನ ನಡೆಸಿದರು. ಮನಸ್ಸು ಪ್ರಸನ್ನತೆಯ ಹಾದಿಯನ್ನು ಕಂಡಿತು.

"ನಳರಾಯ, ನಿನ್ನಿಂದ ಸಾಧ್ಯವಿರುವಂತಹ ಉಪಕಾರವನ್ನೇ ನಾವು ಬಯಸಿದ್ದೇವೆ. ದೇವತೆಗಳಾದ ನಾವು ದಮಯಂತಿಯ ಸ್ವಯಂವರದಲ್ಲಿ ಭಾಗವಹಿಸಲು ಬಂದಿರುವ ವಾರ್ತೆಯನ್ನು ಆಕೆಗೆ ತಿಳಿಸುವೆಯಾ?" —ವರುಣ ಪ್ರಶ್ನಿಸಿದ.

"ಮತ್ತೂ ಅದನ್ನೇ ಹೇಳುತ್ತಿರುವೆಯಲ್ಲ ವರುಣದೇವ....ನಾನು ನಿಷಧ ದೇಶದ ಚಕ್ರವರ್ತಿ. ಒಬ್ಬ ಸಾಮಾನ್ಯನಂತೆ ಪರದೇಶದ ರಾಜಕುಮಾರಿಯೊಬ್ಬಳ ಅಂತಃಪುರವನ್ನು ಪ್ರವೇಶಿಸಿ ಈ ವಿಚಾರವನ್ನು ತಿಳಿಸುವುದೆಂದರೇನು........ನನಗೊಂದೂ ಅರ್ಥವಾಗುತ್ತಿಲ್ಲ." — ನಳ ಕಳಕಳಿಯಿಂದ ಉತ್ತರಿಸಿದ.

"ಈ ಕ್ಷುಲ್ಲಕ ವಿಚಾರಕ್ಕಾಗಿ ಚಿಂತಿಸಬೇಡ ನಳರಾಯ....ನೀನು ನಿಷಧ ದೇಶದ ಚಕ್ರವರ್ತಿ ನಿಜ. ನಿನ್ನ ನಿಜರೂಪ ಅವರಿಗೆ ಕಾಣಿಸದಂತಹ ವರವನ್ನೊಂದನ್ನು ನಾವು ನಿನಗೆ ದಯಪಾಲಿಸುವೆವು ರಾಜಾ...." —ಅಗ್ನಿಯೆಂದ.

"ಅಂತಿದ್ದರೆ ದೈವೇಚ್ಛೆ...."—ಎಂದ ನಳರಾಯ, ಪರೋಪಕಾರಕ್ಕಾಗಿ ತನ್ನ ಸ್ವಂತದ ಸುಖವನ್ನು ತುಚ್ಛವಾಗಿ ಬಗೆದು, ಆ ದಿವಿಜರಿಂದ

ವರವನ್ನು ಪಡೆದು ಅವರಿಂದ ಬೀಳ್ಕೊಂಡು. ಭೀಮನಂದನೆಯ ಅಂತಃಪುರದತ್ತ ಸಾಗಿದ.

ಇತ್ತ ನಳ ಹೋದ ದಿಕ್ಕನ್ನೆ ಉತ್ಸುಕತೆಯಿಂದ ನೋಡುತ್ತಿದ್ದರು ಆ ದೇವತೆಗಳು.

"ನಳರಾಯ ದಮಯಂತಿಯ ಅಂತಃಪುರವನ್ನು ಪ್ರವೇಶಿಸುವಾಗ ಪುರುಷರ ಕಣ್ಣಿಗೆ ಮಾತ್ರ ಕಾಣಿಸಲಾರ.......ಆದರೆ ದಮಯಂತಿಯ ಸಖಿಯರು ಆತನನ್ನು ನಿಂದಿಸುವರು. ಸ್ವತಃ ದಮಯಂತಿಯೇ ಆತನನ್ನು ಹೀಗಳೆಯಬಹುದು. ಅಲ್ಲಿಯ ಘಟನೆಗಳನ್ನೆಲ್ಲ ನಾವು ತಿಳಿಯುವುದಾದರೂ ಹೇಗೆ... ?—ಮಹೇಂದ್ರ ತಮ್ಮವರಲ್ಲಿ ಪ್ರಶ್ನಿಸಿದ.

"ಸಮಯೋಚಿತವಾದ ಬುದ್ಧಿ... ನಿಜವಾಗಿಯೂ ನಾವು ಅಲ್ಲಿಯ ವಿಚಾರವನ್ನು ತಿಳಿಯಲೇ ಬೇಕು. ಒಂದು ವೇಳೆ ನಳ ನಮಗೆ ಮೋಸ ಮಾಡಿ, ನಮ್ಮ ವಿಚಾರ ತಿಳಿಸದೆ, ತನ್ನನ್ನೆ ನಾಳಿನ ಸ್ವಯಂವರದಲ್ಲಿ ವರಿಸಬೇಕೆಂದು ದಮಯಂತಿಯನ್ನು ಕೇಳಿಕೊಂಡರೆ..." — ಸಂಶಯ ವ್ಯಕ್ತಪಡಿಸಿದ ಯಮರಾಯ.

"ಅಹುದು ಸಂದೇಹವಿಲ್ಲ..... ಅದಕ್ಕೆ ದಾಸಿಯೊಬ್ಬಳನ್ನು ಅತಿಸೂಕ್ಷ್ಮ ರೂಪದಲ್ಲಿ ಅಲ್ಲಿಗೆ ಕಳುಹಿಸಿದರಾಯಿತು. ಆಕೆ ಎಲ್ಲವನ್ನು ತಿಳಿದು ಬಂದು ನಮಗೆ ತಿಳಿಸುವಳು"— ಸಲಹೆ ನೀಡಿದ ದೇವೇಂದ್ರ.

ಎಲ್ಲರೂ ಅದೇ ಸರಿಯಾದ ಉಪಾಯವೆಂದು ಬಗೆದರು. ದೇವಕನ್ನಿಕೆಯೊಬ್ಬಳನ್ನು ನಳರಾಯನ ಹಿಂದೆಯೇ ಸೂಕ್ಷ್ಮರೂಪದಲ್ಲಿ ಕಳುಹಿಸಿಕೊಟ್ಟರು. ಆದರೂ ಮನಸ್ಸು ಸ್ಥಿಮಿತಕ್ಕೆ ಬಾರದು. ಅಲ್ಲಿ ಏನು ಪ್ರಮಾದ ನಡೆಯುವುದೋ ಎಂಬ ಆತಂಕ ಅವರಿಗೆ.

ಇನ್ನೊಂದು ಘಳಿಗೆಯಲ್ಲಿ ಎಲ್ಲವೂ ನಿಚ್ಚಳವಾಗುವುದೆಂಬ ಸಮಾಧಾನ: ದಮಯಂತಿ ಖಂಡಿತವಾಗಿಯೂ ತಮ್ಮಲ್ಲಿ ಒಬ್ಬರನ್ನು ವರಿಸುವಳು–ಎಂಬ ವಿಶ್ವಾಸ ಬೇರೆ. ಒಟ್ಟಿನಲ್ಲಿ ಮನಸ್ಸು ಬಿರುಗಾಳಿಗೆ ಸಿಕ್ಕ ನಾವೆಯಂತಾಗಿತ್ತು. ಯಾವುದನ್ನೂ ನಿರ್ಧಾರವಾಗಿ ಹೇಳುವಂತಿಲ್ಲ.

ಅವರೂ ಕಾದು ನೋಡಬೇಕು....ನಳ ಹೋದಂತಹ ಕಾರ್ಯದಲ್ಲಿ ಈ ಇವರಿಗೆ ಯಶಸ್ಸನ್ನು ಹೊತ್ತು ತರಬೇಕು—ಇದು ನಿರೀಕ್ಷೆ!

ಮನಸ್ಸು ತೂಗುಯ್ಯಾಲೆಯಾಗಿತ್ತು. ಒಂದೆಡೆ ದಮಯಂತಿಯಲ್ಲಿದ್ದ ದೈವಿಕಪ್ರೇಮ; ಇನ್ನೊಂದೆಡೆ ದಮಯಂತಿಯನ್ನು ಬಯಸಿ ಬಂದವರು ದೇವತೆಗಳು—ಅವರ ಪರವಾಗಿ ವಾದಿಸಲು ತಾನು ದೂತನಾಗಿ ಹೋಗಬೇಕಾಗಿದೆ; ವಿಧಿ ತನ್ನಂತರಂಗವನ್ನು ಕೆಣಕುತ್ತಿದೆಯಲ್ಲ....—ನಳರಾಯ ಚಿಂತಿಸಿದ.

ತಾನೆಂದಿಗೂ ಕರ್ತವ್ಯಭ್ರಷ್ಟನಾಗಲಾರೆ. ಮೇಲಾಗಿ ತನ್ನಿಂದ ಉಪಕಾರ ಬಯಸಿಬಂದವರು, ಶ್ರೇಷ್ಠರಾದ ದೇವತೆಗಳು! ತನ್ನ ಸ್ವಾರ್ಥಕ್ಕಾಗಿ ನಳರಾಯ ದೇವತೆಗಳಿಗೆ ಮೋಸಮಾಡಿದನೆಂಬ ಅಪಚಾರವನ್ನೆಂದಿಗೂ ತನ್ನಾತ್ಮ ಸಹಿಸದು. ಮಿಡಿತ–ತುಡಿತಗಳ ಕಾಕಲಾಟದಲ್ಲಿ ನಳ ಕುಂಡಿನಪುರವನ್ನು ಸೇರಿದ್ದ. ಹಿಂಬಾಲಿಸಿಯೇ ಬಂದಿದ್ದಳು ಸೂಕ್ಷ್ಮಾಂಗವನ್ನು ಹೊಂದಿದ್ದ ದೇವ ಕನ್ನಿಕೆ, ಆತನಿಗರಿವಾಗದಂತೆ !

ಕರ್ತವ್ಯದ ಮುಸುಕನ್ನು ಒಂದು ನಿಮಿಷ ಪಕ್ಕಕ್ಕೆ ಸರಿಸಿದರೆ, ನಳರಾಯನಿಗೊಂದು ಆತ್ಮತೃಪ್ತಿ–ತಾನಿಂದು ತನ್ನ ಆರಾಧ್ಯದೇವತೆಯಾದ ದಮಯಂತಿಯಲ್ಲಿಗೆ ಹೋಗುತ್ತಿದ್ದೇನೆ—ಎಂದು.

“ಹೋ ದಮಯಂತೀ....ನನ್ನ ಪ್ರೇಮಮೂರುತಿಯೇ....ನಿನ್ನನ್ನು ಅನ್ಯರ ಮಡಿಲಿಗೆ ಹಾಕುವ ಹೇಯ ಕೃತ್ಯಕ್ಕೆ ಮುಂದಾಗಿರುವೆನಲ್ಲ....ಈ ಪಾಪದ ಕೆಲಸ ನನ್ನಿಂದಲೇ ಆಗಬೇಕೇ....?....ಆದರೆ ನಳರಾಯನಿಗೆ ಕರ್ತವ್ಯಪರಿಪಾಲನೆಯೇ ಹಿರಿದು! ದಮಯಂತೀ....ನಿನ್ನ ಪ್ರೇಮ, ನೀನು ನನ್ನಲ್ಲಿಟ್ಟಿರುವ ಅನುರಾಗ—ಅದೆಲ್ಲವನ್ನು ಆ ಹೊನ್ನಹಂಸ ಬಂದು ಚುಚ್ಚಿ ತುಂಬಿಸಿದೆ; ಆದರೆ ಅದೆಲ್ಲವನ್ನೂ ನನ್ನೆದೆಯಲ್ಲಿ ಬಚ್ಚಿಟ್ಟು ನಾನಿಂದು ನಿನ್ನ ಬಳಿಗೆ ಅನ್ಯರ ಭಿಕ್ಷಾರ್ಥಿಯಾಗಿ ಬರುತ್ತಿದ್ದೇನೆ....” —ಅಂತರಂಗದ ಮಿಡಿತ.

—ಏನು ಚಿಂತಿಸಿದರೂ ಮನಸ್ಸು ಹಗುರವಾಗದು. ಕೊನೆಗೂ ದಮಯಂತಿಯ ಅಂತಃಪುರವನ್ನು ಯಾರೂ ಇಲ್ಲದ ವೇಳೆಯನ್ನು ನೋಡಿ ಪ್ರವೇಶಿಸಿದ ನಳರಾಯ. ಪುರುಷರ ಕಣ್ಣಿಗೆ ಮಾತ್ರ ನಳ ಕಾಣಿಸಲಾರ. ಆದರೆ ಹೆಂಗಸರ ಕಣ್ಣಿಗೆ ಆತ ಕಾಣನಲ್ಲ; ಹೀಗೆಂದೇ ದೇವತೆಗಳು ಆತನನ್ನು ಅಪಹಾಸ್ಯಕ್ಕೀಡುಮಾಡಲು ಈ ಉಪಾಯ ಹೂಡಿದ್ದರು. ಇದನ್ನು ಮುಂದಾಗಿಯೇ ಗ್ರಹಿಸಿದ್ದ ನಳರಾಯ. ದಮಯಂತಿಯು ಒಬ್ಬಳೇ ಇರುವಾಗಲೇ ಕಾಣಿಸಿಕೊಂಡ.

ಅನಿರೀಕ್ಷಿತವಾಗಿ ಅಪರಿಚಿತ ಪುರುಷನನ್ನು ಕಂಡಾಗ ಹೆಣ್ಣು ಸುಗಬಾದಂತೆ ಭಯಭೀತಳಾಗಿ. ಏನನ್ನೂ ಹೇಳಲೊಲ್ಲದವಳಾಗಿ ದಮಯಂತಿ ತಡವರಿಸುತ್ತಿರಲು ನಳನೂ ಪ್ರತಿಮೆಯಂತೆ ನಿಂತುಬಿಟ್ಟಿದ್ದ.

ಪಿಂಡಮರಿಯಿಂದ ಬಳಿ ಬೆಳೆದ ಆ ಕೋಮಲಾಂಗಿಯ ಅಂಗಾಂಗಗಳು. ಮದನನ ಕುಸುಮಾಸ್ತ್ರ ತಾಪದಿಂದ ಸೊರಗಿದ ಮುಖ ಮಂಡಲ. ಮನೋವಲ್ಲಭನ ಆಕಾಂಕ್ಷೆಯಿಂದ ಚಂಚಲವಾಗಿದ್ದ ದಮಯಂತಿಯ ಮನಸ್ಸಿನ ಗತಿ—ಒಂದೊಂದನ್ನೇ ನಳ ಗ್ರಹಿಸುತ್ತಿರಲು ಆಕೆಯ ಕಮಲದಂತಹ ನಯನಗಳು ಒಮ್ಮೆಲೇ ಆತನ ಮೇಲೆ ಆಕ್ರಮಣ ನಡೆಸಿದುವು. ನಳರಾಯನ ಅವಸ್ಥೆ ಹೇಳತೀರದು.

ದಮಯಂತಿಯಾದರೋ ಮತ್ತೆ ಸಾವರಿಸಿಕೊಂಡು, ತನ್ನ ದಾಸಿಯನ್ನು ಕರೆದು ಇಂತೆಂದಳು—"ಆ...ಗಂ....ತು....ಕ....ರಿಗೆ....ಆಸನ....ವನ್ನು ಕೊಡು"

ಮತ್ತೆ ನೆಲ ನೋಡಲೇ, ಆಕಾಶ ನೋಡಲೇ, ಅಲ್ಲ ಆತನನ್ನೇ ನೋಡಲೇ—ಒಂದೂ ಅರಿಯದೆ ಚಿತ್ರಪಟದಲ್ಲಿ ರಂಜಿಸುವಂತಹ ಲಲನೆಯಂತೆ ನಿಂತಳು ದಮಯಂತಿ!

ಕೊನೆಗೆ ದಮಯಂತಿಯೇ ಸಾವರಿಸಿಕೊಂಡಳು. ನಳನೇನನ್ನೂ ಹೇಳಲಾರ. ಮೂಕನಾಗಿ ಆತನನ್ನು ಅಲ್ಲಿ ಹೆಚ್ಚು ಹೊತ್ತು ಉಳಿಯಬಿಟ್ಟರೆ. ಅರಮನೆಯ ಇತರ ಪರಿಚಾರಿಕೆಯರೆಲ್ಲ ಬಂದು ಬಿಟ್ಟಾರು. ವಿಷಯ ತಿಳಿದರೆ ಊರಿನಲ್ಲಿಡೀ ಅದೇ ವಾರ್ತೆ ಹಬ್ಬುವುದು—"ಅಂತಃ

ಪುರಕ್ಕೆ ಅಪರಿಚಿತ ರಾಜಕುಮಾರನೊಬ್ಬ ಸ್ವಯಂವರದ ಹಿಂದಿನ ದಿನವೇ ಬಂದಿದ್ದ"—ಎಂದು! ಈ ಉಭಯ ಸಂಕಟದ ನಡುವೆ ಸಖಿಯೊಬ್ಬಳನ್ನು ಕರೆದು ವಿನಂತಿಸಿಕೊಂಡಳು ದಮಯಂತಿ:

"ನನಗೇಕೋ ಭಯವಾಗುತ್ತಿದೆ... ನನ್ನಂತರಂಗದಲ್ಲಿ ನಲಿದಾಡುವ ಪ್ರೇಮದೇವತೆಯೇ ಈತನಾಗಿದ್ದರೆ, ಈ ನೃಪಾಲೋತ್ತಮ ಇಲ್ಲಿಗೇಕೆ ಬಂದ; ಯಾವ ಉದ್ದೇಶವನ್ನಿಟ್ಟುಕೊಂಡು ಬಂದ? ಆತನ ಹೆಸರೇನು? ಎಂಬ ವಿಚಾರವನ್ನೆಲ್ಲ ಒಮ್ಮೆ ಸವಿವರವಾಗಿ ಕೇಳಿ ತಿಳಿದು ನನಗೆ ಹೇಳುವೆಯಾ....?"

ಒಡತಿಯ ಆಜ್ಞೆಯನ್ನು ಶಿರಸಾ ಪಾಲಿಸಿದ ಆ ದಾಸಿ ನಳರಾಯನ ಬಳಿಗೆ ಬಂದಳು. ಆತನ ರೂಪಸೌಂದರ್ಯವನ್ನು ನೋಡಿದಾಕ್ಷಣವೇ ಆಕೆಗೆ ಅನ್ನಿಸಿತ್ತು — ಆತ ನಳರಾಜನೇ ಎಂದು. ಆಕೆಗದರಲ್ಲಿ ಸಂಶಯವೇ ಇರಲಿಲ್ಲ! ಆದರೂ ಒಡತಿಯ ಮನದಿಚ್ಛೆಯನ್ನು ಪೂರೈಸಲೆಂದು ಮತ್ತೆ ಪ್ರಶ್ನಿಸಿದಳಾಕೆ;

"ಮಹಾನುಭಾವರೆ, ತಮ್ಮಲ್ಲಿ ವಿನಯದಿಂದ ಪ್ರಾರ್ಥಿಸಿಕೊಳ್ಳುತ್ತಿದ್ದೇನೆ. ತಾವು ಯಾರು? ತಮ್ಮ ಹೆಸರೇನು? ಬಂದಂತಹ ಮಹತ್ಕಾರ್ಯವಾವುದು? ಇದೆಲ್ಲವನ್ನು ದಯವಿಟ್ಟು ಹೇಳುವಂತಾಗಬೇಕು...."

ಅದಕ್ಕೆ ನಳನೆಂದ:

" 'ನೀನ್' ಎಂಬುದೇ ನನ್ನ ನಾಮ! ಪುರುಷರಾರೂ ಕಾಣಿಸದಂತಹ ಅದೃಶ್ಯರೂಪನಾಗಿ ಬರುವ ವರವನ್ನು ನನಗೆ ಕರುಣಿಸಿದರು—ದೇವೇಂದ್ರ, ಅಗ್ನಿ, ವರುಣ, ಯಮ ಮೊದಲಾದ ದೇವಾಧಿದೇವರುಗಳು; ಅವರೇ ನನ್ನನ್ನಿಲ್ಲಿಗೆ ಕಳುಹಿಸಿದರು...."

"ದೇವತೆಗಳ ದೂತನಾಗಿ ಬಂದಿರುವೆಯಾ.......? ಆ ಮಹಾಮಹಿಮರು ನಮ್ಮ ಒಡತಿಗೆ ಏನೆಂದು ಹರಕೆಯನ್ನು ನೀಡಿರುವರು...!?"—ಆ ದಾಸಿ ಆತುರತೆಯಿಂದ ಪ್ರಶ್ನಿಸಿದಳು.

"ಯಾವ ಹರಕೆ...!!?"—ನಳ ಚಿಂತಿಸಿದ; ಚಿಂತಿಸಿ ಒಡವಾದ.

"ನಾನು ಯಾವ ತರಕೆಯನ್ನೂ ತಂದಿಲ್ಲ....ನಾಳೆಯ ದಿನ ನಡೆಯುರುವ ಸ್ವಯಂವರದಲ್ಲಿ ದಮಯಂತಿ, ಆ ನಾಲ್ವರಲ್ಲಿ ಒಬ್ಬರನ್ನು ವರಿಸು ವಂತಾಗಬೇಕು. ಎಂಬ ವಿಚಾರವನ್ನು ತಿಳಿಸಲೆಂದು ಅವರು ನನ್ನನ್ನು ಕಳುಹಿಸಿದರು. ಇದು ಸತ್ಯ."

ಸಹಜವಾದ ನುಡಿಗಳನ್ನು ಕೇಳಿದ ದಮಯಂತಿ, ನಿಲ್ಲಲಾರದೆ ತನ್ನೆರಡು ಕರ್ಣಗಳನ್ನು ಕೈಗಳಿಂದ ಮುಚ್ಚಿ ಹಿಡಿದು. ಹೃದಯಪದರದಲ್ಲಿ ಎರಗಿದ ಸಿಡಿಲಿನ ಆಘಾತಕ್ಕೆ ಎದೆಗೊಡಲಾರದೆ ಬಸವಳಿಯುತ್ತಾ ಸಖಿಯೊ ಬ್ಬಳ ಸಾಮರ್ಗ ಸಿಕ್ಕೈಸಿದಳು.

"ಆ ದೇವತೆಗಳು ಇಂತಹ ದ್ರೋಹಕೃತ್ಯಕ್ಕೆ ಮುಂದಾದರೆ....!?" —ಅಸ್ಪಷ್ಟವಾಗಿ ಆಕೆಯ ತುಟಿಯಿಂದುದುರಿ ಬಂದ ನುಡಿಗಳು ನಳನ ಕರ್ಣಗಳಲ್ಲಿ ಮಾರ್ದನಿಸಿದವು.

"ನಳರಾಯನೇ ನನಗೆ ಪ್ರಾಣೇಶ್ವರ... ಉಳಿದವರು ನನ್ನ ಆಸೆಪಟ್ಟು ಬಯಸುವುದಾದರೂ ಏತಕ್ಕೆ....ನಾನು ನಳನನ್ನಲ್ಲದೆ ಅನ್ಯರನ್ನು ಬಯಸಿತಾ ಪತಿಯೆನಲಾರೆ... ಅವರೂ ಈತನಾರೆಂದು ತಿಳಿದು ಹೇಳಲಾರೆಯಾ.... ಈತನನ್ನು ನೋಡಿದರೆ, ಯಾವುದೋ ದೇಶದ ದೊರೆಯಂತೆ ಕಾಣುತ್ತಿದೆ...?—ದಮಯಂತಿ ತನ್ನ ಮನದಿಚ್ಛೆಯನ್ನಂತು ಸಖಿಯಲ್ಲಿ ಪ್ರಕಟಿಸಲು ಮೆಲ್ಲನೆ ನುಡಿದ ನಳರಾಯ:

"ನಾನು ನಳರಾಯ, ನಿಷಧ ದೇಶದ ಅಧಿಪತಿ! ಆದರೆ ನಾನಿಂದು ನಳರಾಯನಾಗಿ ಬರಲಿಲ್ಲ; ಆ ದೇವತೆಗಳ ದೂತನಾಗಿ ಬಂದಿದ್ದೇನೆ; ನಾನೆಂದಿಗೂ ಕರ್ತವ್ಯಭ್ರಷ್ಟನಾಗಲಾರೆನೆಂದು ಈ ಹೇಸದ ಕೆಲಸಕ್ಕೆ ಮುಂದಾಗಿದ್ದೇನೆ. ಆದುದರಿಂದ ನಾನಿಂದು ಕೇಳುವ ಪ್ರಶ್ನೆಗೆ, ನೀನು ಉತ್ತರಿಸಬೇಕಾಗಿದೆ, ದಮಯಂತಿ"

"ಓಹ್, ಇದೆಂತಹ ಉಭಯಸಂಕಟ....ನಿನ್ನ ಪ್ರಶ್ನೆಗಳಿಗೆ ನಾನೆಂತು ಉತ್ತರ ಕೊಡಲಿ....ನೀನೇ ಗ್ರಹಿಸಲಾರೆಯಾ ಉತ್ತರವ....!? ಆದರೂ ನನ್ನ ಪರವಾಗಿ ನನ್ನ ಈ ಸಖಿ ಉತ್ತರಿಸುತ್ತಾಳೆ....ಆ ದಿವಿಜೋತ್ತಮರ

ಬಯಕೆಯೇನೆಂದು ಹೇಳು...."—ದಮಯಂತಿ ಮನದ ಬೇಸರವನ್ನು ತಾಳಲಾರದೆ ಇಂತೆಂದಳು.

ತನ್ನತನವನ್ನು ಕಳೆದುಕೊಂಡಂತಾದ ನಳರಾಯ; ಕ್ರಮದಂತೆ ಕೈಮುಗಿದು ತಾನು ಬಂದ ಕಾರ್ಯವನ್ನು ಹೇಳಲನುವಾದ:

"ದಮಯಂತೀ ನಿನ್ನನ್ನು ಬಯಸಿ ಬಂದ ನಾಲ್ವರು ತೀರಾ ಸಾಮಾನ್ಯರೆಂದು ತಿಳಿದೆಯಾ....? ಒಬ್ಬಾತ ದೇವೇಂದ್ರ; ದೇವತೆಗಳ ಸಮೂಹವೇ ಆತನ ಸೇನೆ.. ರಂಭೆಯೇ ಆತನ ಒಡ್ಡೋಲಗದಲ್ಲಿ ಬಂದು ನರ್ತಿಸುವ ವಾರಾಂಗನೆ; ವಜ್ರಾಯುಧವನ್ನು ಹೊಂದಿದ ಆತನಿಗೆ ದೇವ ಲೋಕದ ಬಿಳಿಯ ಆನೆಯೇ ವಾಹನ; ನೂರು ಕಣ್ಣುಳ್ಳವನಾತ, ದೇವತೆ ಗಳಿಗೇ ಒಡೆಯ — ಅಂತಹವನನ್ನು ಬಿಟ್ಟು, ಸಾಮಾನ್ಯನಾದ ಒಬ್ಬ ರಾಜನನ್ನು ಆರಿಸುವುದರಲ್ಲಿ ಏನು ಅರ್ಥವಿದೆ ಹೇಳು! ಮಾನವತಿಯಾದ ದಮಯಂತೀ, ಮರ್ತ್ಯರಲ್ಲಿಯೂ ಅಮರ್ತ್ಯರಲ್ಲಿಯೂ ಭೇದವನ್ನು ಕಾಣಲಾರೆಯಾ?"

"ಒಲ್ಲೆ, ಇಂದ್ರನನ್ನು ನಾನು ಖಂಡಿತಾ ಒಲ್ಲೆ..."—ದಮಯಂತಿ ಯೆಂದಳು.

"ಮತ್ತೆ ಕೇಳು; ಇನ್ನೊಬ್ಬ ಮಹಾಮಹಿಮನಾದ ಯಮಧರ್ಮ! ಮುನಿದರೆ ಮೂರುಲೋಕವನ್ನು ನಿಗ್ರಹಿಸಬಲ್ಲ ಶಕ್ತಿಯುಳ್ಳಾತ; ದಿನಕರನ ಕುವರ; ಮಹಿಷಾಸನ—ಅಂತಹವನನ್ನೇಕೆ ವರಿಸಲಾರೆ ಅಬ್ಜದಳಾಕ್ಷಿ...."?

"ಒಲ್ಲೆ....ನಾನಂತು ಒಲ್ಲೆನೆಂದೇ ತಿಳಿಸಿಬಿಡು...."

"ಆದರೆ ಮಹಾಮಹಿಮನಾದ ಅಗ್ನಿಯನ್ನೂ ವರಿಸಲಾರೆಯಾ..."?

"ಊಹುಂ. ನಾನಂತು ಕಣ್ಣೆತ್ತಿ ನೋಡಲಾರೆ...."

"ಮತ್ತೆ, ಆ ದಿನಕರ! ಆತನನ್ನೇ ವರಿಸುವೆಯಾ....?

"ನಾನೊಲ್ಲೆನೆಂದೆನಲ್ಲ........" ಸಿಡುಕಿನಿಂದ ಉತ್ತರಿಸಿದಳು ದಮಯಂತಿ........

ಒಡತಿಯ ಅಭೀಷ್ಟವನ್ನು ಮತ್ತೆ ಹೇಳಿದಳು ಆ ಸಖಿ.

"ನಗೆಯೊಡೆಯನ ದೇವೇಂದ್ರ, ಪ್ರಾಣಹೀರುವ ಯಮರಾಯ, ಬಿಡವಾಗಿ ಹುಟ್ಟುವ ಸೂರ್ಯದೇವ, ಹೊಗೆಯುಗುಳುವಿನ ಅಗ್ನಿ — ಇವರಾರೂ ನಮ್ಮ ಜೊತೆಗೆ ಸರಿಸಮಾನರಲ್ಲ: ಆಕೆಯನ್ನು ವರಿಸಲು ನಳಮಹಾರಾಜನಲ್ಲದೆ ಮಿಕ್ಕವರೆಲ್ಲ ಅನರ್ಹರು—"

ಹಾಗೆ ಇಂತು ಹೇಳಲು-ಅನ್ಯತರಂಗ ನಳನ ಪ್ರಾರ್ಥಿಸಲು ತವಕಿಸುತ್ತಿರಲು—ದಮಯಂತಿ ಮುಂದೆ ಬಂದು, ನಳರಾಯನ ಪಾದಪದ್ಮಗಳಿಗೆರಗಿ, ಮತ್ತೆ ಮೆಲ್ಲನೆ ಉಸುರಿದಳು:

"ನೀನೆನಗೆ ಪತಿ, ನಾನು ನಿನ್ನ ಸತಿ, ಇದು ಸತ್ಯ. ಅತಿಶಯವಾದ ಗುಣ ವಿಶೇಷವುಳ್ಳವರು ಬಂದರೂ ಇದು ಸುಳ್ಳಾಗದು."

"ಕೃತಾರ್ಥನಾದೆ ದಮಯಂತಿ" — ನಳನಾಕೆಯನ್ನು ಸಂತೈಸಿ ಮೇಲೆತ್ತಿದ.

"ನಾಳೆಯ ದಿನ ನಡೆಯಲಿರುವ ಸ್ವಯಂವರಮಂಟಪದಲ್ಲಿ ಕ್ರಮದಂತೆ, ತಂದೆಯ ಅನುಮತಿಯನ್ನು ಪಡೆದು ನಾನು ನಿನ್ನನ್ನು ವರಿಸುವೆನು, ಭೂಪಾಲ!"—ಮತ್ತೆ ಕೈಮುಗಿಯುತ್ತೆಂದಳು ದಮಯಂತಿ.

ಈ ವಾರ್ತೆಯನ್ನೆಲ್ಲವನ್ನೂ ತನ್ನ ಹೃದಯಮಂದಿರದಲ್ಲಿ ಬಚ್ಚಿಟ್ಟು, ದಮಯಂತಿಯಿಂದ ಬೀಳ್ಕೊಂಡು, ಆನಂದದಿಂದ ಪುರಂಧರಾದಿ ದೇವತೆಗಳೆಡೆಗೆ, ಹೊರಟ ನಳರಾಯ.

ಆ ವೇಳೆಗೇ, ಸೂಕ್ಷ್ಮಾಂಗವನ್ನು ಹೊಂದಿರುತ್ತಿದ್ದ ದೇವಕನ್ನಿಕೆ 'ದಮಯಂತಿ ನಳನನ್ನಲ್ಲದೆ ಅನ್ಯರನ್ನು ಎಂದಿಗೂ ವರಿಸಲಾರೆ' ಎಂದು ತನ್ನ ಮನದ ಇಷ್ಟಾರ್ಥವನ್ನು ಪ್ರಕಟಿಸಿದ ವಿಚಾರವನ್ನು ತಿಳಿಸಿದುದರಿಂದ ಕುಂಡಿನಪುರದಿಂದ ಹಿಂದಿರುಗಿದ ನಳನನ್ನು ದೇವತೆಗಳು ಆದರದಿಂದ ಸ್ವಾಗತಿಸಿದರು. ಆದರೆ ವ್ಯಾವಹಾರಿಕ ಸಂಭಾಷಣೆ ನಡೆದಿತ್ತು.

"ಹೋದಂತಹ ಕಾರ್ಯ ಸಫಲವಾಯಿತೇ....?" — ಪ್ರಶ್ನಿಸಿದ ದೇವೇಂದ್ರ.

"ಮಹಾಮಹಿಮರಾದ ನೀವು ತಪ್ಪು ತಿಳಿದುಕೊಳ್ಳಲಾಗದು — 'ನಳನನ್ನಲ್ಲದೆ ಅನ್ಯರನ್ನು ನಾನು ಖಂಡಿತಾ ವರಿಸಲಾರೆ....'—ಎಂದು ಆಕೆ ಹೇಳಿದ್ದಾಳೆ"—ಎಂದ ನಳರಾಯ.

ವಿಷಯವನ್ನು ತಿಳಿದರೂ ಬೇಸರವನ್ನು ವ್ಯಕ್ತಪಡಿಸದೆ ನಿಂತಿದ್ದ ದೇವತೆಗಳನ್ನು ಕಂಡಾಗ ನಳರಾಯನಿಗೆ ಆಶ್ಚರ್ಯವೇ ಆಯಿತು. ಹೋದಂತಹ ಕಾರ್ಯ ವಿಫಲವಾಗಿದ್ದರೂ ಆ ಅವರು ಹಸನ್ಮುಖಿಗಳೇ ಆಗಿದ್ದಾರೆ...ಅವರ ಅಂತರಂಗದಲ್ಲಿ ಕುಹಕತನದ ಬೀಜ ಮೊಳೆತಿರುವ ವಿಚಾರ ಆತನೇನು ಬಲ್ಲ!

"ನೀನೇ ಧನ್ಯಾತ್ಮ ನಳರಾಯ. ದಮಯಂತಿಯನ್ನು ವರಿಸುವ ಮಹತ್ವಾಕಾಂಕ್ಷೆ ನಿನಗಿದ್ದರೂ, ತನ್ನ ಪಾಲಿನ ಕರ್ತವ್ಯವೆಂದು ಬಗೆದು ನಮ್ಮ ಅಭೀಷ್ಟದಂತೆ ಆಕೆಯಲ್ಲಿಗೆ ದೂತನಾಗಿ ಹೋದೆ. ಇದೋ ನಿನಗೆ ಅಶ್ವಹೃದಯ ಜ್ಞಾನವನ್ನಿತ್ತಿದ್ದೇನೆ. ಇದರಿಂದ ಕುದುರೆ ಸವಾರಿಯಲ್ಲಿ ನಿನ್ನನ್ನು ಮೀರಿಸುವ ಶಕ್ತಿ ಈ ಭೂಮಂಡಲದಲ್ಲಿ ಯಾರಿಗೂ ಇಲ್ಲದಂತಾಗುವುದು."—ಪ್ರಸನ್ನಚಿತ್ತನಾಗಿ ವರವನ್ನಿತ್ತ ದೇವೇಂದ್ರ.

"ಅನುಗ್ರಹೀತನಾದೆ ಜೀಯಾ...."—ನಳನೆಂದ.

"ನಿನ್ನ ನಿಷ್ಠೆಯನ್ನು ಮೆಚ್ಚಿದ್ದೇನೆ ನಳರಾಯ....ಇದೋ, ನಿನಗೆ ನೆನೆದಾಗ ಅಗ್ನಿಯ ಸಾಕ್ಷಾತ್ಕಾರವಾಗುವುದು...."—ಎಂದ ಅಗ್ನಿದೇವ.

"ಧನ್ಯನಾದೆ ಲೋಕಪೂಜ್ಯ...." — ವರವನ್ನು ಸ್ವೀಕರಿಸಿದ ನಳರಾಯ.

"ನಿನಗೆ ಯುದ್ಧಗಳಲ್ಲೆಲ್ಲ ವಿಜಯಶ್ರೀಯೇ ಒಲಿಯಲಿ....ಅದಕ್ಕಾಗಿ ಪ್ರತಿಪಕ್ಷದವನೆಷ್ಟು ಬಲಶಾಲಿಯಾದರೂ ಆತನ ಶಕ್ತಿಯನ್ನು ಕುಗ್ಗಿಸುವಂತಹ 'ಸಮವರ್ತಿ' ವರವನ್ನಿತ್ತಿದ್ದೇನೆ ನಳಮಹಾರಾಜ......." —ಯಮಧರ್ಮನೆಂದ.

"ತಮ್ಮ ಕೃಪೆ...."ಎನ್ನುತ್ತ ಆನಂದದಿಂದ ಅದನ್ನು ಹೊಂದಿದನಾತ.

"ನಳಮಹಾರಾಜ, ನೀನು ನೆನೆದಾಗ ಜಲಸಿದ್ಧಿಯಾಗುವುದು. ಇಗೋ ನನ್ನ ವರವನ್ನು ಸ್ವೀಕರಿಸು"—ಎಂದನು ವರುಣ.

ನಳರಾಜು ಈ ನಾಲ್ವರ ವರದಿಂದ ಪುಳಕಿತನಾದ. ಅಪ್ರಸನ್ನರಾದ ದೇವತೆಗಳಿಂದ, ನಳರಾಜು ಆತುರಾನಂದದಿಂದ ಬೀಳ್ಕೊಂಡು ಬಂದಾಗ ಆ ದಿವಿಜರು ಮುಂದಿನ ಉಪಾಯವನ್ನು ಕುರಿತಾಗಿ ಚಿಂತಿಸಿದರು.

"ನಳನನ್ನಲ್ಲದೆ ಆ ದಮಯಂತಿ ಅನ್ಯರನ್ನು ಕಣ್ಣೆತ್ತಿಯೂ ನೋಡಲಾರಳು...."—ದೇವೇಂದ್ರನೆಂದ.

"ಭೂಲೋಕದ ಕನ್ನಿಕೆಯೊಬ್ಬಳಿಂದ ಪ್ರೀತಿಸಲ್ಪಡದವರಾಗಿ. ನಾವು ದೇವತೆಗಳಾಗಿ ಇದ್ದು ಫಲವೇನು......."— ಯಮರಾಯ ಬಿಸುಸುಯ್ದ.

"ದಮಯಂತಿ, ನಳನನ್ನು ವರಿಸದಂತೆ ಮಾಡಬೇಕು"— ಅಗ್ನಿಯ ನಿರ್ಧಾರ.

"ಯಾವ ಉಪಾಯದಿಂದಾದರೂ ಸರಿಯೆ... ಈ ಕಾರ್ಯ ನಡೆದೇ ತೀರಬೇಕು"—ಸೂರ್ಯದೇವನೆಂದ.

ಚಿಂತಿಸಿ, ಚಿಂತಿಸಿ ಮತ್ತೆ ಒಂದು ಉಪಾಯ ಹೊಳೆದನಂತರ, ನಗುಮುಖದಿಂದ ಅಂದನು ದೇವೇಂದ್ರ:

"ಗುಣಶೀಲನಾದ ನಳನನ್ನಲ್ಲದೆ ಕಾಂತೆ ಅನ್ಯರನ್ನು ವರಿಸಳು. ಅದನ್ನು ತಪ್ಪಿಸಲು ಇರುವ ಒಂದೇ ಒಂದು ಉಪಾಯವೆಂದರೆ ನಾವು ನಾಲ್ವರೂ ನಳರೂಪವನ್ನು ತಾಳುವುದು. ಒಂದಿಷ್ಟೂ ಭೇದವಿಲ್ಲದಂತೆ– ವ್ಯತ್ಯಾಸ ತಿಳಿಯದಂತೆ ನಾವು ನಾಲ್ವರು ನಳನಂತಾದರೆ ದಮಯಂತಿ ನಮ್ಮೆಲ್ಲರನ್ನು ನಳನೆಂದು ಬಗೆದು ಚಿಂತಿತ ವರಿಸುವಳು...."

"ಇದು ಸರಿಯಾದ ಉಪಾಯ" — ಉಳಿದ ಮೂವರೂ ಅನುಮೋದಿಸಿದರು: ಕೂಡಲೇ ಸುರಪತಿ, ವಹ್ನಿ, ಕಾಲ, ವರುಣ– ನಳನಂತೆ ರೂಪ ತಳೆಯಲು ನಿರ್ಧರಿಸಿದ್ದರು.

ಇನ್ನು ಒಂದು ದಿನ ಕಾದಿರಬೇಕು. ರಾತ್ರಿ ಬೆಳಗಾದರೆ ಸಾಕು ಮುಂದಿನ ಮುಂಜಾನೆ ಸ್ವಯಂವರ. ಮೂಲೆಮೂಲೆಗಳಿಂದ ವಿದರ್ಭ ದೇಶಕ್ಕೆ ಬಂದ ರಾಜಾಧಿರಾಜರುಗಳ ಸಂಭ್ರಮ ಹೇಳತೀರದು.

ಎಲ್ಲರಲ್ಲೂ ಒಂದೇ ಉತ್ಸಾಹ—ದಮಯಂತಿ ತಮ್ಮನ್ನೇ ವರಿಸುವಳು, ಎಂದು.

ಭೀಮನೃಪಾಲ, ಪ್ರತಿಯೊರ್ವರನ್ನೂ ತನ್ನ ಪ್ರತಿಷ್ಠೆಗನುಸಾರ ವಾಗಿ ಸತ್ಕರಿಸಿದ. ಅವರು ಉಳಕೊಳ್ಳಲು ಎಲ್ಲ ರೀತಿಯ ಸವಲತ್ತು ಗಳನ್ನು ಒದಗಿಸಿದ.

ಕೊಂಬುಕಹಳೆಗಳು ಮುಗಿಲೆತ್ತರದಿಂದ ಪ್ರತಿಧ್ವನಿಸುತ್ತಿರಲು, ರಥವಾಹನಗಳ ಗುಂಪು, ಉದ್ಯಾನದಲ್ಲಿ ಬೀಡುಬಿಟ್ಟಿದ್ದವು.

ಇಂದು ದಮಯಂತಿಯ ನಿಜಸ್ವಯಂವರ........

ಆಕೆಯ ಅಲಂಕಾರ ನಡೆಯುತ್ತಿತ್ತು. ಜೊತೆಸೇರಿದ ಸಖಿಯರು ಆಕೆಯನ್ನು ತುಂಬುಬಗೆಯಿಂದ ಹರ್ಷಚಿತ್ತಳಾಗುವಂತೆ ಮಾಡುತ್ತಿದ್ದರು. ಒಬ್ಬಳು ಮುತ್ತಿನ ಮೂಗುತಿ ತೊಡಿಸುತ್ತ ಅದರ ಗುಣವಿಶೇಷವನ್ನು ಹೊಗಳುತ್ತಿದ್ದರೆ, ಮಗದೊಬ್ಬಳು ವಜ್ರಖಚಿತ ಬೆಂಡೋಲೆಗಳನ್ನು ತೊಡಿಸಿದಳು. ನಕ್ಕು ನುಡಿಯುತ್ತ, ಬದುಕಿನ ಮುಂದಿನ ದಿನಗಳ ಮಧುರ ಕನಸಿನ ಸೆನಹನ್ನು ದಮಯಂತಿಯ ಎದೆಯಲ್ಲಿ ನಾಟುತ್ತ, ಹಣೆಯಲ್ಲಿ ಅರ್ಧಚಂದ್ರನಾಕೃತಿಯಲ್ಲಿ ಕುಂಕುಮವನ್ನು ಹಚ್ಚಿದಳು ಒಬ್ಬಾಕೆ. ಈ ಸುಮಂಗಲಿಯರೆಲ್ಲರೂ ಹಾಡುತ್ತ, ನಲಿಯುತ್ತ, ದಮಯಂತಿ ಅದಾವುದೋ ಮಧುರಯಾತನೆಯನ್ನು ಅನುಭವಿಸುವಂತೆ ಮಾಡುತ್ತಿದ್ದರು.

ಪಟ್ಟೆಪೀತಾಂಬರಗಳನ್ನುಟ್ಟು ಸ್ವಯಂವರ ಮಂಟಪಕ್ಕೆ ಹೊರಡಲು ಸನ್ನದ್ಧಳಾಗಿ ನಿಂತಿದ್ದಳಾಕೆ. ಕತ್ತಿನಲ್ಲಿ ರಂಜಿಸುತ್ತಿದ್ದ ನವರತ್ನಖಚಿತ ಹಾರವನ್ನು ಮಿಗಿಲೇರಿಸುವಂತೆ– ಉದಯಿಸುವ ರವಿಯಂತೆ—ಆಕೆಯ ಮುಖಕಾಂತಿ ಬೆಳಗುತ್ತಿತ್ತು!

ಆಕೆಯ ದೇಹವಿಡೀ ಹೊನ್ನಿನಂತೆ ಕಾಂತಿಯುತವಾಗಿತ್ತು; ಹಣೆಯ ಅರ್ಧಚಂದ್ರಾಕೃತಿಯಿಂದ ಹನಿದ ಜೇನಿನ ಬಿಂದುವೋ ಎಂಬಂತೆ ಮೂಗುತ್ತಿ

ರಂಜಿಸುತ್ತಿತ್ತು: ಆಕೆಯನ್ನಿಟ್ಟು ನಳನನ್ನು ನೋಡಬೇಕೆಂಬಾಸೆಯನ್ನು ಹೊಂದಿದ್ದಳೋ ಎಂಬಂತೆ ಆಕೆಯ ಕಣ್ಣುಗಳ ಸುತ್ತಲೂ ಹಚ್ಚಿದ್ದ ಕಾಡಿಗೆಯು ಕಪ್ಪು ಮಿರುಗುತ್ತಿತ್ತು! ಮನ್ಮಥನ ಮೋಹನಾಸ್ತ್ರವೇ ಹೆಣ್ಣಿನ ರೂಪವನ್ನು ತಾಳಿ ನಿಂತಿದೆಯೋ, ಚಂದ್ರಲೇಖೆ ಕಾಮಿನಿಯಾಗಿನಿಂತಳೋ. ನಿರ್ಮಲವಾದ ಸುಧೆಯೇ ಅಂಗನೆಯಾಗಿ ಬಂದಳೋ, ಮಿಂಚೇ ಮಾನಿನಿಯಂತಾದಳೋ, ಈ ಭುವಿಗೆ ರತಿ ದೇವಿಯೇ ತಾನಿಳಿದು ಬಂದಳೋ ಎಂಬಂತೆ, ಅತಿಶಯ ಸೌಂದರ್ಯವನ್ನು ಹೊಂದಿದ್ದ ದಮಯಂತಿ ಮೆರೆದಳು.

ಹಿಮಕರನ ಬಿಂಬವನ್ನು ಸುಧೆಯಲ್ಲಿದ್ದ ಕಾಂತಿ ಆಕೆಯ ಮುಖದಲ್ಲಿ ನೆಲೆಸಿತ್ತು; ಎಳೆಯ ಚಿಗುರೊಂದಕ್ಕೆ ಮಾಣಿಕ್ಯದ ಒಪ್ಪವಿಟ್ಟಂತೆ ಅಧರ ಮಿನುಗುತ್ತಿತ್ತು; ಮನ್ಮಥನ ಆಯುಧವನ್ನು ಕುಡಿಮಿಂಚಿನಲ್ಲಿ ಅದ್ದಿ ದಂತಹ ಆಕೆಯ ನಯನಗಳು—ಆ ಸೊಬಗು, ಆ ಬೆಡಗು, ಆ ಬಿನ್ನಾಣ—ಎಷ್ಟು ವರ್ಣಿಸಿದರೂ ಅಲ್ಲದೇ....ಬಣ್ಣಗಳಲ್ಲಿ ಸೆರೆಹಿಡಿಯಲಾರದಂತಹ ಸೌಂದರ್ಯವದು.

ಅತ್ತ ಸ್ವಯಂವರ ಮಂಟಪದಲ್ಲಿ ನೆರೆದಿದ್ದ ನೃಪಾಲರೆಲ್ಲ ತಮ್ಮನ್ನು ಇತರರೊಂದಿಗೆ ಹೋಲಿಸಿಕೊಂಡು, ಸೌಂದರ್ಯದಲ್ಲಿ ಯಾರು ಮಿಗಿಲೆಂದು ತಮ್ಮ ಮನದಲ್ಲೇ ಲೆಕ್ಕಹಾಕುತ್ತಿರಲು ಎಲ್ಲರ ನಯನಗಳೂ ಒಂದೆಡೆ ಕೇಂದ್ರೀಕೃತವಾಗಿದ್ದುವು. ದೇವತೆಗಳಂತೆ ರಾರಾಜಿಸುವ ಐದು ಮಂದಿ ಆಸನಾರೂಢರಾಗಿದ್ದಾರೆ: ಒಂದೇ ಮುಖವಾಡವನ್ನು ಐವರೂ ಧರಿಸಿರುವರೋ ಅಥವಾ, ಐವರೂ ಈ ಭೂಮಿಯಲ್ಲಿ ಒಮ್ಮೆಯೇ, ಒಂದೇ ತಾಯಿಯ ಉದರದಲ್ಲಿ ಹುಟ್ಟಿ ಬಂದರೋ ಎಂಬಂತೆ, ನಖಶಿಖಾಂತ ಒಂದಿನಿತು ವ್ಯತ್ಯಾಸವಿಲ್ಲದ ರೂಪವದು! ನಿಜವಾಗಿಯೂ ಆ ಐವರೂ ಸುಂದರರಾಗಿದ್ದಾರೆ: ಮೋರೆಯಲ್ಲಿ ತೇಜಸ್ಸಿತ್ತು: ವೀರಾಧಿ ವೀರರಂತೆ ಕಾಣಿಸುತ್ತಿದ್ದರು. ಈ ಐವರಲ್ಲಿ ಒಬ್ಬನನ್ನಲ್ಲದೆ ಅನ್ಯರನ್ನು ದಮಯಂತಿ ಖಂಡಿತಾ ವರಿಸಳು—ಎಂದು ಇತರ ರಾಜರುಗಳು ಲೆಕ್ಕ ಹಾಕುತ್ತಿರಲು ನಿಮಿಷವೆಲ್ಲ ಯುಗಗಳಾಗಿ ಕಂಡಿತವರಿಗೆ. ಮನದ ಒಳಗೆ ದಮಯಂತಿಯ ರೂಪ; ನಯನದೆದುರಿಗೆ ರಾರಾಜಿಸುವ ಆ ಐವರು, ಮಹಾಮಹಿಮರು! ಭ್ರಮೆಗೊಂಡವರಂತೆ ಕಳಾಹೀನರಾಗಿ ಕುಳಿತಿದ್ದ

ರಾಜರುಗಳಿಗೆಲ್ಲ ದಮಯಂತಿ ಸ್ವಯಂವರಮಂಟಪವನ್ನು ಪ್ರವೇಶಿಸಿದ ವಾರ್ತೆ ತಿಳಿದಾಗ ಎಂತಹ ಅನುಭವವಾಗಿರಲಿಕ್ಕಿಲ್ಲ! ಉತ್ಸುಕರಾಗಿ, ಆಕೆಯ ನಡಿಗೆಯನ್ನೇ ಈಕ್ಷಿಸಿದರು.

ಆ ನಡಿಗೆ, ಆ ಒನಪು, ಆ ವೈಯಾರ—ಇವೆಲ್ಲದಕ್ಕೂ ಮಿಗಿಲಾಗಿ ಆಕೆ ಕೈಯೊಳು ಧರಿಸಿದ್ದ ಆ ಪುಷ್ಪಹಾರ....! ಎಷ್ಟೊಂದು ಆಸೆ, ಆಕಾಂಕ್ಷೆಗಳು ಆ ಹೂಮಾಲೆಯಲ್ಲಿ ಘನೀಭವಿಸಿದೆಯೋ ಎಂಬಂತೆ ಮಿರಮಿರನೆ ಮಿರುಗುತ್ತಿದ್ದವು ಮಾಲೆಯೊಳು ಹುದುಗಿದ್ದ ಸೌಗಂಧಿಕ ಪುಷ್ಪಗಳು.

ಮಧುರನಿನಾದಗಳು ಕೇಳಿಬರುತ್ತಿರಲು, ತುಂಬಿಗಳ ಹಿಂಡುಗಳೇ ಅರಳಿನಿಂತ ಸುಮವನ್ನು ಆಘ್ರಾಣಿಸಲು, ಧಾಳಿ ನಡೆಸುತ್ತಿವೆಯೋ ಎಂಬಂತೆ ಭಾಸವಾಗುತ್ತಿತ್ತು; ಮತ್ತೆ ಆ ಪುಷ್ಪಮಾಲಿಕೆ—ಅದನ್ನು ನೆಟ್ಟನೋಟದಿಂದ ನೋಡುವ ನೂರಾರು ಕಣ್ಣುಗಳು ದುಂಬಿಗಳಂತೆ ಮೆರೆದಿದ್ದವು.

ಇನ್ನೇನು ದಮಯಂತಿ ಪುಷ್ಪಮಾಲಿಕೆಯನ್ನು ಹಿಡಿದು, ತನ್ನ ಮನೋವಲ್ಲಭನನ್ನು ವರಿಸಲು ಮುಂದೆ ಹೋಗಬೇಕು....ಕತ್ತೆತ್ತಿದ್ದ ಮಾಡಿ ಆತುರತುಂಬಿ ನೋಡುವ ರಾಜಾಧಿರಾಜರ ಪರಾಕ್ರಮ, ವೈಭವವನ್ನೆಲ್ಲ ಕೇಳಿ ತಿಳಿದುಕೊಳ್ಳಬೇಕು; ಮತ್ತೆ ತನ್ನ ಮನದೊಡೆಯನನ್ನು ಆರಿಸಬೇಕು!

ದಮಯಂತಿಯ ಈ ಸ್ವಯಂವರದ ವಾರ್ತೆ ತ್ರಿಲೋಕದಲ್ಲೆಲ್ಲ ಪಸರಿಸಿರಲು ಅತ್ಯುತ್ಕಟ ಬಯಕೆಯಿಂದ ಈ ಶುಭವೇಳೆಯಲ್ಲಿ ಭಾಗವಹಿಸಲು ಸರಸಿಜೋದ್ಭವನ ರಾಣಿ ಭಾರತಿ ಕೂಡಾ ಬಂದಿದ್ದಳು. ಆಕೆ ತನ್ನ ನಿಜರೂಪವನ್ನು ಅಲ್ಲಿ ಪ್ರಕಟಗೊಳಿಸುವಂತಿಲ್ಲ. ಬಯಕೆ, ದಮಯಂತಿಯ ಸ್ವಯಂವರವನ್ನು ನೋಡಬೇಕೆಂದು ಕಾಡಿದಾಗ ಆಕೆ ಕಳಾವತಿಯೆಂಬ ಹೆಸರಿನಲ್ಲಿ ಸಖೀಜನರ ನಡುವೆ ಸೇರಿಕೊಂಡಿದ್ದಳು.

ಅಲ್ಲಿ ಆಸೀನರಾಗಿದ್ದ ರಾಜಾಧಿರಾಜರ ಪರಿಚಯವನ್ನು ದಮಯಂತಿಗೆ ಮಾಡಿಕೊಡುವ ಕಾರ್ಯಭಾರವೂ ಕಳಾವತಿಯ ಮೇಲೆ ಬಂದಾಗ, ಆಕೆ ಹಿಂಜರಿಯದೆ ಒಬ್ಬೊಬ್ಬ ಅರಸರ ಪರಿಚಯವನ್ನೂ, ಗುಣವಿಶೇಷಗಳನ್ನೂ, ವಿವರಿಸಿ ದಮಯಂತಿಗೆ ತಿಳಿಯಪಡಿಸಿದಳು.

ಹೀಗೆ ಒಬ್ಬೊಬ್ಬರನ್ನು ದಾಟಿ ಮುಂದೆ ಬಂದಾಗ, ಅಲ್ಲಿ ಐವರು ನಳರನ್ನು ಕಂಡು, ಅವರ ಬಗೆಗೆ ವರ್ಣನೆ ನೀಡಲಾರದೆ—

"ನೋಡು ದಮಯಂತಿ...ಇಲ್ಲಿ ಐವರು ನಳರಿದ್ದಾರೆ.... ನಿನ್ನ ಮನೋವಲ್ಲಭನಾರೋ ನಾನರಿಯೆ. ಅತನನ್ನು ಅರಿಸುವ ಹೊಣೆ ನಿನ್ನದು ..."—ಎಂದು ಚತುರತೆಯಿಂದ ಕಳಾವತಿ ಹೇಳಿದಳು. ಬೇರೆ ದಾರಿಗಾಣದೆ ಆ ಐವರನ್ನೂ ಕಣ್ಣೆತ್ತಿ ನೋಡಿದಳು ದಮಯಂತಿ.

ಆ ಐದು ಜನರೂ ನೆಟ್ಟನೋಟದಿಂದ ತನ್ನನ್ನೇ ನೋಡುತ್ತಿರಲು ತುಸು ಅಳುಕಿದಳು ದಮಯಂತಿ. ಕಾರ್ಯ ಕೈಗೂಡದೇನಾದರೆ ಈಗೇನಾದರೂ ಮಾಡಲೇಬೇಕೆಂದು ಬಗೆದಳಾಕೆ.

"ಕಳಾವತೀ, ಇವರಲ್ಲಿ ಏನೋ ಕುಟಿಲತೆ ನಡೆದಿದೆ. ಭೂಮಿಗೆ ಎರಡು ಸೂರ್ಯರು ಒಮ್ಮೆಲೇ ಕಾಣಿಸಿಕೊಂಡರೆ ಉತ್ಪಾತವೇ ಸಂಭವಿಸುವುದು....! ವಿಚಾರಿಸಿ ಹೇಳು ಕಳಾವತಿ, ಇಲ್ಲಿ ಏನೋ ಮೋಸದ ಜಾಲ ಕವಿದಿದೆಯೆನ್ನುವುದು ಸತ್ಯತಾನೆ?"

"ಇರಬಹುದು ದೇವಿ...."

ನಳನನ್ನುಳಿದು ಅನ್ಯರನ್ನು ತಾನು ಮನಸ್ಸಿನಲ್ಲಿಯೂ ನೆನೆಯಲಾರೆ ನೆಂದು, ಸುಗಂಧಭರಿತ ಕುಸುಮಗಳನ್ನು ಹೊಂದಿದ್ದ ದಿವ್ಯವಾದ ಪುಷ್ಪಮಾಲಿಕೆಯನ್ನು ಕೈಯಲ್ಲಿ ಹಿಡಿದೇ ಮತ್ತೊಮ್ಮೆ ಪಂಚನಳರನ್ನು ನೋಡಿದಳು ದಮಯಂತಿ.

ಎರಡು ಕುಲಗಳನ್ನು ಬೆಳಗುವ ಯೋಗ ನನಗಿದ್ದೇ ಇದೆಯಾದರೆ, ನಾನು ಈ ವರೆಗೆ ಪಾವಿತ್ರ್ಯವನ್ನು ಉಳಿಸಿಕೊಂಡು ಬಂದಿರುವೆನಾದರೆ, ನಳನನ್ನೆ ತನ್ನ ಪತಿಯನ್ನಾಗಿ ಪಡೆಯುವ ದೃಢ ನಿಶ್ಚಯವುಳ್ಳವಳಾಗಿದ್ದರೆ ಈ ಕೃತಕ ನಳರೆಲ್ಲ ಮರೆಯಾಗಿ ನಿಜ ನಳನು ಗೋಚರಿಸಬಾರದೇಕೆ? —ದಮಯಂತಿ ಚಿಂತಿಸಿದಳು.

ಪುಷ್ಪಮಾಲಿಕೆಯನ್ನು ಎತ್ತಿ ಹಿಡಿದು — "ನಾನು ಮನದಲ್ಲಿ ಅನ್ಯರನ್ನು ನೆನೆಸದೆಯೇ, ನಳನನ್ನೇ ಪತಿಯನ್ನಾಗಿ ಪಡೆವ ಅಭಿಲಾಷೆ ಯನ್ನು ಹೊಂದಿರುವುದಾದರೆ, ಈ ದಿವ್ಯ ಪುಷ್ಪಮಾಲಿಕೆ ಕೃತಕ ನಳರನ್ನು

ಹೋಗಲಾಡಿಸಲಿ. ನನ್ನ ಆತ್ಮದೇವತೆಯ ದರ್ಶನವಾಗಲಿ...."—ಎಂದು ಭಕ್ತಿಯಿಂದ ನಮಸ್ಕರಿಸಿದಳು ದಮಯಂತಿ. ಇದನ್ನು ಕಂಡು, ಭಯಗೊಂಡು ನಡುಗಿದ ಆ ನಾಲ್ವರು ದೇವತೆಗಳೂ ತಮ್ಮ ನಿಜರೂಪವನ್ನು ತಾಳಿದರು.

ತನ್ನ ಪ್ರಯತ್ನ ಫಲಿಸಿತೆಂಬ ಸಂತಸದಿಂದ ಮುಂದೆ ಬಂದ ದಮಯಂತಿ ನಳರಾಯನಿಗೆ ಕೈಮುಗಿದು, ದೇವರನ್ನು ಸ್ತುತಿಸಿ ಭರದಿಂದ ನಳನ ಕತ್ತಿಗೆ ಆ ಕುಸುಮಮಾಲೆಯನ್ನು ಇಕ್ಕಿದಳು.

ತುಂಬಿದ್ದ ಸ್ವಯಂವರ ಮಂಟಪದಿಂದ ಕೆಲವು ರಾಜಾಧಿರಾಜರು ಒಬ್ಬೊಬ್ಬರಾಗಿಯೇ ಹೊರಡುತ್ತಿರಲು, ಇಲ್ಲಿ ನಡೆದ ಈ ಅದ್ಭುತವನ್ನು ಕಂಡು ಮತ್ತೆ ಕೆಲವರು ನಿಬ್ಬೆರಗಾಗಿ ನಿಂತಿರಲು—ದೇವೇಂದ್ರ, ಅಗ್ನಿ, ಯಮ, ವರುಣರು ನಳದಮಯಂತಿಯರನ್ನು ಹರಸಿ, "ಲಲನೆಯ ಪಾತಿವ್ರತ್ಯವನ್ನು ಕೆಡಿಸಲು ಬಂದವರು ಸುಟ್ಟು ಭಸ್ಮವಾಗಲಿ"—ಎಂಬ ವರವನ್ನಿತ್ತು ಅಂಬರಕ್ಕೆ ಅಡರಿದರು.

ದಮಯಂತಿಯಿಂದ ಅಲಂಕರಿಸಲ್ಪಟ್ಟ ಪುಷ್ಪಮಾಲಿಕೆ ನಳರಾಯನ ಕೊರಳಲ್ಲಿ ರಾರಾಜಿಸುತ್ತಿತ್ತು. ಪರಮಪವಿತ್ರನಾದ, ಚಾರಿತ್ರ್ಯವಂತನಾದ ಗುಣಾನ್ವಿತನಾದ ನಳರಾಯ ಹರ್ಷಚಿತ್ತದಿಂದ ಸೇರಿದ್ದ ಭೂಪಾಲಕರನ್ನೆಲ್ಲ ನಗುಮುಖದಿಂದ ಎದುರುಗೊಂಡ.

ಕೆಲವರು ನಳನನ್ನು ಹರಸಿದರೆ, ಮತ್ತೆ ಕೆಲವರು ಮುಳಿದರು.... ಇನ್ನು ಕೆಲವರು ಆತನ ಹತ್ತಿರಕ್ಕೂ ಸುಳಿಯದೆ ದೂರದಿಂದಲೇ ಹೊರಟು ಹೋದರು.

ವರಿಸಿದ ಕಾಂತೆಯನ್ನೂ, ವರಿಸಿಕೊಂಡ ಮನಃಪ್ರಿಯನನ್ನೂ ಆಗಲೇ ನಿಜಸ್ವಯಂವರ ಮಂಟಪಕ್ಕೆ ಕರೆದೊಯ್ದ ಭೀಮನೃಪಾಲ. ತಳಿರು ತೋರಣಗಳಿಂದ ರಾರಾಜಿಸುತ್ತಿದ್ದ ಆ ಮಂಟಪದಲ್ಲಿ ಕಂಗೊಳಿಸುತ್ತಿದ್ದ ವಧೂವರರನ್ನು ಬಿಗಿದಪ್ಪಿ ಅಭಿನಂದಿಸಿ, ತನ್ನ ಮನಸಿನ ಸಂತಸವನ್ನು ವ್ಯಕ್ತಪಡಿಸಿ ಹರಸಿದನಾತ.

ಇನ್ನು ನಡೆಯಲಿರುವುದು ಮಹತ್ತರವಾದ ಕಾರ್ಯ—ಶಾಸ್ತ್ರೋ
ಕ್ತವಾಗಿ ಸ್ವಯಂವರ ನಡೆಯಬೇಕು. ಭೀಮನೃಪಾಲನ ಕರ್ತವ್ಯದ
ಹೊರೆ ಅರ್ಧದಷ್ಟೇ ಮುಗಿದಿತ್ತು; ಉಳಿದರ್ಧ ಇನ್ನೂ ಹಾಗೆಯೇ
ಉಳಿದಿತ್ತು. ಆನಂದಾತಿರೇಕದಿಂದ ಮತ್ತೆ ಅವಸರವಾಗಿದ
ಭೀಮನೃಪಾಲ—

“ಪರಿಚಾರಕರೇ ಇತ್ತ ಬನ್ನಿ....ಇಲ್ಲಿ ಹಸೆಯನ್ನಿಕ್ಕಿ, ಅಲ್ಲಿ ಮಜ್ಜನ
ಗೃಹದಲ್ಲಿ ಸುಗಂಧ ದ್ರವ್ಯವನ್ನೆಲ್ಲ ತಂದಿರಿಸಲು ಮರೆಯಬೇಡಿ.. ಪೂ
ಮಂಗಳವಾದ್ಯ ಜೋರಾಗಿ ಮೊಳಗಲಿ.. ನವರತ್ನದಾರತಿಗಳು ಸಿದ್ಧವಾಗಿ
ದೆಯಲ್ಲ....”—ಎಲ್ಲವನ್ನೂ ತಾನೇ ಸ್ವತಃ ಹೋಗಿ ನಿಮಿಷಮಾತ್ರದಲ್ಲಿ
ಮುಗಿಸಿ ಬಂದ ಭೀಮನೃಪಾಲ—“ಇನ್ನು ಪುರೋಹಿತರು ಹೇಳಬೇ
ಬಾರದು. ಶುಭಕಾರ್ಯ ಬೇಗ ನೆರವೇರಲಿ.. ಆತುರದಿಂದ ಧರ್ಮಧ
ಚಿಂತೆಯಲ್ಲಿ ಮುಳುಗಿಹೋದ ಭೀಮನೃಪಾಲ.

ಕ್ರಮದಂತೆ ನಳದಮಯಂತಿಯರು ಸ್ವಯಂವರ ಮಂಟಪಕ
ಬಂದರು. ಮೃದು ವಸ್ತ್ರಾಭರಣಗಳನ್ನು ಧರಿಸಿದ ಆ ದಮಯಂತಿ-
ನಳರು ಹಸೆಮಣೆಯಲ್ಲಿ ಬಂದು [illegible] ಕುಳಿತರು.

ಮುಹೂರ್ತ ಕಾಲ ಕೂಡಿಬಂತು. ದಮಯಂತಿಯು ಕೈಯನ್ನು
ನಿಷಧಾಧಿಪತಿಯಾದ ನಳನ ಕೈಯಲ್ಲಿರಿಸಿ, ಅಶ್ವಹಸ್ತಿಗಳನೇಕವ
ದಮಯಂತಿಯೊಂದಿಗೇನೇ ಜಲಧಾರೆಯೆರೆದು ನಳಭೂಪಾಲಕನಿಗೆ ಇ
ಭೀಮನೃಪಾಲನ ಆನಂದಕ್ಕೆ ಪಾರವೇ ಇಲ್ಲ. ಜೊತೆಗೆ ಉ
ಮೋತ್ತಮ ಪೀತಾಂಬರವನ್ನು ದಮಯಂತಿಗೆ ಬಳುವಳಿಯಾಗಿ ಕೊಡ
ಆತ ಮರೆಯಲಿಲ್ಲ.

ಕರ್ತವ್ಯದ ಹೊರೆಯನ್ನೆಲ್ಲ ಕೆಳಗಿಳಿಸಿದಾಗ ನಂದನೆಯನ್ನು
ಗೃಹಕ್ಕೆ ಕಳುಹಿಸಿಕೊಡುವ ಕಾರ್ಯಭಾರ! ಎಳವೆಯಿಂದಲೂ ಸಾ
ಸಲಹಿ ದೊಡ್ಡವಳನ್ನಾಗಿ ಮಾಡಿದ ಹೆತ್ತ ಕರುಳಿನ ಕೊರೆತ ಅಳಲನ
ಒಂದೆ, ಒಡವನಿಗೂ ಒಂದೆ!

ದಮಯಂತಿ ಪತಿಯೊಡನೆ ಹೊರಟುನಿಂತಾಗ, ಭೀಮನೃಪಾಲ ವಧೂವರರನ್ನು ಮತ್ತೊಮ್ಮೆ ಹರಸಿದ. ಪಾದಮುಟ್ಟಿ ನಮಸ್ಕರಿಸಿದ ದಮಯಂತಿ ಕಣ್ಣೋಟದಿಂದಲೇ ಹೋಗಿಬರುವೆನೆಂದು ಮೂಕವಾಗಿ ತಿಳಿಸಿದಾಗ, ಭೀಮನೃಪಾಲನ ನಯನಗಳು ತುಂಬಿ ಬಂದಿದ್ದವು. ಮುತ್ತಿನಂತಹ ಒಂದು ಹನಿ ಕಣ್ಣೀರು, ಗಲ್ಲವನ್ನು ತೊಯ್ದು ನೆಲದಲ್ಲಿ ಬಿದ್ದು ಇಂಗಿಹೋಯಿತು:

"ನಳರಾಯ, ನನ್ನ ಮಗಳ ಸಂಪೂರ್ಣ ಜವಾಬ್ದಾರಿಯನ್ನು ನಿನಗಿಂದು ಒಪ್ಪಿಸಿದ್ದೇನೆ. ಆಕೆಯಿನ್ನೂ ಎಳೆಯವಳು. ಆಕೆ ವ್ಯವಹಾರ ಜ್ಞಾನವರಿತವಳಲ್ಲ. ಅಂತಹ, ನಮ್ಮರಮನೆಯ ಕುಡಿಯನ್ನು ಇಂದು ನಿನ್ನ ಮಡಿಲಲ್ಲಿರಿಸಿದ್ದೇನೆ. ಸಲಹುವ ಭಾರ ನಿನ್ನದು...."

—ಭೀಮನೃಪಾಲ ನಳನ ಕೈಹಿಡಿದು ವಿನಮ್ರವಾಗಿ ವಿನಂತಿಸಿದ್ದ.

ಈ ಭವಬಂಧನದಿಂದ ಮಾನವ ಹೊರಗಾಗಲು ಸಾಧ್ಯವೇ ಇಲ್ಲ. ಒಂದು ನಿಮಿಷ ಬೇಸರವಾಗುತ್ತದೆ; ದುಃಖ ಉಮ್ಮಳಿಸುತ್ತದೆ; ಒಂದು ಹನಿ ಕಣ್ಣೀರೂ ತೊಟ್ಟಿಕ್ಕುತ್ತದೆ. ಆದರೆ ಮರುಕ್ಷಣದಲ್ಲಿಯೇ ಬಿರುಗಾಳಿಯ ಬಳಿಕದ ಶಾಂತತೆಯಂತೆ, ನೆರೆಯ ನೀರು ಇಳಿದಾಗ ನದಿ ಪ್ರಶಾಂತವಾಗಿ ಪ್ರವಹಿಸುವಂತೆ--ಮನಸ್ಸಿನ ವೇಗಕೂಡ ಮಂದವಾಗುತ್ತದೆ. ದುಃಖದುಮ್ಮಾನಗಳೆಲ್ಲ ಮಾಯವಾಗುತ್ತವೆ.

ದಮಯಂತಿಯನ್ನು ಹೂವಿನ ಎಸಳೂ ಬಾಡದಂತೆ ನೋಡಿಕೊಳ್ಳುವೆನೆಂದು ಭರವಸೆಯಿತ್ತು ನಳ ಆತನ ಪರಿವಾರ ಸಮೇತವಾಗಿ ರಾಜೋಚಿತವಾಗಿ ಭೀಮನೃಪಾಲನಿಂದ ಬೀಳ್ಕೊಂಡು ವಿಮಳಾಪಟ್ಟಣದತ್ತ ಪ್ರಯಾಣ ಬೆಳೆಸಿದ.

ಆ ನಿಷಧದೇಶದ ಉತ್ಸಾಹ ಹೇಳತೀರದು....

ಪರಾಕ್ರಮಿ, ಗುಣವಂತ, ನೀತಿವಂತನಾದ ನಳರಾಯ, ತನಗೆ ಅನುರೂಪಳಾದ – ಸರಿಸಮಾನಳಾದ – ಕನ್ಯೆಯನ್ನು ಸ್ವಯಂವರದಲ್ಲಿ

ಪತಿಯು ಬಂದಿರುವ ವಾರ್ತೆ ನಗರದಲ್ಲೆಲ್ಲಾ ಹರಡಿ. ಜನರು ಉತ್ಸಾಹದಿಂದ ಆ ದಂಪತಿಗಳನ್ನು ನೋಡಲು ಓಡೋಡಿ ಬಂದರು. ನಗರವೆಲ್ಲ ಆಗಲೇ ತಳಿರು ತೋರಣಗಳಿಂದ ಸಿಂಗರಿಸಲ್ಪಟ್ಟಿತ್ತು. ಯಾವ ಬೀದಿಯಲ್ಲೇ ಸಾಗಲಿ ನವದಂಪತಿಗಳಿಗೆ ಪುಷ್ಪವೃಷ್ಟಿಯನ್ನೆರೆಯಲು ಪ್ರಜೆಗಳು ಕಾದುಕೊಂಡಿದ್ದರು. ರಸ್ತೆಯುದ್ದಕ್ಕೂ ಸೋಬಾನೆ ಹಾಡುತ್ತಾ ಬರುವ ಮಂಗಳನಾರಿಯರು. ಕೊಂಬುಕಹಳೆಗಳನ್ನು ಊದುತ್ತ ಬರುವ ವೀರಭಟರು—ಆ ವೈಭವ, ಆ ಸಂಭ್ರಮವನ್ನು ಕಂಡು ದಮಯಂತಿ ಮನದಲ್ಲೇ ಹಿರಿಹಿಗ್ಗಿದಳು—"ಅಪೂರ್ಣವಾದ ತನ್ನ ಬದುಕು ಇಂದು ಪರಿಪೂರ್ಣವಾಯಿತು"—ಎಂದು.

ಸುಮುಹೂರ್ತದಲ್ಲಿ ಅರಮನೆಯನ್ನು ಪ್ರವೇಶಿಸಿದರು ರಾಜದಂಪತಿಗಳು. ಪುರಜನರೆಲ್ಲಾ ಗುಂಪು ಗುಂಪಾಗಿ ಬಂದು ನವದಂಪತಿಗಳಿಗೆ ಸೇಸೆಯಿಕ್ಕಿ ಹರಸಿದರು. ತನ್ನ ಪ್ರಜೆಗಳು ತನ್ನಲ್ಲಿ ಇರಿಸಿದ್ದ ಆದರ, ಗೌರವವನ್ನು ಕಂಡು ನಳರಾಜ ಹಿರಿ ಹಿಗ್ಗಿದ. ಆ ಮುದದಿಂದೊಮ್ಮೆ ತನ್ನನ್ನು ಸ್ವಯಂವರದ ಪುಷ್ಪಮಾಲಿಕೆಯಲ್ಲಿ ಬಂಧಿಸಿದ ದಮಯಂತಿಯೆಡೆಗೆ ನೋಡಿದಾಗ ಆಕೆಯೂ ಮಂದಸ್ಮಿತೆ.

ಬದುಕು ಹೊಸ ದಿಕ್ಕು ಪಡೆದಿತ್ತು. ಹಿಂದಿನ ದಿನಗಳ ಬದುಕೆ ಆಗಲೇ ಮರೆತಿತ್ತು. ರಾಜದಂಪತಿಯರ ಸರಸ-ಸಲ್ಲಾಪಗಳು ಪ್ರತಿದಿನ ಬೆಳಗಾಗುವ ತನಕ ನಡೆದರೂ ಮತ್ತೂ ಮತ್ತೂ ಬೇಕೆಂಬ ಆಸೆಗೆ ಕೊನೆಯೇ ಇರಲಿಲ್ಲ. ಮಣಿಮಂದಿರಗಳಲ್ಲಿ ವೀಣೆಯ ನುಡಿಸುವಿಕೆಯ ನಾದ. ಅಲೆ ಅಲೆಗಳಾಗಿ ಅವರ ಮನಸ್ಸನ್ನು ಹಗುರಾಗಿಸಿ ಅಂತರಿಕ್ಷದಲ್ಲಿ ಹಾರುವಂತೆ ಮಾಡಿತ್ತು.

ದಿನಗಳೆಷ್ಟೋ ಕಳೆದು ತಿಂಗಳುಗಳೂ ದಾಟಿ. ಅನಿರೀಕ್ಷಿತವಾಗಿ ಒಮ್ಮೆ ದಮಯಂತಿ ಪತಿಯೆದುರು ಬಾರದೆ ಸಖಿಯರ ನಡುವೆಯೇ ಕುಳಿತು ತಲೆ ತಗ್ಗಿಸಿರಲು ನಳನಿಗೇಕೋ ಏನೋ ಅನ್ನಿಸಿತ್ತು. ಅವನೂ ಆಕೆಯನ್ನು ಏಕಾಂತದಲ್ಲಿ ಕರೆದು ಪ್ರಶ್ನಿಸಿದ.

"ಯಾಕೆ ದೇವಿ....ನನ್ನನ್ನು ಕಂಡಾಗಲೆಲ್ಲಾ ನಾಚಿಕೊಳ್ಳುವೆಯಲ್ಲ!? ಉತ್ತರವಿಲ್ಲ . ನಗು, ಮುಗುಳ್ನಗು! ಕರಕಮಲಗಳಿಂದ ಮುಖಮುಚ್ಚಿ ಹಿಡಿದ ದಮಯಂತಿ ನಗುತ್ತಲೇ ಇದ್ದಳು.

'ಲೇ ಹುಚ್ಚೀ... ನೀನು ನಗುತ್ತ ಇದ್ದರೆ ನಿನ್ನ ಮನಸ್ಸು ನನಗೆ ಹೇಗೆ ಅರ್ಥವಾಗಬೇಕು ಹೇಳು....! ಹೇಳು ದೇವಿ ನಿನಗಿಂದು ಏನಾಯಿತು ಹೇಳು...."

"ಇಲ್ಲ ನಾನದನ್ನು ಹೇಳಲಾರೆ...."—ಮತ್ತೆ ನಗಹತ್ತಿದಳಾಕೆ.

"ಹೇಳಲೊಲ್ಲೆಯಾ.. ನಿನ್ನ ತಂದೆ ಅಂದು ನಿನ್ನನ್ನು ಧಾರೆಯೆರೆದು ಕೊಟ್ಟಾಗ ಹೇಳಿದ ಮಾತುಗಳು ನೆನಪಿದೆ ತಾನೇ?"

"ಏನು!?

"ದಮಯಂತಿಯ ಸಂಪೂರ್ಣ ಜವಾಬ್ದಾರಿ ನಿನ್ನದು—ಎಂದು ನನಗೊಪ್ಪಿಸಿದ್ದು...."

"ಹ್ಞಂ... ಅದು ನನಗೆ ತಿಳಿದಿದೆ ...ಅದಕ್ಕೆ....?"

"ನೀನು ಏನಿದ್ದರೂ ಅದನ್ನು ನನ್ನಲ್ಲಿ ಮುಚ್ಚಿಡಬಾರದು...."

"ನಾನು ನಿಮ್ಮಲ್ಲಿ ಏನನ್ನೂ ಮುಚ್ಚಿಡುತ್ತಿಲ್ಲವಲ್ಲ....

"ಖಂಡಿತಾ ಇಲ್ಲವೇ....ಹಾಗಾದರೆ ಇಂದು ಮುಂಜಾನೆ ಸಖಿಯರೆಲ್ಲ ನಿನ್ನ ಸುತ್ತ ಕುಳಿತು ನಿನ್ನನ್ನೇಕೆ ಹಾಸ್ಯಮಾಡುತ್ತಿದ್ದರು ಹೇಳು...."

"ಹೇಳಲಾರೆ....ಅದನ್ನೊಂದು ಮಾತ್ರ ಹೇಳಲಾರೆ...."—ಇಷ್ಟು ಹೇಳುತ್ತಿದ್ದಂತೆ ದಮಯಂತಿಗೆ ಏನೋ ಆದಂತಹ ಅನುಭವ. ತಡೆದುಕೊಳ್ಳುವಂತೆಯೂ ಇಲ್ಲ. "ಈಗ ಬರುವೆ"ನೆಂದು ತಾನೇ ಎದ್ದು ಹೊರಟಳು.

ಆಕೆ ಎದ್ದುಹೋದ ಕೆಲ ಹೊತ್ತಿನಲ್ಲೇ ಆಕೆಗೆ ತಿಳಿಯದಂತೆ ಹಿಂಬಾಲಿಸಿದ ನಳರಾಯ. ಅರಮನೆಯ ಹಿಂಭಾಗದ ಮಜ್ಜನಗೃಹದಲ್ಲಿ ನಿಂತು ವಾಂತಿಮಾಡುತ್ತಿದ್ದಳು ದಮಯಂತಿ....ಜೊತೆಯಲ್ಲಿ ಸಖಿಯರಾರು ಇರಲಿಲ್ಲ. ದಮಯಂತಿ ಪತಿಯೊಡನೆ ಇರುವಳಲ್ಲ—ಎಂದು ಅವರೆಲ್ಲ

ಬೇರೆ ಕೆಲಸದಲ್ಲಿ ಮಗ್ನರಾಗಿದ್ದರು. ಆಯಾಸದಿಂದ ದಮಯಂತಿ ಅಲ್ಲಿ ನಿಲ್ಲಲೂ ಆಗದೆ ಕುಳಿತುಕೊಂಡಾಗ ನಳನೇ ಆಕೆಯನ್ನು ಸಾವರಿಸ ಬೇಕಾಯಿತು. ತನ್ನ ಗುಟ್ಟು ರಟ್ಟಾಯಿತಲ್ಲ ಎಂಬ ನಾಚಿಗೆ ಆಕೆಗೆ....

"ಇನ್ನನ್ನು ಗುಟ್ಟಾಗಿಡಬೇಕೆಂದಿರುವೆಯಾ...." ಪ್ರಶ್ನಿಸಿದ ನಳರಾಯ.

ದಮಯಂತಿಯ ಮುಗ್ಧ ನಯನಗಳು ಒಂದು ಘಳಿಗೆ ನಳನ ಮೋರೆಯನ್ನೇ ನೋಡಿದವು. ಮತ್ತೆ ಆತನ ಎದೆಯಲ್ಲಿ ಮುಖ ಹುದುಗಿಸಿ ತನ್ನ ಮನದ ಭಾರವನ್ನು ಕಡಿಮೆ ಮಾಡಿಕೊಂಡಳಾಕೆ.

"ತಾಯ್ತನ ಅಷ್ಟು ಸುಲಭದಲ್ಲಿ ಬರುತ್ತದೆಯೇ ದೇವಿ.. ಆದಾಗ ಲೋಕರೀತಿಯಿಂದ ವರ್ತಿಸಬೇಕು..........ಇಂತಹ ವಿಷಯದಲ್ಲಿ ಅಸಡ್ಡೆ ಮಾಡಿದರೆ ಅದರ ಪ್ರಭಾವ ಹೊಟ್ಟೆಯಲ್ಲಿ ಬೆಳೆಯುವ ಮಗುವಿನ ಮೇಲಾಗುತ್ತದೆ."

ಪತಿಯ ಹಿತವಚನ ಮೈಯಲ್ಲಿ ಕಚಕುಳಿ ಇಟ್ಟಿತು ದಮಯಂತಿಗೆ. ಅಲ್ಲಿ ಹೆಚ್ಚು ಹೊತ್ತು ನಿಲ್ಲಲಾರದೆ ಆಕೆ ಓಡೋಡಿ ಬಂದು ಅಂತಃಪುರವನ್ನು ಪ್ರವೇಶಿಸಿದಳು.

"ಇದೇನು ಮಕ್ಕಳಾಟ"—ಎಂದು ನಳ ಅಲ್ಲಿ ಬಂದರೆ ಹಾಸಿಗೆಯಲ್ಲಿ ಕಣ್ಮುಚ್ಚಿ ಮಲಗಿದ್ದಳಾಕೆ. ತನ್ನಿನಿಯಳ ನೀಳವಾದ ಕೇಶರಾಶಿಯನ್ನು ಸವರುತ್ತ ನಳನೆಂದ—"ಲೋಕವಿಖ್ಯಾತನಾದ ಸುಪುತ್ರನಿಗೆ ಮಾತೆಯಾಗು ದೇವಿ"—ಎಂದು. ದಮಯಂತಿಯ ಅಂತಃಕರಣ ಆಗ ಬಿರಿದರಳಿ ನಕ್ಕಿರಬಹುದಲ್ಲವೆ!

ನಳರಾಯನಿಗೆ ಯೌವನದ ದಿನಗಳು ದಮಯಂತಿಯ ನೆನಪಿನಲ್ಲೇ ಕಳೆದರೆ, ಮತ್ತೆ ಹಲವು ದಿನಗಳು ಆಕೆಯ ಅಂಗಸುಖ ಸೌಭಾಗ್ಯದಿಂದ ಸಂದವು. ಆತನೀಗ ಪುತ್ರೋತ್ಸವವನ್ನು ಎದುರು ನೋಡುತ್ತಿದ್ದಾನೆ.

ಒಡತಿ ಗರ್ಭವತಿಯಾದ ವಾರ್ತೆ ನಗರದಲ್ಲಿಡೀ ಹರಡಿರಲು ಪೌರ ಜನರಿಗೂ ಆನಂದದ ಸವಿಯೂಟವಾಗಿತ್ತು. ಎಲ್ಲರೂ ದಮಯಂತಿ ಹಡೆಯಲಿರುವ ಶಿಶುವಿನ ಬಗೆಗೆ ಮಾತಾಡಿಕೊಳ್ಳುತ್ತಿದ್ದರು.

.. ಹುಟ್ಟುವ ಮಗು ಹೆಣ್ಣಾದರೆ ದಮಯಂತಿಗಿಂತ ಮಿಗಿಲಾದ ಸೌಂದರ್ಯವತಿಯಾಗಿ ಲೋಕವಿಖ್ಯಾತಿ ಬರುವುದು, ಮಗು ಗಂಡಾದರೆ ಆ ಸಂಭ್ರಮ ಹೇಳತೀರದು.... ದಮಯಂತಿಯ ಸೌಂದರ್ಯವನ್ನು ಹೊತ್ತು ನಳರಾಯನ ಸಕಲ ಗುಣಗಳನ್ನು ಪಡೆದು ಬರುವ ಮಗು, ಆಚಂದ್ರಾರ್ಕವಾದ ಕೀರ್ತಿಯನ್ನು ಗಳಿಸಬಹುದು. ಆತನಿಗೆ ಸಮಬಲರು ಈ ಇಳೆಯಲ್ಲಿ ಏಕೆ, ಮೂರು ಲೋಕದಲ್ಲೂ ಇರಲು ಸಾಧ್ಯವಿಲ್ಲ....

ಅತ್ತ ಪ್ರಜೆಗಳು, ಸಂತಸದಿಂದ ನಳರಾಯನಿಗೆ ಹರ್ಷದ ದಿನಗಳು ಹತ್ತಿರವಾಗುತ್ತಿವೆ, ಸುಪುತ್ರನ ಜನನವಾಗಲಿ, ಎಂದು ಹರಕೆ ಹೊತ್ತರೆ ಇತ್ತ ದಮಯಂತಿ ಪ್ರಸವವೇದನೆಯನ್ನು ಅನುಭವಿಸಿದಳು. ನವಮಾಸ ತುಂಬಿದ ಒಂದು ದಿನ, ಅತೀವ ವೇದನೆಯನ್ನು ತಾಳಲಾರದೆ ಬೋಧಹೀನ ಳಾಗಿ ಬಿದ್ದಿದ್ದ ದಮಯಂತಿ ಎಚ್ಚೆತ್ತಾಗ ಎರಡು ಕಂದಗಳು ತನ್ನ ಪಕ್ಕದಲ್ಲಿ ಮಲಗಿ ಕಿರುಚುತ್ತಿರುವುದನ್ನು ಕಂಡಳು. ಯಾವಾಗ ಈ ಕ್ರಿಯೆ ನಡೆಯಿತೋ—ಎನ್ನುವಷ್ಟು ಲೀಲಾಜಾಲವಾಗಿ ನಡೆದಿತ್ತು ಈ ಶುಭಪ್ರಸವ!

ಅವಳಿ ಮಕ್ಕಳನ್ನು ಹಡೆದ ದಮಯಂತಿಯನ್ನು ನಳ ನೋಡಲೆಂದು ಬಂದಾಗ, ಆಕೆಯಲ್ಲಿ ನಾಚುಕೆಯಿರಲಿಲ್ಲ. ಆಕೆಯಿಂದು ಮಕ್ಕಳ ತಾಯಿ; ಭವದ ಬಂಧನದಲ್ಲಿ ಹೆತ್ತಕರುಳಿನ ಉರಿ ಆರುವವರೆಗೆ ಆಕೆ ಮಲಗಿಯೇ ಇದ್ದಳು.

ಕಂದಗಳು ದಿನೇ ದಿನೇ ಬೆಳೆಯುತ್ತಿದ್ದರು! ಅನುಪಮವಾದ ಸಾರ್ವ ಭೌಮ ಪದವಿಯಿಂದ, ದಮಯಂತಿಯ ಅಂಗ ಸುಖಭಾಗ್ಯದಿಂದ, ತನುಜರ ಬಾಲಲೀಲೆಯಿಂದ ಮನಸ್ಸು ಪ್ರಫುಲ್ಲಿತವಾಗಿ, ತನ್ನ ಭಾಗ್ಯಕ್ಕೆ ಇನ್ನೇನು ಎಣೆ ಎಂಬಂತೆ ಸಂಭ್ರಮದಿಂದ ಮೆರೆದಾಡಿದ ನಳರಾಯ.

ಅರಮನೆಯೊಳಗಿನ ಈ ಆನಂದ, ಸಂಭ್ರಮ, ನಿಷಧದೇಶದ ಪ್ರಜೆ ಗಳೆಲ್ಲರ ಪಾಲಿಗೂ ವರಪ್ರಸಾದದಂತಿತ್ತು. ಆಳುವ ಅರಸನ ಸುಖವೇ ತಮ್ಮ ಸುಖವೆಂದು ಜನ ನಂಬಿದ್ದರು.

ಬಡವರೇ ಇರಲಿ ಭಿಕ್ಷುಕರೇ ಇರಲಿ, ನಳನ ಆಸ್ಥಾನದಲ್ಲಿ ಪ್ರತಿದಿನ ತುಂಬುಗೈಯ ದಾನ ನಡೆದಿತ್ತು. ಆತನ ಹೆಸರನ್ನು ಕೇಳಿ ದೂರ ದೂರ ದೇಶಗಳಿಂದ ಬಂದ ಆಗಂತುಕರಿಗೂ ಯಥೇಚ್ಛವಾದ ಸನ್ಮಾನ ನಡೆಯುತ್ತಿತ್ತು; ಆಶ್ರಯ ನೀಡಲಾಗುತ್ತಿತ್ತು.

ಇಂದ್ರನ ನಂದನವನವನ್ನೇ ನಾಚಿಸುವಂತೆ ಅದು ಸುಖ-ಸಂಪತ್ತಿನಿಂದ ಮೆರೆದಾಡುತಿತ್ತು ಭೂಮಂಡಲ್ಲನ: ಸ್ವರ್ಗಮರ್ತ್ಯಗಳಲ್ಲಿ ಈ ದೊರೆಗೆ ಎಣೆಯಾರು—ಎನ್ನುವಷ್ಟರ ಮಟ್ಟಿಗೆ ನಳರಾಯನ ಕೀರ್ತಿ, ವೈಭವ ಜನಜನಿತವಾಗಿತ್ತು.

ಕಾಲದ ಚಕ್ರ ತಿರುಗುತ್ತಲೇ ಇದೆಯೆನ್ನುವ ಮಾತು ಸುಳ್ಳಲ್ಲ. ರಾತ್ರಿ ಕಳೆದಾಗ ಬೆಳಕು, ಬೆಳಕು ಮುಗಿದಾಗ ಕತ್ತಲು ಕವಿಯುವುದು ಪ್ರಕೃತಿನಿಯಮ. ಇದು ತಪ್ಪುವಂತೆಯೇ ಇಲ್ಲ.

ನಳಮಹಾರಾಜನ ಬದುಕಿನ ಚಕ್ರವೂ ತಿರುಗಿತು. ಎಷ್ಟು ಉನ್ನತ ಕೀರ್ತಿ ಆತನನ್ನು ಬಿಗಿದಪ್ಪಿ ಆಲಿಂಗಿಸಿತೋ ಅಷ್ಟೇ ಕಷ್ಟಪರಂಪರೆ ಆತನ ಬದುಕಿನಲ್ಲಿ ಮತ್ತೆ ಕಾದಿತ್ತು! ಅವುಗಳನ್ನೆಲ್ಲ ಎದುರಿಸಲು ನಳನಲ್ಲಿ ಸ್ಥೈರ್ಯ, ಧೈರ್ಯಗಳು ಅದು ಹೇಗೆ ತುಂಬಿಕೊಳ್ಳುತ್ತವೆಯೋ?

ದೇವಲೋಕ.......

ದಮಯಂತಿಯ ಸ್ವಯಂವರದಿಂದ ಖಿನ್ನರಾದ ಇಂದ್ರ, ವರುಣ, ಅಗ್ನಿ ಯಮ ಮೊದಲಾದ ದೇವತೆಗಳು—ಈ ಸೋಲು, ದೇವಲೋಕಕ್ಕೆ ಆದ ಅಪಮಾನವೆಂದು ಬಗೆದು, ಇತರರೆದುರು ತಲೆಯೆತ್ತಲಾರದೆ, ಎತ್ತಿದರೂ ಏನೆಂದು ಉತ್ತರಿಸಲರಿಯದೆ ತೊಳಲಾಡುತ್ತ ಕಾಲ ಕಳೆಯುತ್ತಿರಲು, ಒಮ್ಮೆ ಕಲಿರಾಯ ಇದನ್ನು ಗಮನಿಸಿದ.

ವೈಭವದಿಂದ, ಸಂತಸದಿಂದ ನಕ್ಕು ನಲಿಯುತ್ತಿದ್ದ ದೇವಲೋಕ ಯಾಕಿಂದು ನೀರಸವಾಗಿದೆ? ದೇವೇಂದ್ರನೇತಕೆ ಕಳಾಹೀನನಾಗಿದ್ದಾನೆ....? ಅಗ್ನಿದೇವನನ್ನು ಧೂಮವೇ ಕವಿದಿದೆಯಲ್ಲ...!? ವರುಣ ಮೋಡದ

ಮರೆಯಲ್ಲಿ ಕಣ್ಣು ಮುಚ್ಚಾಲೆಯಾಡುತ್ತಿದ್ದಾನೆ....!? ವೀರ್ಯವಂತನಾದ ಯಮನೂ ಕೂಡಾ ನಾಚಿದವನಂತೆ ತಲೆತಗ್ಗಿಸಿದ್ದಾನೆ....!?—ಶನಿಯ ಮುಂದೆ ಪ್ರಶ್ನೆಗಳ ವೃತ್ತವೇ ಏರ್ಪಟ್ಟಿತ್ತು.

"ದೇವೇಂದ್ರ........ನಿನ್ನನ್ನು ಕಾಡುತ್ತಿರುವ ಚಿತ್ತಗ್ಲಾನಿ ಯಾವುದು....? ಹೇಳಬಾರದೇ ದೇವೇಂದ್ರ....ಅಗ್ನಿದೇವ, ಯಾಕೆ ಸುಮ್ಮ ನಿರುವೆ....ಯಮನೂ ತಂದೆಯಾದ ವರುಣನೂ ಮೂಕರಾಗಿರು ವರಲ್ಲ...!? ನಮ್ಮ ದೇವಲೋಕಕ್ಕೆ ಇಂದು ಏನಾಗಿದೆ....!? ಇಂತಹ ವಿಪತ್ಕಾರಕ ವಾತಾವರಣವನ್ನು ಉಂಟುಮಾಡಿದವನು ಯಾರೇ ಇರಲಿ, ಆತನನ್ನು ಕಾಡಿ, ಪೀಡಿಸುತ್ತೇನೆ ದೇವೇಂದ್ರ....ಈ ಶನಿರಾಯನ ಮುಂದೆ ನಿಲ್ಲಲು ತ್ರಿಜಗದಲ್ಲೂ ಯಾರೂ ಸಮರ್ಥರಿಲ್ಲ; ಹೇಳು ದೇವೇಂದ್ರ.... ನನ್ನಿಂದ ಯಾವ ಮಹತ್ಕಾರ್ಯ ನೆರವೇರಬೇಕಾಗಿದೆ!?

—ಅಟ್ಟಹಾಸದಿಂದ ಆತ್ಮಪ್ರಶಂಸೆ ಮಾಡಿಕೊಳ್ಳುತ್ತಿದ್ದ ಶನಿರಾಯನ ಮುಂದೆ ದೇವೇಂದ್ರ ತಮಗೊದಗಿದ ಪಾಡನ್ನು ತೋಡಿಕೊಂಡ.

"ಭೂಲೋಕದಲ್ಲಿ ದಮಯಂತೀ ಸ್ವಯಂವರಕ್ಕೆ ಹೋಗಿದ್ದೆವು.... ದೇವತೆಗಳಾದ ನಾವು ನಾಲ್ವರನ್ನೂ ಕಡೆಗಣಿಸಿ, ಆಕೆ ನಳರಾಯನನ್ನು ವರಿಸಿ, ನಮಗೆಲ್ಲ ಅವಮಾನ ಮಾಡಿದ್ದಾಳೆ...."

"ಹ್ಞಾಂ...."—ಆಶ್ಚರ್ಯಗೊಂಡ ಕಲಿ.

"ಹೌದು ಶನಿರಾಯ ....ದೇವತೆಗಳಾದ ನಮಗೆ ಇದಕ್ಕಿಂತ ಅವಮಾನ ಇನ್ನೇನು ಬೇಕು...."—ಪಡಿ ನುಡಿದ ಅಗ್ನಿ.

"ಸಲ್ಲದು....ಸಲ್ಲದು.....ದೇವತೆಗಳಿಗೆ ಈ ರೀತಿಯ ಅವಮಾನ ಸಲ್ಲದೇ ಸಲ್ಲದು...."—ಶನಿ ಗುಡುಗಿದ.

"ಮಿಂಚಿಹೋದ ಕಾರ್ಯಕ್ಕೆ ಚಿಂತಿಸಿ ಫಲವಿಲ್ಲ ಕಲಿರಾಯ...."—ಸಮಾಧಾನ ನೀಡಿದ ವರುಣ.

"ಹಾಗಂದರೆ ಹೇಗಾಗುತ್ತದೆ....ಆದ ಅವಮಾನಕ್ಕೆ ಪ್ರತೀಕಾರವನ್ನು ಮಾಡಲೇಬೇಕು....ನಾನೀಗಲೇ ಹೋಗಿ ನಳನನ್ನು ಹಿಡಿದು ಬಿಡುತ್ತೇನೆ....

ಆತನ ರೂಪ ವಿಕಾರವಾಗುವಂತೆ ಮಾಡಿಬಿಡುತ್ತೇನೆ... ತನ್ನ ಪತ್ನಿಯನ್ನು ತೊರೆದು ಆತ ಊರೂರು ಅಂಡಲೆಯುವಂತೆ ಮಾಡುತ್ತೇನೆ...."—ವಿಕಾರವಾಗಿ ನಗುತ್ತ ಆರ್ಭಟಿಸಿದ ಕಲಿರಾಯ.

ಆತನ ನಗುವಿನ ಅಲೆಯೇ ದೇವಲೋಕವನ್ನು ನಡುಗಿಸಿತ್ತು. ಪಿತೃ ದೇವತೆಗಳೆಲ್ಲ, ಏನೇನು ಅನರ್ಥ ಕಾದಿದೆಯೋ—ಎಂದು ಭಯ ಭೀತರಾಗಿ ನೋಡುತ್ತಿದ್ದರು—ಕಲಿಯಾದ ಆಗಲೇ ಭೂಲೋಕದತ್ತ ಪ್ರಯಾಣ ಬೆಳೆಸಿದ್ದ.

ನಿಷಧದೇಶದ ಒಡೆಯ—ನಳರಾಯ ಧಾರ್ಮಿಕ ಪ್ರವೃತ್ತಿಯನ್ನು ಬಿಟ್ಟವನಲ್ಲ; ಒಂದು ದಿನವೂ ನೀತಿ ತಪ್ಪಿ ನಡೆದವನಲ್ಲ; ತಪ್ಪಿಯಾದರೂ ಕೆಟ್ಟದ್ದನ್ನು ಮಾಡಿದವನಲ್ಲ; ತಾನು ಎಸಗುವ ಯಾವುದೇ ಕಾರ್ಯದಲ್ಲೂ ಆತನಿಗೆ ಮಗ್ನತೆಯಿತ್ತು—ಪರಿಪೂರ್ಣತೆಯಿತ್ತು.

ಅಬ್ಬರಿಸಿ ದೇವಲೋಕದಿಂದ ಇಳಿದು ಬಂದ ಕಲಿರಾಯನಿಗೆ ಇದೊಂದು ಸಮಸ್ಯೆಯೇ ಆಯಿತು. ಆತನ ದೇಹವನ್ನು ಹೇಗೆ ಪ್ರವೇಶಿಸಲಿ, ಎಂದು ತಿಳಿಯದೆ, ಕಂಗೆಟ್ಟು, ಆ ಸಮಯಾವಕಾಶಕ್ಕಾಗಿ ಆತ ಎದುರುನೋಡುತ್ತಲೇ ಇದ್ದ.

ಕಲಿಯ ಪಾಲಿಗೆ ಆ ಸುದಿನ ಕೊನೆಗೂ ಹತ್ತಿರವಾಯಿತು. ಒಂದು ದಿನ ನಳರಾಯ, ದೇವತಾರಾಧನೆಗೆ ಹೊರಡುವ ಮೊದಲು, ಪಾದವನ್ನು ತೊಳೆಯಲೆಂದು ಹೊಯ್ದ ನೀರು ಆತನ ಹಿಮ್ಮಡಿಯನ್ನು ತೋಯಿಸಲಿಲ್ಲ. ಕಲಿರಾಯನಿಗೆ ಆಗ ಆದ ಆನಂದ ಅಷ್ಟಿಷ್ಟಲ್ಲ. ಕೊನೆಗೂ ಅವಕಾಶ ಸಿಕ್ಕಿತಲ್ಲ ಎಂದು ಒಣಗಿಸಿದ ಹಿಮ್ಮಡಿಯನ್ನು ಹಿಡಿದು ನಳನ ದೇಹವನ್ನು ಪ್ರವೇಶ ಮಾಡಿದನಾತ. ಈ ಕ್ಷುಲ್ಲಕವಾದ ಅಚಾತುರ್ಯವೊಂದು ನಳನ ಪಾಲಿಗೆ ಶಾಪದಂತೆ ಪರಿಣಮಿಸಿತು.

ಒಮ್ಮೆಲೇ ನಳನಲ್ಲಿ ನಂಬಲಾರದಂತಹ ಬದಲಾವಣೆ! ಅಮೃತ ಹುಳಿಬಂದಂತೆ, ಕಲ್ಪತರು ತನ್ನ ನಿಜಗುಣವನ್ನು ತೊರೆದು ದುರ್ಗುಣವನ್ನು ವ್ಯಕ್ತಪಡಿಸಿದಂತೆ, ಮಾನವಂತ ದುಃಖದ ಕಡಲಿನಲ್ಲಿ ಅದ್ದಲ್ಪಟ್ಟವನಂತೆ, ನವಪುಷ್ಪಗಳಿಂದ ರಾರಾಜಿಸುತ್ತಿದ್ದ ಲತೆಯನ್ನು ಹಾನಿಕಾರಕ ಕೀಟಗಳು

ಮುತ್ತಿದಂತೆ, ಭೋಗಿಯ ದೇಹದಲ್ಲಿ ಕುಷ್ಠವು ಕಾಣಿಸಿಕೊಂಡಂತೆ—ನೈಷಧನೃಪ ನಳರಾಯನ ದೇಹದಲ್ಲಿ ಕಲಿಯ ಪ್ರವೇಶವಾದೊಡನೆ ದುಷ್ಟ ಮನೋಭಾವನೆಗಳೇ ಮೈತಾಳಿದ್ದವು; ಕೆಟ್ಟ ಶಕುನಗಳೇ ಎಲ್ಲೆಲ್ಲೂ ಕಾಣಿಸಿಕೊಂಡವು.

ರಾಜಾಧಿರಾಜನಾಗಿ, ಅತುಲೈಶ್ವರ್ಯದಿಂದ ಮೆರೆದಾಡಿದ ನಳ ರಾಯನ ಮನಸ್ಸು ಸಂಪೂರ್ಣ ಬದಲಾಗಿತ್ತು. ಸಂಗೀತ, ಕಲೆಗಳಲ್ಲಿದ್ದ ರಾಜನ ಆಸಕ್ತಿ ದ್ಯೂತದ ಕಡೆಗೆ ತಿರುಗಿತು. ಕೆಟ್ಟ ಚಾಳಿಗಳೆಲ್ಲ ಬಂದು ಅಂಟಕೊಂಡಾಗ ಆತ ತನ್ನತನವನ್ನು ಕಳೆದುಕೊಂಡ ಪಶುವಿನಂತಾದ. ದುಷ್ಟ ಅಗ್ರಹಗಳೇ ಆಗಾಗ ಆತನನ್ನು ಬಂದು ಕಾಡಿದವು.

ತಮ್ಮನಾದ ಪುಷ್ಕರ ನಳನ ಹಳೆಯ ದಾಯಾದಿ. ನಳನಿಂದ ಹಲವು ಬಾರಿ ಸೋಲನ್ನಪ್ಪಿ, ಮತ್ತೆ ಈತನ ಸನಿಹಕ್ಕೆ ಸುಳಿಯಲಾರೆನೆಂದು ಪಟ್ಟು ಹಿಡಿದು ಕುಳಿತಿದ್ದ ಪುಷ್ಕರನಿಗೆ ಶನಿರಾಯ ಒಲಿದು ಬಂದ; ನಳನಲ್ಲಿ ದ್ಯೂತವಾಡುವಂತೆ ಆತನನ್ನು ಪ್ರೇರೇಪಿಸಿದ.

ಶನಿಯ ಪ್ರೇರಣೆಯಿಂದ – ಪುಷ್ಕರ ದ್ಯೂತಕ್ಕೆ ಬಂದರೆ, ನಳ ರಾಯನೂ ಅದಕ್ಕೆ ಸನ್ನದ್ಧನಾಗಿಯೆ ಇದ್ದ. ಇಲ್ಲಿಯ ಈ ಪ್ರಸಂಗ ಬಹಳ ಮೋಜಿನದ್ದು. ಶನಿಯ ಎರಡು ಮುಖಗಳನ್ನು ನಾವಿಲ್ಲಿ ಕಾಣ ಬಹುದು. ಒಂದೆಡೆ ನಳನ ನಿರ್ನಾಮಕ್ಕಾಗಿ, ದಮಯಂತಿಯ ಪಾತಿವ್ರತ್ಯವನ್ನು ಕೆಡಿಸಲಿಕ್ಕಾಗಿ ಶನಿ ಪ್ರಯತ್ನಿಸಿದರೆ, ಮತ್ತೊಂದೆಡೆ ತನ್ನ ಕಾರ್ಯಸಾಧನೆಗಾಗಿ ಪುಷ್ಕರನಿಗೆ ಜಯದಮೇಲೆ ಜಯವನ್ನು ಕಲ್ಪಿಸುವ ಶನಿಯ ಮನೋಭಾವ!

ದ್ಯೂತದಲ್ಲಿ ನಳ ನಿಸ್ಸೀಮನಾಗಿದ್ದರೂ ಪುಷ್ಕರನೊಂದಿಗೆ ಸೋಲ ನ್ನನುಭವಿಸಲೇ ಬೇಕಾಯಿತು. ಅಪಾರ ಧನವನ್ನು ಪಣವಾಗಿ ಇಟ್ಟರೂ ಅವೆಲ್ಲಾ ಆ ಕ್ಷಣದಲ್ಲಿ ಪುಷ್ಕರನ ಪಾಲಿಗೆ ಬರುತ್ತಿತ್ತು. ಹಲವು ಬಾರಿ ಸೋತಾಗಲೂ ತಾನು ಏನು ಮಾಡುತ್ತಿರುವೆನೆಂಬ ಪರಿಜ್ಞಾನವಿಲ್ಲದೆ ಮತ್ತೆ ಮತ್ತೆ ದ್ಯೂತವಾಡಿದ ನಳರಾಯ.

ಸಮಸ್ತ ಭಂಡಾರವನ್ನು ದ್ಯೂತವಾಡಿ ಸೋತಾಗಿತ್ತು. ನಳನಿಗೆ ಏನಿಲ್ಲದ ಈ ಛಲ ಇಂದೇಕೋ ಬಂದಿದೆ... ಎಂದು ದಮಯಂತಿ ತಬ್ಬಿಬ್ಬಾದಳು.

"ಬೇಡ ದೊರೆ, ಆಟ ನಿಲ್ಲಿಸು...." ಎಂದು ಯಾಚಿಸಿದಳು.

ಒಂದು ದಿನವೂ ದಮಯಂತಿಗೆ ಎದುರು ನುಡಿದವನಲ್ಲ ನಳ. ಆದರೆ ಇಂದೇಕೋ ಆಕೆಯ ವಿಸ್ತ್ರಿಕೆಯ ನುಡಿಗಳು ಈತನ ಕರ್ಣಪಟಲವನ್ನು ಸ್ಪರ್ಶಿಸಲೇ ಇಲ್ಲ.

ಭಂಡಾರದಲ್ಲಿದ್ದ ಧನವೆಲ್ಲ ಪುಷ್ಕರನ ವಶವಾಗಲು ಮತ್ತೆ ಅಶ್ವ, ವಾರಣ, ಸಮಸ್ತ ರಾಜ್ಯವನ್ನು ಪಣವಾಗಿಟ್ಟು ಪಗಡೆಯನ್ನು ತಿರುಗಿಸಿದ ನಳರಾಯ. ಆ ಪಗಡೆಯಲ್ಲೇ ಕಲಿ ನೆಲೆಸಿದ್ದು, ಗಹಗಹಿಸಿ ನಗುತ್ತಿದ್ದರೂ ನಳ ಆಟ ಆಡುತ್ತಲೇ ಇದ್ದ. ಸೋಲಿನ ಮೇಲೆ ಸೋಲು ಸಂಭವಿಸುತ್ತಿತ್ತು.

ಇನ್ನೇನು ನಿರ್ಗತಿಕರಾಗಿ ಬೀದಿಯ ಪಾಲಾಗುವ ದಿನ ಸನ್ನಿಹಿತ ವಾಯಿತೆಂದು ಬಗೆದ ದಮಯಂತಿ ತನ್ನ ಇಬ್ಬರು ಮಕ್ಕಳನ್ನು ತನ್ನ ತವರಿಗೆ ಕಳುಹಿಸಿಕೊಟ್ಟಳು. ಇನ್ನು ಈ ರಾಜ್ಯದ ಆಸೆಯಿಲ್ಲ. ನಳರಾಯ ಎಲ್ಲವನ್ನೂ ಒಂದೊಂದಾಗಿ ಸೋಲುತ್ತಿದ್ದಾನೆ.... ಮುಂದೇನು....!? ಮುಂದೇನು....!!?— ದಮಯಂತಿ ಚಿಂತೆಗೊಳಗಾದಳು.

ತನ್ನ ಸರ್ವಸ್ವವನ್ನು ಪುಷ್ಕರನಿಗೆ ಸೋತ ನಳಮಹಾರಾಜ ತಲೆ ತಗ್ಗಿಸಿ ಕುಳಿತಿರಲು ದರ್ಪದಿಂದ ಪ್ರಶ್ನಿಸಿದ ಪುಷ್ಕರ:

"ನಳರಾಯ, ಇನ್ನೇನು ಉಳಿದಿದೆ ನಿನ್ನಲ್ಲಿ... ಆಟ ಮುಂದರಿಸ ಬಾರದೇ?"

—ಆತನ ಈ ಪ್ರಶ್ನೆಗೆ ನಳ ಏನೆಂದು ಉತ್ತರವಿತ್ತಾನು....ಇನ್ನು ಆತನದಾಗಿ ಉಳಿದಿರುವವಳು ದಮಯಂತಿಯೊಬ್ಬಳೇ! ಹೆಣ್ಣನ್ನೂ ದ್ಯೂತಕ್ಕೆ ಪಣವಾಗಿಡುವರೇ... ಛೀ ಎಂತಹ ಆಭಾಸವಾಯಿತೆಂದು ನಳ ಚಿಂತಿಸುತ್ತಿದ್ದಂತೆ ಮತ್ತೆ ಅರ್ಭಟಿಸಿದ ಪುಷ್ಕರ.

"ಚಿಂತೆಯೇತಕೆ ನಳರಾಯ, ಇನ್ನು ಹೊರಡಬಹುದು....ನೀನಿಂದು ತೀರಾ ಸಾಮಾನ್ಯ... ನಿನ್ನಂತಃಪುರದ ವಿಲಾಸೀಜನ, ಸೇನೆಯ ಭಟರು,

ಭಂಡಾರದ ದ್ರವ್ಯ. ನೀನು ಕುಳಿತಿರುವ ಈ ನೆಲ–ಎಲ್ಲ ನನ್ನದಾಯಿತಲ್ಲ... ತಡಮಾಡಿ ಫಲವಿಲ್ಲ ನಳರಾಯ.... ಹೊರಟು ಹೋಗು........"

ಏನೆಂದು ಉತ್ತರಿಸಿಯಾನು ನಳ!

ಆತನ ಪಾಲಿನ ದೇವತೆಯಾಗಿ ಉಳಿದಿದ್ದ, ದಮಯಂತಿಯನ್ನು ಜೊತೆಗೆ ಕರೆದುಕೊಂಡು ಮತ್ತೆ ಅಲ್ಲಿ ನಿಲ್ಲಲಾರದೆ ಅರಣ್ಯ ಮಾರ್ಗವಾಗಿ ಹೊರಟ ನಳರಾಯ. ಮಾತುಬಾರದೆ ಅತೀವ ಮಾನಸಿಕ ವೇದನೆಯಿಂದ ತೊಳಲಾಡಿದ. ಆಗೊಮ್ಮೆ–ಈಗೊಮ್ಮೆ ದಣಿದು ಮುಗ್ಗರಿಸಿ ಬೀಳುವ ದಮಯಂತಿಯನ್ನು ಕಂಡಾಗಲಂತು ಆತನ ಕರುಳು ಕಿವಿಚಿದಂತಾಗುತ್ತಿತ್ತು.

ದಮಯಂತಿಯಾದರೋ ಕಳೆದುಹೋದ ದಿನಗಳೆಲ್ಲ ಕಣ್ಣಿಗೆ ಕಟ್ಟಿದಂತೆ, ಕಣ್ಣಮುಂದೆ ಬಂದು ನಿಲ್ಲುತ್ತಿದ್ದರೂ, ಪ್ರಯಾಣದ ಆಯಾಸವನ್ನು ತೋರಗೊಡದೆ ಆಕೆ ತನ್ನ ಆತ್ಮಸಾಥನನ್ನು ಹಿಂಬಾಲಿಸಿ ನಡೆದಿದ್ದಳು.

ಘಳಿಗೆ ಘಳಿಗೆಗೂ ಬಿಸಿಲಿನ ಉರಿ ಹೆಚ್ಚಾಗುತ್ತಿರಲು, ಅತಿಯಾದ ಆಯಾಸವುಂಟಾಗಿ ಬಾಯಾರಿಕೆ ತಲೆದೋರಲು, ನಾಲ್ಕು ದಿಕ್ಕುಗಳೂ ನಡುಗಿದಂತಾಗಲು, ಮುಖಕಮಲ ಬಾಡಿ ಕಳೆಗುಂದಲು, ಅಂಗಾಂಗಗಳು ಸತ್ವಹೀನವಾಗಲು, ಬೆವರಿನ ಹನಿಗಳು ಹಣೆಯಲ್ಲಿ ಮೂಡಿ ಬಿಸಿಯುಸಿರು ಒಂದೇಸಮನೆ ಹೊರ ಬರಲು, ಹಸಿವು ಭೂತಾಕಾರವನ್ನು ತಳೆದು ನಿಲ್ಲಲು ಎದುರು ಭಾಗದ ಕುರುಚಲು ಗಿಡಗಳಲ್ಲಿದ್ದ ಫಲಗಳನ್ನು ಕುಕ್ಕಿ ತಿನ್ನುವ ಪಕ್ಷಿಸಂಕಲವನ್ನು ಕಂಡ ನಳರಾಯ.

ಶನಿಯ ಪ್ರೇರೇಪಣೆಯೋ, ಎಂಬಂತೆ ನಳನಿಗೆ ಆ ಹಕ್ಕಿಗಳನ್ನು ಹಿಡಿಯುವ ಬಯಕೆ....! ಯಾವುದೇ ಆಯುಧವಿಲ್ಲದೆ ಸುಲಭಸಾಧ್ಯವಾಗಿ ಅವುಗಳನ್ನು ಹಿಡಿಯುವುದಾದರೂ ಹೇಗೆ....?—ಚಿಂತಿಸಿದ ಆತನಿಗೆ ಕೊನೆಗೊಂದು ಉಪಾಯ ಹೊಳೆಯಿತು. ತಾನು ಉಟ್ಟಿದ್ದ ಒಂದೇ ಒಂದು ಬಟ್ಟೆಯ ತುಂಡನ್ನು ಸೊಂಟದಿಂದ ಬಿಚ್ಚಿ, ಆ ಹಕ್ಕಿಗಳ ಮೇಲೆ ಎಸೆದನಾತ. ಭಯಗೊಂಡ ಪಕ್ಷಿಸಂಕಲ, ಅನಿರೀಕ್ಷಿತವಾಗಿ ಸಂಭವಿಸಿದ ಈ ಘಟನೆಯಿಂದ ಭಯಗೊಂಡವೋ ಎಂಬಂತೆ ಒಮ್ಮೆಲೇ ಗಗನಮಾರ್ಗ

ವಾಗಿ ಹಾರಿಹೋಗಲು. ನಳನೆರಚಿದ ಬಟ್ಟೆಯನ್ನು ಕೂಡಾ ಅವು ಹೊತ್ತು ಹೋಗಿದ್ದವು.

ಇದ್ದೊಂದು ಬಟ್ಟೆಯನ್ನೂ ಕಳೆದುಕೊಂಡು, ಮಾನಮುಚ್ಚಿಕೊಳ್ಳಲಾರದೆ ತೊಳಲಾಡುತ್ತಿರಲು ದಮಯಂತಿಯೇ ತನ್ನ ಸೀರೆಯ ಅರ್ಧವನ್ನು ಆತನೂ ತನ್ನ ಸೊಂಟಕ್ಕೆ ಸಿಕ್ಕಿಸಿಕೊಳ್ಳುವ ಆದೇಶ ನೀಡಿದಳು. ಇಬ್ಬರೂ ಉಟ್ಟ ಬಟ್ಟೆ ಒಂದೇ ಆದುದರಿಂದ ಅವರಿಬ್ಬರೂ, ಒಬ್ಬರನ್ನೊಬ್ಬರು ಅಗಲುವಂತಿಲ್ಲ.

ಹಸಿವು ಹೆಚ್ಚಾದಾಗ ಮತ್ತೆ ಕಂದ ಮೂಲ ಫಲಗಳನ್ನು ತಿಂದು ಆ ದಂಪತಿಗಳು, ತಮ್ಮ ಆಯಾಸವನ್ನು ನೀಗಿಕೊಂಡರು; ಆಸರೆಗಾಗಿ ಹುಡುಕಾಡಿದರು. ಅದೊಂದು ಹಳೆಯಕಾಲದ, ಜರಿದುಬಿದ್ದ ದೇವಾಲಯ ಮೂಕವಾಗಿ ನಿಂತಿತ್ತು.

ಆಗಲೇ ರವಿ ಪಶ್ಚಿಮಾಂಬುಧಿಯಲ್ಲಿ ಮುಳುಗಿ ಮರೆಯಾಗಿದ್ದ. ನಡೆದ ಆಯಾಸವೂ, ಮನದ ಬೇಸರವೂ ಒಂದಾದಾಗ, ಅಂಗಾಂಗಗಳೆಲ್ಲ ಜಾಡ್ಯತುಂಬಿ ಜಡವಾಗಲು ಆ ಮುರುಕಲು ಗುಡಿಯಲ್ಲಿ ದಮಯಂತಿ ತನ್ನಿನಿಯನ ತೊಡೆಯಲ್ಲಿ ತಲೆಯಿರಿಸಿ ಮಲಗಿದಳು. ಹುಟ್ಟಿ ಇಷ್ಟು ದೊಡ್ಡವಳಾಗುವವರೆಗೂ ಆಕೆ ಇಷ್ಟೊಂದು ಕಷ್ಟವನ್ನು ಅನುಭವಿಸಿರಲಿಲ್ಲ; ಕನಸಿನಲ್ಲೂ ನೆನೆಸಲು ಅಸಾಧ್ಯವಾದ ದಾರುಣಸ್ಥಿತಿ ಬಂದಿತಲ್ಲ ಎಂಬ ಚಿಂತೆಯಿಂದಲೇ ದಮಯಂತಿ ನಿದ್ರಿಸಿದಳು.

ನಳನಿಗಾದರೂ ನಿದ್ದೆ ಹೇಗೆ ಹತ್ತಬೇಕು....! ತನ್ನಿಂದಾಗಿ ಈ ಕೋಮಲೆಯಾದ ದಮಯಂತಿಯೂ ಕಷ್ಟಪಡಬೇಕಾಯಿತಲ್ಲ ಎಂದು ಮರುಗಿದ. ಮುಂದಿನ ಕಷ್ಟಪರಂಪರೆಗಳನ್ನು ನೆನೆದಾಗ ಇನ್ನು ಈಕೆಯನ್ನು ಜೊತೆಯಲ್ಲಿ ಕರೆದೊಯ್ಯಬಾರದು ಎಂದು ನಿರ್ಧರಿಸಿದನಾತ. ಇಲ್ಲೇ ಬಿಟ್ಟುಬಿಟ್ಟರೆ, ಈಕೆಯಾದರೂ ಮತ್ತೆ ತನ್ನ ತಂದೆಯಲ್ಲಿಗೆ ತೆರಳಿ ಸುಖದಿಂದಿದ್ದಾಳು — ಎಂಬುದು ಆತನ ಉದ್ದೇಶವಾಗಿತ್ತು. ನಳ ಅಲ್ಲಿಂದ ಮೆಲ್ಲನೆ ಹೊರಡಲನುವಾದ. ಆಕೆಯ ನಿದ್ದೆಗೆ ಭಂಗವುಂಟಾಗದಂತೆ ತನ್ನ ತೊಡೆಯನ್ನು ದಮಯಂತಿಯ ತಲೆಯಡಿಯಿಂದ ಮೆಲ್ಲನೆ

ಸರಿಸಿ, ಅದಕ್ಕೆ ಬದಲಾಗಿ ಕಲ್ಲಿನ ತುಂಡನ್ನಿರಿಸಿದ. ತಾವುಟ್ಟ ಸೀರೆಯನ್ನು ಎರಡಾಗಿ ಸೀಳಿ ತುಂಡರಿಸಿದ.

ಅಷ್ಟು ದೂರ ಹೋಗಿದ್ದನೋ, ಇಲ್ಲವೋ—ಮನಸಿನ ಭಾವನೆಗಳ ವಿರುದ್ಧ ಎದ್ದು ನಿಲ್ಲುವ ಎದೆಗಾರಿಕೆಯನ್ನು ಕಳೆದುಕೊಂಡವನಂತೆ ಮತ್ತೆ ಹಿಂತಿರುಗಿ ಬಂದು, ಆ ಮುಗ್ಧೆಯ ಮುಖಕಮಲವನ್ನು ಮನದಣಿಯೆ ನೋಡುತ್ತ ನಿಂತ. ಬಿಸುಸುಯ್ಲು ಆಗಾಗ ಹೊರಹೊಮ್ಮುತ್ತಲೇ ಇತ್ತು. ಆಕೆಯ ಮುಖದ ಕಾಂತಿ, ಆತನನ್ನು ತಡೆದು ನಿಲ್ಲುವಂತೆ ಮಾಡುತ್ತಿತ್ತು. ಆಕೆಯ ಮನಸ್ಸಿನ ಪಾವಿತ್ರ್ಯವನ್ನು ನೆನೆದು ಮತ್ತಷ್ಟು ದುಃಖ ಉಮ್ಮಳಿಸಿತು ನಳನಿಗೆ. ಹತ್ತು ಹೆಜ್ಜೆ ಮುಂದಿಟ್ಟು ಹೋದರೆ, ಕಾಲುಗಳು ಭವದ ಬಂಧನದಲ್ಲಿ ತೊಳಲಾಡುವಂತೆ ಹಿಂದಕ್ಕೆ ಬರುತ್ತಿದ್ದವು.

ಕೊನೆಗೂ ಮನಸ್ಸನ್ನು ಬಿಗಿಹಿಡಿದು ದಮಯಂತಿಯ ಮುಖವನ್ನೊಮ್ಮೆ ಮನದಣಿಯೆ ನೋಡಿ, ಹೊರಟ ನಳರಾಯನ ಮನಸ್ಸು ಉರಿಯುವ ಕುಲುಮೆಯಂತಾಗಿತ್ತು. ಆದರೂ ದಮಯಂತಿಯನ್ನು ಆತ ಒಂಟಿಯಾಗಿ ಅರಣ್ಯ ಮಧ್ಯದಲ್ಲಿ ಬಿಟ್ಟು ಹೊರಟೇ ಹೋದನಾತ. ತಾನು ಅಬಲೆಯನ್ನು ಈ ರೀತಿಯಾಗಿ ಬಿಟ್ಟು ಬರಬಾರದಿತ್ತೆಂದು ಹಲುಬಿದ ನಳರಾಯ.

ಸುಖವಿದ್ದೆಡೆಗೆ ಕಷ್ಟಸುಖಗಳ ಪರಿವೆಯೇ ಇರುವುದಿಲ್ಲ........

ಹಗಲಿಡೀ ನಡೆದೂ, ನಡೆದೂ ಬೇಸತ್ತುದರಿಂದ ದಮಯಂತಿಗೆ ಸುಖವಾದ ನಿದ್ದೆಯೇ ಬಂದಿತ್ತು. ಜಗದ ಚಿಂತೆಯನ್ನೇ ಬಿಟ್ಟು ನಿದ್ರಿಸಿದ್ದ ಆಕೆಗೆ ನಳರಾಯ ತನ್ನನ್ನಗಲಿ ಹೋದುದೂ ತಿಳಿಯಲಿಲ್ಲ.

ನಿದ್ದೆಯಿಂದ ಎಚ್ಚೆತ್ತ ದಮಯಂತಿ, ತನ್ನಧಿನಾಯಕನಿಗೆಂದು ಆತುರದಿಂದ ನೋಡಿದಾಗ ಆತನಲ್ಲಿರಲಿಲ್ಲ. ಗಗನವೇ ತಲೆಯ ಮೇಲೆ ಕುಸಿದು ಬಿದ್ದಂತಾಯಿತಾಕೆಗೆ. ಅಳುಮುಖಮಾಡಿ ತನ್ನನ್ನು ತಾನು ಮರೆತು, ದಿಕ್ಕು ಕಾಣದಂತವಳಾಗಿ ವನದ ಭೀತಿಯಿಂದ ಮುಂದೆ ಹೆಜ್ಜೆ

ಯಿಂದಲೂ ಭಯಗೊಂಡವಳಾಗಿ. ಈ ಪರಿಸ್ಥಿತಿಯಲ್ಲಿ ತಾನು ಇನ್ನೆಲ್ಲಿಗೆ ಹೋಗಲಿ ಎಂದು ಚಿಂತಿಸಿದಳು. ಆಕೆಯ ಚಿಂತೆ ಕ್ಷಣ ಕ್ಷಣಕ್ಕೂ ಹೆಚ್ಚಾಗುತ್ತಲೇ ಇತ್ತು.

ಸುತ್ತ ತಿರುಗಿ ನೋಡಿದಾಗಲೂ ಪತಿಯ ಪತ್ತೆಯೇ ಇಲ್ಲ. ಸಮಯ ಮೀರುತ್ತಿದ್ದಂತೆ ದಮಯಂತಿಯ ಭಯ ಇಮ್ಮಡಿಯಾಗುತ್ತಿತ್ತು. ದುಃಖ ಉಕ್ಕಿ ಬರುತ್ತಿತ್ತು. ಆ ದುಃಖ ಮೇರೆ ಮೀರಿದಾಗ, ಸಾವರಿಸಿ ಕೊಳ್ಳಲಾರದವಳಾಗಿ, ದುಃಖಿತಳಾಗಿ, ಸಂಪೂರ್ಣ ಧೈರ್ಯ, ಸ್ಥೈರ್ಯ ಗಳನ್ನು ಕಳೆದುಕೊಂಡಿದ್ದಳು; ಅತ್ತು ಅತ್ತು ಸುಸ್ಪದ ನಯನಗಳು ಕಾಂತಿಹೀನವಾಗಿದ್ದವು. ಅಂದವಾದ ಮುಖ ಕಮಲದಂತೆ ಬಾಡಿತ್ತು. ನಿಲ್ಲಲಾರದೆ, ಕುಳಿತಿರಲಾರದೆ ಇಹದ ದುಃಖಗಳೆಲ್ಲ ಒಮ್ಮೆಲೇ ಆಕೆಯ ಮೇಲೆ ಆಕ್ರಮಣ ನಡೆಸಲು ಆ ದಮಯಂತಿಯ ಪಾಡು ಹೇಳತೀರದು. ಬಾಯಾರಿಕೆಯ ಬಳಲಿಕೆಯಿಂದ ಮತ್ತಷ್ಟು ಧೃತಿಗೆಟ್ಟಿದ್ದಳು.

ಅಂತರಂಗ ಹುಚ್ಚೆದ್ದು ನರ್ತಿಸಿದಾಗ, ಪ್ರಕೃತಿಯೆಲ್ಲ ಮೂಕವಾಗಿ ಆಕೆಯನ್ನು ಹಾಸ್ಯ ಮಾಡುವಂತೆ ಕಂಡಿತವಳಿಗೆ:

"ಭೂದೇವಿಯೇ ಹೇಳು........ನನ್ನ ಪತಿದೇವನೆಲ್ಲಿ ಹೋದ........ ಯಾವದಿಕ್ಕಿನಲ್ಲಿ ಹೋದ........ವಾಸವಲಕ್ಷ್ಮಿಯೇ ನೀನಾದರೂ ಹೇಳ ಬಾರದೇ, ನನ್ನ ಕಷ್ಟವನ್ನು ಅರ್ಥಮಾಡಿಕೊಳ್ಳಬಾರದೆ........ಗಗನವೇ ನೀನರಿಯದ ವಿಷಯವಿದೆಯೇ, ಏಕೆ ಮೂಕವಾಗಿರುವೆ ನೀನು........ ಒಮ್ಮೆ ಹೇಳಬಾರದೆ, ನನ್ನ ಪ್ರಾಣನಾಥನೆಲ್ಲಿ ಹೋದ....ದಿಕ್ಪಾಲಕರೇ ಮಂದ ಸಮೀರನೇ, ಮದನನೇ ಭೂಜಾಳಿಯೇ, ಶೈಲವೇ....ಲತೆಯೇ.... ಪಲ್ಲವಪಂಕ್ತಿಯೇ....ಅರಳಿ ನಿಂತಿರುವ ಸುಮಗಳೇ....ವನ್ಯಮೃಗಗಳೇ.... ನನ್ನ ಪತಿದೇವನನ್ನೊಮ್ಮೆ ತೋರಿಸಲಾರಿರಾ....ನನ್ನ ಮೊರೆಯನ್ನು ಕೇಳಿಸಲಾರಿರಾ....ಯಾಕೆ ಮೂಕರಾಗಿದ್ದೀರಿ....

—ಪ್ರಕೃತಿಯ ಮುಂದೆ, ದಮಯಂತಿ ಎಷ್ಟು ಹಲುಬಿದರೂ ಅದು ಮೂಕವಾಗಿಯೇ ಇತ್ತು.

—ತನ್ನನ್ನೇ ತಾನು ಜರೆದುಕೊಂಡಳು ದಮಯಂತಿ. ಈ ವರೆಗೆ ನಡೆದುದೆಲ್ಲಾ ಆಕೆಗೆ ಕನಸಿನಷ್ಟೇ ವಿಚಿತ್ರವಾಗಿ ಕಂಡಿತು. ತಾನೇಕೆ ಹೆಣ್ಣಾಗಿ ಹುಟ್ಟಿದೆ—ಯೌವನ ತನ್ನನ್ನು ಆಕ್ರಮಿಸಿದಾಗ ತಾನೇಕೆ ನಳರಾಯನನ್ನೇ ಬಯಸಿ ಪ್ರೇಮಿಸಿದೆ....ತನ್ನ ಮನದ ಇಂಗಿತವನ್ನು ಆ ರಾಜಹಂಸವದೇತಕೆ ಬಂದು ನಳರಾಯನ ಬಳಿಗೆ ಹೋಗಿ ಹೇಳಿ, ತಮ್ಮಿಬ್ಬರನ್ನು ಪ್ರೇಮಪಾಶದಿಂದ ಬಂಧಿಸಿತು....—ಇವನ್ನೆಲ್ಲ ನೆನೆದಾಗ ದಮಯಂತಿಯ ಮನಸ್ಸು ಆಶ್ಚರ್ಯದಿಂದ ವಿಹ್ವಲಗೊಂಡಿತು, ಮತ್ತೆ ನಳರಾಯ ದ್ಯೂತದಲ್ಲಿ ಸೋತುದದೇಕೆ....ಸಮಸ್ತ ರಾಜ್ಯವನ್ನು ಕಳೆದುಕೊಂಡು ಈ ದಟ್ಟಡವಿಯಲ್ಲಿ ಅಲೆದಾಡುವ ಯೋಗವಾದರು ಅದೇಕೆ ಬಂತು....ಈಗ ನಳರಾಯನು ತನ್ನನ್ನು ಬಿಟ್ಟು ಏಕೆ ಹೊರಟುಹೋದ.... ಈ ವೈಪರೀತ್ಯಗಳಿಗೆಲ್ಲ ತನಗೆ ಉತ್ತರ ನೀಡುವವರು ಯಾರು.... ಯಾರು...—ದಮಯಂತಿಯ ಅಂತಃಕರಣದ ವಿರಹದುರಿ ಬದುಕಿನ ಹಲವು ಮುಖಗಳನ್ನು ಪ್ರಶ್ನಿಸಿ, ಪ್ರಶ್ನಿಸಿ ಒಡವಾಯಿತು.

ಇನ್ನು ಚಿಂತಿಸಿ ಫಲವಿಲ್ಲವೆಂದು ಬಗೆದ ದಮಯಂತಿ ಮುಂದೆ ತಾನು ಏನು ಮಾಡಬೇಕೆಂದು ಚಿಂತಿಸಿದಳು; ಎಷ್ಟು ಚಿಂತಿಸಿದರೂ ನಳನಲ್ಲದೆ ಇನ್ನಾರೂ ಆಕೆಗೆ ಗತಿಕಾಣಿಸುವವರು ಇಲ್ಲವಾದರು. ಆತನನ್ನು ಕೂಡಿದರೇನೇ ಆ ಬದುಕು ಮತ್ತೆ ಜ್ಯೋತಿರ್ಮಯವಾಗಿ ಬೆಳಗುತ್ತದೆ. ಆತನನ್ನು ಹೇಗಾದರೂ ಮಾಡಿ ಹುಡುಕಿಯೇ ತೀರಬೇಕು; ದಟ್ಟಡವಿಯಲ್ಲಿ ಎತ್ತ ಕಡೆ ಹೋಗಬೇಕೆಂದೇ ತಿಳಿಯದ ದಮಯಂತಿ ಒಂದೊಂದೇ ಹೆಜ್ಜೆಯನ್ನು ಮುಂದೊತ್ತಿದಳು; ಯಾವುದೋ ದಿಕ್ಕಿನತ್ತ ನಡೆದಳು.

ಎಷ್ಟು ನಡೆದಳೋ—ಕಾಲಿಗೆ ಬಳಲಿಕೆಯಿಲ್ಲದೆ, ಮನಸ್ಸು ನಿರ್ದಿಷ್ಟವಾದ ವಿಚಾರವನ್ನು ಚಿಂತಿಸದೆ, ಆಕೆ ಮುಂದೊತ್ತುತ್ತಲೇ ಇದ್ದಳು. ಏಕಾಂಗಿಯಾಗಿ ಲಲನೆಯೊಬ್ಬಳು ನಡೆದು ಬರುತ್ತಿದ್ದುದನ್ನು ಕಂಡ ಬೇಡನೊಬ್ಬ ಆಸಕ್ತಿಯಿಂದ ಆತುರತೆಯಿಂದ, ಆಕೆಯ ಎದುರು ಬಂದು ನಿಂತುಕೊಂಡ.

ಅನಿರೀಕ್ಷಿತವಾಗಿ ಮಾನವನೊಬ್ಬ ಕಾಣಿಸಿಕೊಳ್ಳಲು ದಮಯಂತಿಗೆ ತುಸು ಧೈರ್ಯ ಬಂದರೂ ಮತ್ತೆ ಆತನ ಚಲನ, ವಲನಗಳನ್ನು ಕಂಡಾಗ

ದಮಯಂತಿಗೆ ಭಯವೇ ಹೆಚ್ಚಾಗಿ ಕಾಣಿಸಿಕೊಂಡಿತು: ನಿಂತಲ್ಲಿಂದ ಕದಲಲಾರದೆ. ಈಗ ಈ ದುಷ್ಟನಿಂದ ಪಾರಾಗುವ ಬಗೆಯಾದರೂ ಹೇಗೆ? ದಮಯಂತಿ ಚಿಂತಿಸಿದಳು. ಅಂದು ಸ್ವಯಂವರ ಮಂಟಪದಲ್ಲಿ ದೇವತೆಗಳು ನೀಡಿದ ವರದ ನೆನಪಾಯಿತಾಕೆಗೆ.

ದುರುಳನಾದ ಬೇಡ ಅವಳೆಡೆಗೆ ದಾಪುಗಾಲಿಡಲಿಕ್ಕೆ ಮುಂದಾಗಿ ಬಂದನು. ದಮಯಂತಿಯ ಭಯಭೀತ ನಯನಗಳು ಅಗ್ನಿಯನ್ನೇ ಕಾರಿದವು. ಸುಟ್ಟು ಭಸ್ಮವಾದ ಆ ಕಿರಾತ.

ಒಂದೆಡೆ ಭಯ: ಇನ್ನೊಂದೆಡೆ ದೇವತೆಗಳು ನೀಡಿದ ವರ ಇಂದು ಫಲಿಸಿತಲ್ಲ ಎಂಬ ಸಂತೋಷ—ಒಂದು ಗಳಿಗೆಯ ಹೊತ್ತು ಮನದ ಮೂಲೆಯಲ್ಲಿ ಸುಳಿದು ಹೋಗಿದ್ದ ನಳನ ನೆನಪು ಮತ್ತೆ ಆಕೆಯನ್ನು ಮುತ್ತಿಕೊಂಡಿತು. ಪ್ರಾಣೇಶ್ವರನ ನಾಮ ಜಪಿಸುತ್ತ ಮುಂದಡಿಯಿಟ್ಟಳು ದಮಯಂತಿ. ವನ ಮಧ್ಯದಲ್ಲಿ ಎಷ್ಟು ನಡೆದರೂ ಕೊನೆಯೇ ಇಲ್ಲ!

ಕಾಡಿನ ನಡುವಿನಲ್ಲಿ ಜಾಡೊಂದು ಕಾಣಿಸಿಕೊಂಡಾಗ ಇದು ಜ ಸಂಚಾರದ ಪ್ರದೇಶವೆಂದು ದಮಯಂತಿ ತಿಳಿದಳು. ಆದರೆ ಆ ದಾ ಯಾಗಿ ಬರುವ ಯಾವನೇ ಪ್ರಯಾಣಿಕನು ಆಕೆಗೆ ಕಾಣಿಸಲಿಲ್ಲ. ಈ ಬರಬಹುದು, ಮತ್ತೆ ಬರಬಹುದು—ಎಂಬ ಆಕೆಯ ಆಸೆ ಕೊನೆಗ ಫಲಿಸಿತು. ರತ್ನ ವೈಢೂರ್ಯಗಳಿಂದ ಹೇರಲಾದ ಬೆಲೆಬಾಳುವ ಬಂ ಗಳನ್ನು ಒಂದೂರಿನಿಂದ ಇನ್ನೊಂದು ಊರಿಗೆ ಕೊಂಡೊಯ್ದು ಮಾರುವ, ವರ್ತಕರ ತಂಡವೊಂದು ಆ ಮಾರ್ಗವಾಗಿ ಬರುವುದ ಕಂಡಳು ದಮಯಂತಿ. ಆಗ ಆಕೆಗೆ ಆದ ಆನಂದ ಅಷ್ಟಿಷ್ಟಲ್ಲ. ಇ ಸಹಾಯದಿಂದಾದರೂ ನಾಡು ಸೇರಿ ಮತ್ತೆ ನಳನನ್ನು ಹುಡುಕಿಸ ಯತ್ನ ಮಾಡಬಹುದೆಂದು ಬಗೆದಳಾಕೆ.

ವನಮಧ್ಯದಲ್ಲಿ ನಾರಿಯೊಬ್ಬಳು ನಿಂತಿರುವುದನ್ನು ಕಂಡು ಭ ಗೊಂಡ ವರ್ತಕರು ದೂರ ದೂರ ಸರಿಯಲು, ದಮಯಂತಿ ಅವರ ಹಿಂಬಾಲಿಸಿದಳು.

"ನಾನು ಭೂತವಲ್ಲ, ಪಿಶಾಚಿನಿಯಲ್ಲ, ಮೋಹಿನಿಯಲ್ಲ....ನಾನು ನಿಜವಾದ ಹೆಣ್ಣು....ನನ್ನನ್ನು ನಂಬಿ....ನಿಮ್ಮೊಂದಿಗೆ ನಗರಕ್ಕೆ ನನ್ನನ್ನು ಕೊಂಡೊಯ್ಯಿರಿ...."—ಅಂಗಲಾಚಿ ಬೇಡಿದಳಾಕೆ.

ಯಕ್ಷಿ, ಮೋಹಿನಿಯರಂತೆ ವನಮಧ್ಯದಲ್ಲಿ ಹಲವು ಬಾರಿ ನೋಡಿದ ಅನುಭವವಿದ್ದ ಆ ವರ್ತಕರು ಮೊದಲು ಆಕೆಯನ್ನು ಸಮೀಪಿಸಲು ಹಿಂಜರಿದರು. ಈಕೆ ನಿಜವಾದ ಲಲನೆಯೆಂದು ಮನವರಿಕೆಯಾದ ಬಳಿಕ ಆಕೆಯನ್ನು ತಮ್ಮೊಂದಿಗೆ ಕರೆದೊಯ್ದರು.

ಆಕೆ ಎಲ್ಲಿಂದ ಬಂದಳು....? ವನ ಮಧ್ಯದಲ್ಲಿ ಹೇಗೆ ಒಬ್ಬಂಟಿಯಾಗಿ ಉಳಿದಳು ಅನ್ನುವುದೊಂದನ್ನೂ ಅವರು ಕೇಳಲಿಲ್ಲ. ನಾಡು ತಲಪಿಸುವ ಭರವಸೆ ಅವರಿಂದ ದೊರೆತಾಗ ದಮಯಂತಿ ಅವರನ್ನು ಹಿಂಬಾಲಿಸಿದ್ದಳು. ಮನಸ್ಸಿನಲ್ಲಿ ಬೇಸರ ಕುದಿಯುತ್ತಲೇ ಇತ್ತು!

ಅಂದು ರಾತ್ರಿಯಲ್ಲಿ ಸಿಂಧೂ ತಟದಲ್ಲಿ ಬೀಡು ಬಿಟ್ಟರು ಆ ವರ್ತಕರು. ಆದರೆ ಅನಿರೀಕ್ಷಿತವಾಗಿ ಎತ್ತಲಿಂದಲೋ ಕಾಡಾನೆಯೊಂದು ಬಂದು ಅವರ ಮೇಲೆ ನುಗ್ಗಿತು. ಆನೆಯೊಡನೆಯೂ ಸೆಣಸಾಟವೇ! ಅವರೆಲ್ಲ ದಿಕ್ಕುಗೆಟ್ಟು ಓಡಿದರು. ಅವರಲ್ಲಿದ್ದ ಸರಕುಗಳೆಲ್ಲ ಚೆಲ್ಲಾಪಿಲ್ಲಿಯಾಗಿ ಹರಡಿದವು.

ದಮಯಂತಿಯಾದರೋ ನಳನ ಚಿಂತೆಯಲ್ಲಿಯೇ ಇದ್ದುದರಿಂದ ಕಾಡಾನೆ ನುಗ್ಗಿದುದೂ ತಿಳಿಯದೆ ಆಕೆ ಅಲ್ಲೇ ಒಂದೆಡೆ ಕುಳಿತಿದ್ದಳು. ನುಗ್ಗಿದ ಆನೆಗೆ ಆಕೆ ಕಾಣಿಸಿದಳೋ ಇಲ್ಲವೋ, ಅದು ವರ್ತಕರನ್ನು ಅಟ್ಟಿಸುತ್ತ ಹೋಯಿತು.

ಕಾಲಾನಂತರ ನುಗ್ಗಿದ ಆನೆ ಮತ್ತೆ ವನವನ್ನು ಪ್ರವೇಶಿಸಿರಬೇಕು. ದೆಸೆಗೆಟ್ಟು ಓಡಿದ ವರ್ತಕರು ಒಬ್ಬೊಬ್ಬರಾಗಿಯೇ ಬಂದು ಸೇರಿದರು. ಆದರೂ ದಮಯಂತಿ ಕುಳಿತಲ್ಲಿಂದ ಎದ್ದಿರಲಿಲ್ಲ; ನಳನ ಚಿಂತೆಯನ್ನು ಬಿಟ್ಟಿರಲಿಲ್ಲ!

"ಈಕೆ ಮಾರಿಯಿರಬಹುದು; ನಮ್ಮ ಪಾಲಿಗೆ ಶನಿಯಂತೆ ಬಂದು ಅಂಟಿಕೊಂಡಿದ್ದಾಳೆ...."—ಒಬ್ಬಾತ ರಾಗ ಎಳೆದ.

"ಈ ಪಾಪಿ ಬಂದುದರಿಂದಲೇ ನಮಗೀ ಆಪತ್ತು ಸಂಭವಿಸಿದ್ದು...." —ಇನ್ನೊಬ್ಬ ಪಡಿ ನುಡಿದ.

"ಈಕೆಯನ್ನು ಇನ್ನು ನಮ್ಮೊಂದಿಗೆ ಕರೆದೊಯ್ಯಬಾರದು—ಇಲ್ಲೇ ಬಿಟ್ಟು ಮುಂದೆ ಹೊರಡೋಣ....ಇಷ್ಟು ಬಂದದ್ದೇ ಸಾಕು...."

—ಬಗೆ ಬಗೆಯಾಗಿ ದಮಯಂತಿಗೆ ಛೀಮಾರಿ ಹಾಕಿದ ವರ್ತಕರ ತಂಡ ಮುಂದೊತ್ತಿತು.

ದಮಯಂತಿಯಾದರೂ ಏನು ಮಾಡಿಯಾಳು....ಒಂದೆಡೆ ಸಕಲೈಶ್ವರ್ಯವನ್ನೂ ಕಳೆದುಕೊಂಡು ಕಾಡುಪಾಲಾದ ದುಃಖ....ಮತ್ತೊಂದೆಡೆ ತನ್ನ ಮನಮಂದಿರವನ್ನು ಬೆಳಗಿದ ನಳರಾಯ ಕಣ್ಮರೆಯಾದ ಮರುಕ.... ಮಗದೊಂದೆಡೆ ತನ್ನ ಮೇಲೆ ಕರುಣೆತೋರಿದ ವರ್ತಕರಿಗೆ ವಿಪತ್ತು ಸಂಭವಿಸಿದ ಚಿಂತೆ....—ಇದನ್ನೆಲ್ಲ ನೆನೆದಾಗ ದುರ್ವಿಧಿಯನ್ನು ನಿಂದಿಸಿದಳು ದಮಯಂತಿ. ದುಃಖ ಉಮ್ಮಳಿಸಿ ಬಂತಾಕೆಗೆ. ದೈವೇಚ್ಛೆ ಹಾಗಿರುವಾಗ ಏನು ಪ್ರಯತ್ನ ಪಟ್ಟರೂ ವಿಫಲವೇ....!

ಇನ್ನೆಲ್ಲಿಗೆ ಹೋಗಲಿ... ?—ಎಂಬ ಚಿಂತೆಯಿಂದ ಅಧ್ವಲ್ಪಟ್ಟವಳಾದ ದಮಯಂತಿ ದುಃಖಾತಿರೇಕದಿಂದ ಮೈಮರೆತು ಅಲ್ಲೇ ಕುಳಿತಳು. ನದಿಯ ತಟದಿಂದ ಬೀಸುತ್ತಿದ್ದ ಮಂದಾನಿಲ ಆಕೆಯನ್ನು ಸಂತೈಸುತ್ತಿತ್ತು: ಚಿಲಿಪಿಲಿ ಗುಟ್ಟುವ ಪಕ್ಷಿಸಂಕುಲ ಜೋಗುಳ ಹಾಡುತ್ತಿದ್ದವು—ವನದೇವತೆಯ ಮಡಿಲಲ್ಲಿ ಶಿಲಾಪ್ರತಿಮೆಯಂತೆ ಕುಳಿತಳು ದಮಯಂತಿ. ಸಮಯದ ಅರಿವೇ ಆಕೆಗಿರಲಿಲ್ಲ.

ಮತ್ತೆ ಚೇತರಿಸಿಕೊಂಡಾಗ, ಕರ್ತವ್ಯದ ಪ್ರಜ್ಞೆ ಮೂಡಿದಾಗ "ತಾನಿನ್ನು ಕುಳಿತಿರಬಾರದು... ನಳನನ್ನು ಹೇಗಾದರೂ ಮಾಡಿ ಹುಡುಕಬೇಕು...." ಎಂಬ ದೃಢ ನಿಶ್ಚಯವುಳ್ಳವಳಾಗಿ ಎದ್ದು ಹೊರಟಳು ದಮಯಂತಿ.

ಹರಿದ ಬಟ್ಟೆಯುಟ್ಟು, ಏಕಾಂಗಿಯಾಗಿ ಹೋಗುತ್ತಿದ್ದ ಲಲನೆ ಅನಂತನಿಧಿ ಪಟ್ಟಣಕ್ಕೆ ಹೋಗುತ್ತಿದ್ದ ಕೆಲ ಬ್ರಾಹ್ಮಣರ ಕಣ್ಣಿಗೆ ಗೋಚರಿ

ಸಿದಳು. ಈಕೆಯೂ ಅನಂತನಿಧಿ ಪಟ್ಟಣಕ್ಕೆ ಹೋಗುತ್ತಿದ್ದಾಳೆಂದು ಬಗೆದರು ಆ ಬ್ರಾಹ್ಮಣರು.

"ಅಮ್ಮಾ ತಾವು ಯಾವ ಕಡೆಗೆ ಹೊರಟಿದ್ದೀರಿ...." ಎಂದು ಪ್ರಶ್ನಿಸಿದರು. ಅದಕ್ಕೆ ದಮಯಂತಿ ಉತ್ತರಿಸಲಿಲ್ಲ. ಎಲ್ಲಿಗೆಂದು ಆಕೆ ಉತ್ತರಿಸಿಯಾಳು....ಮತ್ತೆ ಪ್ರಶ್ನಿಸಿದ, ಅವರಲ್ಲೊಬ್ಬ ವೃದ್ಧ ಬ್ರಾಹ್ಮಣ:

"ನಾವು ಅನಂತನಿಧಿ ಪಟ್ಟಣಕ್ಕೆ ಹೋಗುವವರಿದ್ದೇವೆ....ತಮ್ಮನ್ನು ನೋಡಿದರೆ ಕುಲೀನರ ಸ್ತ್ರೀಯಂತೆ ಕಾಣಿಸುತ್ತೀರಿ....ತಾವೂ ಆ ಅನಂತ ನಿಧಿ ಪಟ್ಟಣಕ್ಕೆ ಬರುವವರಾಗಿದ್ದರೆ ಬರಬಹುದು...."

ಬ್ರಾಹ್ಮಣನ ಮಾತಿಗೆ ಅಹುದೆಂಬಂತೆ ತಲೆಯಾಡಿಸಿದಳು, ದಮಯಂತಿ. ಯಾಕೋ ಮೌನವಾಗಿದ್ದ ಈಕೆಯನ್ನು ಅವರು ಹೆಚ್ಚು ಮಾತನಾಡಿಸಲಿಲ್ಲ. ಆ ಬ್ರಾಹ್ಮಣರನ್ನು ಹಿಂಬಾಲಿಸಿ ನಡೆದ ದಮಯಂತಿ ಅನಂತನಿಧಿ ಪಟ್ಟಣವನ್ನು ಸೇರಿದಳು.

ಹೆಸರಿಗೆ ತಕ್ಕಂತೆ ಅದು ಅನಂತವಾದ ನಿಧಿಯ ತವರೂರಾಗಿತ್ತು. ಸಿರಿ, ಸಂಪತ್ತು ಎಲ್ಲೆಲ್ಲೂ ತುಂಬಿ, ತುಳುಕಾಡುತ್ತಿತ್ತು. ಸಂಪತ್-ಸಮೃದ್ಧಿಯಾಗಿ ತುಂಬಿ ರಂಜಿಸುತ್ತಿದ್ದ ಆ ದೇಶದಲ್ಲಿ ತನ್ನ ಘನತೆಯನ್ನು ಸಾರುವಂತೆ ಗಗನಚುಂಬಿಗಳಾದ ಮಹಲುಗಳು ರಾರಾಜಿಸುತ್ತಿದ್ದವು.

ಈ ರಾಜ್ಯ ಎಷ್ಟೊಂದು ಸಂತಸದಿಂದ ಮೆರೆದಾಡುತ್ತಿದೆ........! ಇಲ್ಲಿಯ ಅರಸನಾರು....? ದಮಯಂತಿ ತುಸು ಯೋಚಿಸಿದಳು. ವನ ಮಧ್ಯದಲ್ಲಿ ಅವರಾವುದೋ ಊರಿನ ಹೆಸರು ಹೇಳಿದ್ದು ನೆನಪು. ಅವರನ್ನು ಆಕೆ ಹಿಂಬಾಲಿಸಿದ್ದಳು ಅಷ್ಟೆ! ಈಗ ದಮಯಂತಿ ಮೆಲ್ಲನೆ ಪ್ರಶ್ನಿಸಿದಳು:

"ಬ್ರಾಹ್ಮಣೋತ್ತಮರೆ, ಈ ದೇಶದಲ್ಲಿ ಯಾರು ರಾಜ್ಯವಾಳುತ್ತಾರೆ....?"

"ದಯಾನಿಧಿಯಾದ ಅನಂತಶೇಖರನೆಂಬ ಅರಸ....—ಆತನ ಹೆಸರನ್ನು ತಾವು ಕೇಳಿಲ್ಲವೇ ತಾಯಿ....?"

"ಇಲ್ಲ......." ತಲೆಯಾಡಿಸಿದಳು ದಮಯಂತಿ.

"ಅವಳ ರಾಣಿಯೂ ಗುಣನಿಧಿಯಾಗಿದ್ದಾಳೆ. ಸಾಕ್ಷಾತ್ ಲಕ್ಷ್ಮಿ ಯಂತಹ ಹೆಣ್ಣು...ಆಕೆಯ ಹೆಸರು ಚಂದ್ರಾನನೆಯೆಂದು..."

"ಅಮ್ಮದೇವಿ...!?"—ತಲೆದೂಗಿದಾಗ ದಮಯಂತಿ.

ಬ್ರಾಹ್ಮಣನಿಂದ ವಿಳಾಸ್ಯಂದ ಒಳಿತ ದಮಯಂತಿ ಸೇರವಾ ಅರಮನೆಯತ್ತ ನಡೆದಳು. ಅರಮನೆಯನ್ನು ಬಹಳ ಬೇಗನೆ ಸೇರಿದ ಯೋಗವೇ ಅದಾಗಿದ್ದು. ಬದುಕಿನಲ್ಲಿ ಯಾವುದೊಂದು ಆಸೆಯುಳ್ಳದ ಸ್ವಾ ವಸ್ತ್ರವಸ್ತುವಿನ ಆಯುಧದಲ್ಲಿ ಆಕೆಗೆ ಹೆಚ್ಚುಗೆಯೇ ಇರಲಿಲ್ಲ. ಅದಕ್ಕಿಂ ನಿರಾಸೆಯ ಅಗ್ನಿಜ್ವಾಲೆ ಆಕೆಯಂತರಂಗವನ್ನು ಕವಿದಿತ್ತು.

ದಮಯಂತಿ ಸೈರಂಧ್ರಿಯಾಗಿ ಕೋರಿದಳು. ರಾಜಮಾತೆ ಆಕೆಯನ್ನು ಸೈರಂಧ್ರಿಯಾಗಿ ತನ್ನ ಅಂತಃಪುರದಲ್ಲಿ ಇರಿಸಿಕೊಂಡಳು. ದಮಯಂತಿಯ ಮಾಸಿದ ಸೀರೆ, ಬಿಡಿಹೊಯ್ದ ಕೂದಲು, ಕಳೆದ ಮುಖಮಂಡಲ—ಎಲ್ಲವೂ ಆಕೆ ಬದುಕಿನ ಬಗೆಗೆ ತಳೆದಿದ್ದ ವಿರಕ್ತಿಯನ್ನು ಪ್ರತಿಬಿಂ ಸುತ್ತಿತ್ತು. ರಾಜಮಾತೆಗೆ, ಈಕೆ ಏಕೆ ಈ ರೀತಿಯಿದ್ದಾಳೆ ಎಂಬು ತಿಳಿಯಲಿಲ್ಲ. ಕೊನೆಗೂ ತನ್ನಲ್ಲಿ ಸೈರಂಧ್ರಿಯಾಗಿರುವಾಕೆ ದಮಯಂ ಎಂಬ ವಿಚಾರ ಆಕೆಗೆ ತಿಳಿಯಲು ಹೆಚ್ಚು ದಿನ ಹಿಡಿಯಲಿಲ್ಲ.

ಈಕೆ ತನ್ನ ಅಕ್ಕನ ಮಗಳಾದ ದಮಯಂತಿ ಎಂದು ತಿಳಿದ ರಾ ಮಾತೆ, ಯೋಗ್ಯರೀತಿಯಿಂದ ನಡೆಸಿಕೊಂಡಳು. ಇದೇ ಸಮಯ ಭೀಮರಾಯ ತನ್ನ ಕುವರಿ ಹಾಗೂ ನಳನನ್ನು ಹುಡುಕಿಸಲು ದೇ ಮೂಲೆ ಮೂಲೆಗೆ ತನ್ನ ಅಧಿಕಾರಿ ವರ್ಗದವರನ್ನು ಅಟ್ಟಿದ್ದ. ದ್ಯೂತವಾಡಿ ಸಂಪೂರ್ಣವನ್ನು ಸೋತು ಅಡವಿ ಸೇರಿದ ವಿಷಯವ ಲ್ಲದೆ ಉಳಿದ ವಿಚಾರ ಯಾರಿಗೂ ತಿಳಿದಿರಲಿಲ್ಲ. ಹಲವಾರು ರಾಜ ರಾಜರೂ ನಳನನ್ನು ಹುಡುಕುವ ಕಾರ್ಯದಲ್ಲಿ ಮುಂದಾದರು. ಬಂದವರು ಅನಂತನಿಧಿ ಪಟ್ಟಣವನ್ನೂ ಪ್ರವೇಶಿಸಿದರು. ಅಲ್ಲಿ ದ ಯಂತಿ ಅಂತಃಪುರದಲ್ಲಿ ಸೈರಂಧ್ರಿಯಾಗಿರುವ ವಿಚಾರ ತಿಳಿದಾಗ ಅ ಈ ವಾರ್ತೆಯನ್ನು ಭೀಮರಾಯನಿಗೆ ತಿಳಿಸಿದರು.

ಭೀಮರಾಯನಿಗೆ ಆದ ಆನಂದ ಅಷ್ಟಿಷ್ಟಲ್ಲ. ತನ್ನ ಕುವರಿಗೆ ಪ್ರಾಣಾಪಾಯವಾಗದೆ ಸುಖಿಯಾಗಿದ್ದಾಳಲ್ಲ — ಎಂದು ತಿಳಿದು ಆತ ಹಿಗ್ಗಿದ್ದನು. ರಾಜಯೋಗ್ಯವಾಗಿ ಆಕೆಯನ್ನು ತನ್ನರಮನೆಗೆ ಕರೆಸಿಕೊಂಡ. ದಮಯಂತಿಯಾದರೋ ಏನೂ ಮಾಡುವ ಸ್ಥಿತಿಯಲ್ಲಿರಲಿಲ್ಲ. ತಂದೆಯ ಆಸರೆಯೇನೋ ದೊರೆಯಿತೆಂಬ ಸಮಾಧಾನವೊಂದನ್ನು ಬಿಟ್ಟರೆ ಆಕೆಯ ಮನಸ್ಸಿಗೆ ನೆಮ್ಮದಿಯೇ ಇರಲಿಲ್ಲ.

ನಳನೇನಾದನೋ....!? ಎಲ್ಲಿ ಕಷ್ಟಪಡುತ್ತಿರುವನೋ... ನೆನೆದೂ, ನೆನೆದೂ ಬಸವಳಿದು ಹೋದಳು ದಮಯಂತಿ. ಈ ಅಸ್ತವ್ಯಸ್ತ ಪರಿಸ್ಥಿತಿಯಲ್ಲೇ ದಮಯಂತಿ ತಂದೆಯ ಅರಮನೆಯನ್ನು ಪ್ರವೇಶಿಸಿದ್ದು.

ಹಳೆಯ ಸಂಭ್ರಮಗಳೆಲ್ಲ ನೆನಪಿನ ಹಾಳೆಯಲ್ಲಿ ಸುರುಳಿಗಟ್ಟಿ ನಿಂತಿದ್ದವು. ಆ ಚಿಂತನೆಗೂ ಆಸ್ಪದವಿಲ್ಲದ ದಿನಗಳು ಇಂದು ಬಂದಿದ್ದವು.

ಹಲವು ದಿನಗಳಿಂದ ತಾಯಿ-ತಂದೆಯರ ಮುಖವನ್ನು ಕಾಣದಿದ್ದ ಕುವರರು ತಾಯಿಯಾದರೂ ಬಂದಳಲ್ಲ ಎಂಬ ಸಂತಸದಿಂದ ದಮಯಂತಿಯನ್ನು ಪರಿಪರಿಯಾಗಿ ಪ್ರಶ್ನಿಸುತ್ತಿದರು.

"ನಮ್ಮ ತಂದೆ ಎಲ್ಲಿದ್ದಾರಮ್ಮ ...ಅವರೇಕೆ ಬಂದಿಲ್ಲವಮ್ಮ .. "— ಎಂದು ಕಾಡಿದಾಗ ದಮಯಂತಿಗೆ ಮತ್ತಷ್ಟು ದುಃಖವಾಗುತ್ತಿತ್ತು.

"ಇನ್ನೇನು ಕೆಲದಿನಗಳಲ್ಲೇ ಬಂದು ಬಿಡುವರು ಮಗೂ...."— ಸಮಾಧಾನ ನುಡಿಯುವಳು ದಮಯಂತಿ.

ದಮಯಂತಿಯನ್ನು ಮರಳಿ ಮತ್ತೆ ಪಡೆಯುವೆನೋ. ಇಲ್ಲವೋ ...ಯಷ್ಟು ಮಟ್ಟಿಗೆ ಬದುಕಿನಲ್ಲಿ ನಿಸ್ಸಹಾಯಕನಾಗಿ, ನಳರಾಯ ...ಕೆಯನ್ನು ವನಮಧ್ಯದಲ್ಲಿ ಏಕಾಂಗಿಯಾಗಿ ನಿದ್ರಿಸುತ್ತಿರುವಾಗ, ಮನಸ್ಸಿ...ಲ್ಲದ ಮನಸ್ಸಿನಿಂದ ಬಿಟ್ಟು ಹೊರಟು ಹೋಗಿದ್ದ. ಆಕೆ ಹೇಗಾದರೂ ...ನ್ನ ತವರನ್ನು ಸೇರಬಹುದು; ಅಲ್ಲಿ ಸುಖವಾಗಿರಬಹುದು—ಎಂಬ

ಆಂತರಿಕ ಪ್ರಜ್ಞೆ ಇದ್ದರೂ ಪರಿಸ್ಥಿತಿಯನ್ನು ಊಹಿಸಿಯೇ ನಳನ ಮನಸ್ಸು ಕದಡಿತ್ತು.

ವನಮಧ್ಯದಲ್ಲಿ ನಡೆದದ್ದೇ ರಸ್ತೆ. ದಮಯಂತಿಯನ್ನು ತೊರೆದು ಎಷ್ಟು ದೂರ ನಡೆದಿದ್ದನೋ. ಆಗ ಕೇಳಿಸಿತು ಕೋಲಾಹಲ, ಅನಿರೀಕ್ಷಿತವಾಗಿ ಕೇಳಿಸುತ್ತಿದ್ದ ಪಕ್ಷಿಮೃಗಗಳ ಕೂಗು ನಿಮಿಷ ನಿಮಿಷಕ್ಕೂ ಹೆಚ್ಚಾಗುತ್ತಲೇ ಇತ್ತು: ದೂರದಲ್ಲಿ ಕಪ್ಪಗೆ ಗಗನವನ್ನು ಆವರಿಸುತ್ತಿರುವ ಧೂಮವನ್ನು ಕಂಡ ನಳರಾಜ: ಬೀಸಿದ ಗಾಳಿಗೆ ಉರಿಯು ಬೆಳೆಯುತ್ತಿದ್ದುದು ತಿಳಿಯಿತವನಿಗೆ. ನೋಡುತ್ತಿದ್ದಂತೆ ಕಾಳ್ಗಿಚ್ಚು ಸುತ್ತಮುತ್ತಲಿಂದಲೂ ಹಬ್ಬಿ ಬರುತ್ತಿತ್ತು. ಕುರುಚಲು ಗಿಡಗಳು, ಪೊದೆಗಳು, ಮರಗಳು—ಒಂದನ್ನೂ ಬಿಡದೆ ಆಪೋಶನ ಮಾಡುತ್ತ ಹುಲ್ಲು ಹಾಸುಗೆಯ ಮೇಲೆ ಕೆಂಪು ನಾಲಗೆಯನ್ನು ಚಾಚುತ್ತ ಬರುತ್ತಿದ್ದ ದಾವಾನಲದ ಭಯಂಕರ ಸ್ವರೂಪ ನೆನೆಸಿದರೂ ನಡುಕ ಹುಟ್ಟಿಸುವಂತಹದು. ಉರಿಯ ಜ್ವಾಲೆ, ಒಂದೆಡೆ ಮೃಗಸಂಕುಲವನ್ನು ಬೆಂಬತ್ತಿನಡೆದರೆ, ಮತ್ತೊಂದೆಡೆ ಬಾಯಾರಿದ ಪಕ್ಷಿ ಸಂಕುಲ ಗಗನಕ್ಕೆ ಹಾರಿಹೋಗುವಂತೆ ಮಾಡುತ್ತಿತ್ತು. ನಯನ ಮನೋಹರವಾಗಿ ಕಂಗೊಳಿಸುತ್ತಿದ್ದ ವನರಾಜಿಯ ಸೌಂದರ್ಯ, ಸಂಪತ್ತೆಲ್ಲ ಸುಟ್ಟು ಭಸ್ಮವಾಗುತ್ತಿದ್ದವು. ಬಿರುಗಾಳಿಯನ್ನೇ ತನ್ನಾತ್ಮದಲ್ಲಿ ಹೊಂದಿ ಬರುತ್ತಿದ್ದ ಅಗ್ನಿದೇವ!

ಕಾಡಾನೆಗಳು ಒಂದೊಂದಾಗಿ ಕೊಂಡೂರಿ ನೆಲಕ್ಕೆ ಕೆಡೆಯಲ್ಪಟ್ಟವು. ನಾಲಗೆಯನ್ನು ಹೊರಚಾಚಿ, ನೊರೆ ಸುರಿಸುತ್ತ ಕಾಡುಕೋಣಗಳು ಜಲವನ್ನು ಅರಸುತ್ತ ಓಡುತ್ತಿದ್ದವು: ಅನಲದುರಿ ಕವಿದು ಕರಿದಾದ ಹುಲಿ ಹಿಂಡುಗಳು ದಿಕ್ಕುಗೆಟ್ಟು ಪಲಾಯನ ಮಾಡಿದವು. ಕರಿ ಹೊಗೆಯಲ್ಲಿ ನುಸುಳಿಹೋದ ಕರಡಿಗಳೆಲ್ಲ ತಮ್ಮ ಗವಿಗಳಲ್ಲೇ ಇಹದಯಾತ್ರೆಯನ್ನು ಮುಗಿಸಿದುವು: ತಮ್ಮ ವಾಸಸ್ಥಳವನ್ನು ಬಿಟ್ಟಗಲುವ ಧೈರ್ಯವಿಲ್ಲದ ಜಿಂಕೆಗಳು ಅಲ್ಲಿಯೇ ನರಕಯಾತನೆಯನ್ನು ಅನುಭವಿಸಿದವು. ಹತ್ತಿ ಉರಿಯುತ್ತಿದ್ದ ಮರದ ಕೊಂಬೆಗಳು ಒಂದೊಂದಾಗಿ ಕೆಡೆವಾಗ ಎರಳೆಗಳ ಗುಂಪೇ ನಿರ್ನಾಮವಾಗುತ್ತಿತ್ತು. ಉರಿಯನ್ನು ಕಾರುತ್ತಿರುವ ಪೊದ

ಗಳ ನಡುವೆ ಸಿಕ್ಕುಹಾಕಿಕೊಂಡ ಸಾರಂಗಗಳು ಮುಗ್ಗರಿಸಿ ಬೀಳುತ್ತಿದ್ದವು; ಗಿಡುಗಗಳು ರೆಕ್ಕೆಗಳೆಲ್ಲ ಸುಟ್ಟು ಗೋತಹೊಡೆದು ಬೀಳುತ್ತಿದ್ದವು. ಕೋಡಗಗಳು ತಮ್ಮ ಮರಿಗಳನ್ನು ರಕ್ಷಿಸಲಾರದೆ, ಅವುಗಳನ್ನು ಸುರಕ್ಷಿತವಾದ ಜಾಗಕ್ಕೆ ಕೊಂಡೊಯ್ಯಲೂ ಆಗದೆ ಕಂಗೆಡುತ್ತಿದ್ದವು; ಪಕ್ಷಿಸಂಕುಲವೆಲ್ಲಾ ಆಗಲೇ ಸುಟ್ಟು ಬೂದಿಯಾಗಿದ್ದವು. ಸರಪಿಯಂತೆ ಸುರುಳಿ ಬೀಳುತ್ತಿದ್ದ ಉರಗಗಳಿಗಂತು ಲೆಕ್ಕವೇ ಇಲ್ಲ. ಅಂಗಾಂಗಗಳನ್ನೆಲ್ಲ ಗಬ್ಬೊಗೆ ಕವಿದಾಗ ಹೊರಳಾಡುವ, ಸೊಕ್ಕಿದ ಹೆಬ್ಬಾವುಗಳ ಪಾಡು ಹೇಳತೀರದು.

ದಾವಾನಲ ಪ್ರವರ್ಧಮಾನವಾಗಿ ಉರಿಯುತ್ತಲೇ ಇತ್ತು. ರಾಕ್ಷಸಾಕಾರದ ಮರಗಳೆಲ್ಲ ಚಟಚಟವೆಂದು ಉರಿದು ಮುರಿದು ಬೀಳುತ್ತಿದ್ದವು. ಆಕಾಶ ಮಂಡಲವನ್ನಿಡೀ ಕಬ್ಬೊಗೆ ಕವಿದಿತ್ತು. ಸಮಸ್ತ ಜೀವರಾಶಿಯನ್ನು ತನ್ನ ಕೆನ್ನಾಲಿಗೆಯಿಂದ ಸವರಿ ನುಂಗುತ್ತಿದ್ದ ಕಾಡ್ಗಿಚ್ಚು ಎಣ್ದೆಸೆಗಳಿಗೂ ಒಂದೇ ಸವನೇ ನುಗ್ಗುತ್ತಿತ್ತು. ಆಗ ಕೇಳಿಸಿತು "ರಕ್ಷಿಸಿ, ರಕ್ಷಿಸಿ...."—ಎಂಬ ಆರ್ತನಾದ.

"ಈ ಅರಣ್ಯಮಧ್ಯದಲ್ಲಿ ದಾವಾನಲಕ್ಕೆ ಸಿಲುಕಿ 'ರಕ್ಷಿಸಿ' ಎಂದು ಬಾಯ್ಬಿಡುವವನಾದರೂ ಯಾರಿರಬಹುದು........! ?" – ನಳರಾಯ ಚಿಂತಿಸಿದ.

ಇದು ಅರಣ್ಯರೋದನವೇ ಸರಿ! ಅರಣ್ಯದಲ್ಲಿ ರಕ್ಷಿಸಿರೆಂದು ಬೇಡಿದರೂ ರಕ್ಷಿಸುವವರು ಯಾರು....!" ನಳ ಚಿಂತಿಸುತ್ತಿದ್ದ. ಮತ್ತೆ ಬಳಲಿಕೆಯಿಂದ ತೊದಲುವಂತೆ ಕೇಳಿಸುತ್ತಿತ್ತು ಆ ಧ್ವನಿ...."ರಕ್ಷಿಸಿ.... ರಕ್ಷಿಸಿ...."—ಎಂದು.

ಕಣ್ಣಿಗೆ ಯಾರೂ ಕಾಣಿಸದಿರಲು, ನಳರಾಜ ಸುತ್ತಲೂ ನೋಡಿದ. ಎತ್ತಲೂ ಬೆಂಕಿಯ ಜ್ವಾಲೆಯೇ ಕಾಣಿಸುತ್ತಿತ್ತು, ಏನೂ ಮತ್ತೇನೂ ಕಾಣಿಸದು. ಆರ್ತನಾದ ಅತೀ ಹತ್ತಿರದಿಂದ ಕೇಳಿಸುತ್ತಿದ್ದರೂ ಯಾರ ಸುಳಿವೂ ಇಲ್ಲ. ಇದೇನಾದರೂ ಭೂತಚೇಷ್ಟೆಯಿರಬಹುದೇ — ನಳ ಮತ್ತಷ್ಟು ಚಿಂತಿಸಿದ.

"ಭೂನಾಥ....ರಕ್ಷಿಸು....ರಕ್ಷಿಸು...." — ಮತ್ತೆ ಅದೇ ಕೀರಲು
ಧ್ವನಿ.

ಆ ಧ್ವನಿ ತನ್ನನ್ನೇ ಉದ್ದೇಶಿಸಿದಂತಿದೆಯಲ್ಲ....

"ಆರ್ತನೇ....ಯಾರು ನೀನು ...?" – ನಳ ಪ್ರಶ್ನಿಸಿದ.

"ನಾನು ನಾಗಕುಲದಲ್ಲಿಯೇ ಶ್ರೇಷ್ಠನಾದವನು; ಈಗ ದಾವಾನಲದ
ಬಾಯಿಗೆ ತುತ್ತಾಗಿದ್ದೇನೆ...."

"ನಿನ್ನ ಹೆಸರು...."

"ನಾನು ಕಾರ್ಕೋಟಕ .. ನನ್ನನ್ನು ರಕ್ಷಿಸು ಮಹಾರಾಜಾ...."

"ಆರ್ತರನ್ನು ರಕ್ಷಿಸುವುದು ರಾಜನಾದವನ ಕರ್ತವ್ಯ....ಆದರೆ...."

"ತಡಮಾಡಬೇಡ ಮಹಾರಾಜ....ನನ್ನ ಅಸು ಈಗಲೇ ನೀಗಿ
ಹೋಗಬಹುದು....ನನ್ನನ್ನು ರಕ್ಷಿಸಿದರೆ ನಿನಗೆ ಪುಣ್ಯಬರುತ್ತದೆ... ರಕ್ಷಿಸು
ಮಹಾರಾಜ....ರಕ್ಷಿಸು...."–ಕಾರ್ಕೋಟಕ ಒಂದೇ ಸಮನೆ ಒರಲುತ್ತಿತ್ತು

ಇನ್ನು ತಡಮಾಡಬಾರದು ..... ತಾನು ಹೇಗಾದರೂ ಮಾಡಿ
ಕಾರ್ಕೋಟಕನನ್ನು ರಕ್ಷಿಸಬೇಕು –ದೃಢ ನಿರ್ಧಾರದಿಂದ ಮುಂದೊತ್ತಿದ
ನಳರಾಯ. ಕವಿದ ಕರ್ಬೊಗೆಯ ನಡುವೆ ಓಡಿಹೋಗಿ ಆ ಕಾರ್ಕೋಟಕ
ವನ್ನು ಎತ್ತಿಕೊಂಡು ಬಂದು ಇತ್ತ ಬಿಟ್ಟುಬಿಟ್ಟ.

ಬೆಂದ ಬಳಲಿಕೆ, ನೊಂದ ಉರಿ ಎಲ್ಲವನ್ನೂ ಒಂದಾಗಿಸಿ ಆಗಲೇ
ಕ್ರೂರ ಸರ್ಪ ನಳನನ್ನು ಕಡಿದಿತ್ತು.

"ಹಾ ವಿಧಿಯೇ...."— ವಿಷದ ಉರಿಯನ್ನು ತಾಳಲಾರದೆ ನ
ರಾಯ ಚೀತ್ಕರಿಸಿದ.

ವಿಷ ನಳನ ದೇಹವನ್ನೆಲ್ಲ ಆವರಿಸುತ್ತಲೇ ಇತ್ತು. ಅ
ರೂಪವೇ ವಿಕಾರವಾಗತೊಡಗಿತ್ತು. ಮೂಗು ಮುರುಟಿಕೊಂಡಿತ
ಕಣ್ಣುಗುಡ್ಡೆಗಳು ಮತ್ತಷ್ಟು ಒಳಗೆ ಹೋದವು; ಕೈಬೆರಳುಗಳೆಲ್ಲ ಅ
ಡೊಂಕಾಗಿ ವಕ್ರವಾದವು; ಕೊರಳು ಕುಬ್ಜವಾಯಿತು; ಬೆನ್ನು ಬ

ಹೋಯಿತು; ಆತನ ಅಂಗಾಂಗಗಳನ್ನೆಲ್ಲ ವಿಷದ ಛಾಯೆ ಆಗಲೇ ಬಣ್ಣ ಬದಲಿಸಿತು.

ತನ್ನ ವಾಕರಿಕೆ ಬರಿಸುವಂತಹ ಈ ರೂಪವನ್ನು ಕಂಡು ನಳರಾಯ ತನ್ನಲ್ಲೇ ಮರುಗಿದ. ಇನ್ನು ಈ ಭೂಮಂಡಲದಲ್ಲಿ ತಾನು ಬದುಕಿ ಇರುವುದಾದರೂ ಹೇಗೆ–ಚಿಂತಿಸಿದ; ಆದರೆ ಕಾರ್ಕೋಟಕ ಮಾತ್ರ ಈತನ ಕಷ್ಟವನ್ನೂ ದುರವಸ್ಥೆಯನ್ನೂ ಒಂದಿಷ್ಟು ಹಚ್ಚಿಕೊಳ್ಳದೆ ನಿಶ್ಚಿಂತೆ ಯಿಂದ ಇದ್ದ.

"ಎಲೇ ಕಾರ್ಕೋಟಕ....ನಿನಗೆ ನಾನು ಮಾಡಿದ ಉಪಕಾರಕ್ಕೆ ನೀನು ಮಾಡುವ ಪ್ರತ್ಯುಪಕಾರ ಇದೇ ಏನು?"

"ನಿನ್ನ ಮಾತುಗಳು ಅರ್ಥವಾಗಲಿಲ್ಲ ಭೂನಾಥ....!"

"ನಿನಗೆ ಹೇಗೆ ಅರ್ಥವಾಗಬೇಕು ಹೇಳು....ಕೆಟ್ಟ ಹಾವಿಗೆ ಹಾಲೆರೆ ದರೆ ಅದು ವಿಷವೇ ಆಗುವುದೆಂಬ ಗಾದೆಯ ಮಾತು ಸುಳ್ಳಲ್ಲ....ಅದನ್ನು ನೀನು ನಿಜವಾಗಿಸಿ ತೋರಿಸಿದೆ...."

"ಇಲ್ಲ ಭೂನಾಥ, ನೀನು ನನ್ನನ್ನು ತಪ್ಪಾಗಿ ತಿಳಿದುಕೊಂಡಿದ್ದೀಯಾ...." ನಿನಗೆ ನಾನೆಂದೂ ಕೇಡನ್ನು ಮಾಡಿಲ್ಲ ಮಹಾರಾಜ, ನಿನ್ನನ್ನಡರಿರುವ ಶನಿ ತೊಲಗಿ ಹೋದಾಗ ಇದೋ ಈ ನಾಗವಸ್ತ್ರದಿಂದ ನಿನ್ನ ಅಂಗಾಂಗಗಳನ್ನು ತೊಡೆದುಕೊಳ್ಳಲು ನಿನಗೆ ನಿಜ ಸ್ವರೂಪ ಬರುವುದು...."

ಕಾರ್ಕೋಟಕನಿತ್ತ ಎರಡು ನಾಗವಸ್ತ್ರಗಳನ್ನು ಸಂತಸದಿಂದ ಸ್ವೀಕರಿಸಿದ ನಳರಾಯ ಅದನ್ನು ತನ್ನ ಸೊಂಟದಲ್ಲಿ ಬಚ್ಚಿಟ್ಟುಕೊಂಡು ಕಾರ್ಕೋಟಕನಿಗೆ ಶಿರಸಾ ನಮಸ್ಕರಿಸಿದ. ಈ ವಿಕೃತರೂಪ ಆತನಿಗೆ ಒಂದು ವರವೇ ಆಗಿತ್ತು.

ತನ್ನ ನಿಜರೂಪ ಯಾರಿಗೂ ತಿಳಿಯದಂತೆ ಆ ವಿಕೃತರೂಪವು ತನ್ನಲ್ಲಿ ಕಂಡು ಬಂದಾಗ ನಳರಾಯ ಮನದಲ್ಲಿ ಎಷ್ಟು ನೊಂದುಕೊಂಡಿದ್ದನೋ ಅದರ ಇಮ್ಮಡಿಯಾಗಿ ಮತ್ತೆ ಕಾರ್ಕೋಟಕನನ್ನು ಮನದಲ್ಲಿಯೇ ಅಭಿನಂದಿಸಿದ.

ಪಾಲಿಗೆ ಬಂದದ್ದೆಲ್ಲ ಪಂಚಾಮೃತ! ಹಿಂದಿನ ಪಾಪದ ಫಲಿತವು ನನಗೆ ವರವಾಗಿ ಪರಿಣಮಿಸಿತೆಂಬ ಒಂದು ಸಮಾಧಾನವನ್ನು ಬಿಟ್ಟರೆ ರಾಜಾಧಿರಾಜನಾದ ನಳಚಕ್ರವರ್ತಿ ವಿಕೃತರೂಪಿಯಾಗಿ ಹೀಗೆ ಅರಣ್ಯ ಮಧ್ಯದಲ್ಲಿ ಅಲೆದಾಡುವುದೆಂದರೇನು! ವಿಧಿಯ ವಿಷ ಅಟ್ಟಹಾಸ ನಳನನ್ನು ತನ್ನತನ ಕಳೆದುಕೊಳ್ಳುವಂತೆ ಮಾಡಿತ್ತು.

ಅಲ್ಲಿಂದ ಮುಂದಕ್ಕೆ ಸಾಗಿದ ನಳರಾಯ. ಕಾಡನ್ನು ಬಿಟ್ಟು ನಾಡನ್ನು ಪ್ರವೇಶಿಸಿದ; ಅತುಲೈಶ್ವರ್ಯ ವೈಭವದಿಂದ ಮೆರೆದಾಡುವ ಆ ನಾಡು ಸುಖದ ಸುಪ್ಪತ್ತಿಗೆಯಲ್ಲಿ ಹೊರಳಾಡುತ್ತಿತ್ತು. ರತ್ನಕಳಶಗಳನ್ನು ಹೊಂದಿದ್ದ ಗಗನಚುಂಬಿ ಮಂದಿರಗಳು ನಯನ ಮನೋಹರವಾಗಿದ್ದುವು. ಅದೇ ಅಯೋಧ್ಯಾಪುರ! ಅಲ್ಲಿ ಋತುಪರ್ಣನೆಂಬ ಅರಸ ರಾಜ್ಯವಾಳುತ್ತಿದ್ದ.

ಋತುಪರ್ಣ ಮಹಾ ಧಾರ್ಮಿಕ ಮನೋಧೈರ್ಯವುಳ್ಳವನು; ಪ್ರಾಚೀನವಾದ ಕ್ಷತ್ರಿಯ ವಂಶದ ಪರಂಪರೆಯುಳ್ಳವನು; ಅವನ ನಡೆ ನುಡಿಗಳೂ ಪವಿತ್ರವಾದುವು; ದೋಷವೆಂದರೇನೆಂದು ಅವ ಕೇಳ್ದರಿಯ; ಯುದ್ಧದಲ್ಲಿ ಅಚಲ ವಿಶ್ವಾಸವುಳ್ಳವನು; ಕಲಾಸಂಪನ್ನನಾತ.

ಅಂತಹ ರಾಜನು ಆಳುತ್ತಿದ್ದ ಅಯೋಧ್ಯಾಪುರವನ್ನು ಹೊಕ್ಕ ನಳ ಮಹಾರಾಜ ನೇರವಾಗಿ ಅರಮನೆಯತ್ತಲೇ ನಡೆದನು. ಆಗ ಅವನಿಗಲ್ಲಿ ಎದುರಾದುದು ಅಶ್ವಶಾಲೆ. ಅಲ್ಲಿಯ ಕಾಂಭೋಜ, ಸೈಂಧವ ಮೊದಲಾದ ಒಳ್ಳೆಯ ವರ್ಗಕ್ಕೆ ಸೇರಿದ ಕುದುರೆಗಳನ್ನು ಕಂಡಾಗ ಅವನಿಗೆ ತನ್ನ ಹಳೆಯ ನೆನಪೆಲ್ಲ ಒಮ್ಮೆಲೇ ಮರುಕಳಿಸಿತು. ಆತ ಅಶ್ವಹೃದಯವನ್ನು ಬಲ್ಲವನಾದುದರಿಂದ ಅಶ್ವಶಾಲೆ ಹಿತವೆನಿಸಿತಾತನಿಗೆ; ಒಳ ಪ್ರವೇಶಿಸಿ ನೋಡುವ ಹಂಬಲ....

ಅನಿರೀಕ್ಷಿತವಾಗಿ ತುರಗಶಾಲೆಯನ್ನು ಪ್ರವೇಶಿಸಿದ ನಳರಾಯನನ್ನು ಅಲ್ಲಿಯ ಮಾಲೀಕ ಪ್ರಶ್ನಿಸಿದ.

"ಯಾರು ನೀವು....?"

ಏನೆಂದು ಉತ್ತರಿಸಬೇಕು.. ? ಆದರೂ ಉತ್ತರಿಸಿದ ನಳರಾಯ-

"ನಾನು ಬಾಹುಕ...."

"ಇಲ್ಲಿಗೇತಕ್ಕೆ ಬಂದೆ...."

"ನನಗೆ ಕುದುರೆಗಳೆಂದರೆ ಬಲು ಇಷ್ಟ....ಇಲ್ಲಿ ಇರುವ ಈ ಅಶ್ವ ಸಮೂಹವನ್ನು ನೋಡುತ್ತಿದ್ದರೆ ನನ್ನ ಮನಸ್ಸಿಗೆ ತುಂಬಾ ಆನಂದವಾಗುತ್ತದೆ...."

"ಹಾಗೇನೂ....!?"–ಆಶ್ಚರ್ಯ ವ್ಯಕ್ತಪಡಿಸಿದನಾತ.

"ನೀವು ಉತ್ತಮೋತ್ತಮ ವರ್ಗಕ್ಕೆ ಸೇರಿದ ಕುದುರೆಗಳನ್ನು ಸಾಕಿದ್ದೀರಿ... ಆದಕ್ಕಾಗಿ ನಾನು ನಿಮಗೆ ಕೃತಜ್ಞ."

ಬಾಹುಕನ ಕೃತಜ್ಞತೆಯಿಂದ ಅವನಿಗೇನಾಗಬೇಕಾಗಿದೆ....? ಭಾವ ಪರವಶತೆಯಿಂದ ಮಾತು ಬೆಳೆಸಿದ ಬಾಹುಕನನ್ನುದ್ದೇಶಿಸಿ ತುರಗ ಶಾಲೆಯ ಅಧಿಕಾರಿಯೆಂದ: "ಈ ಕುದುರೆಗಳ ಸೇವೆಯ ಕೆಲಸವನ್ನು ನಾನು ನಿನಗೊಪ್ಪಿಸಿದ್ದೇನೆ...."

ಸಂತಸ ಉಕ್ಕಿಬಂತು ಬಾಹುಕನಿಗೆ. ಹಸಿದ್ದುದೂ ಉಳಕೊಳ್ಳಲು ಆಸರೆಯೊಂದು ದೊರೆಯಿತು.

"ನಿಮಗೆ ಹೇಗೆ ಕೃತಜ್ಞತೆಗಳನ್ನು ಅರ್ಪಿಸಲೋ ತಿಳಿಯದಾಗಿದೆ...."—ಅತುಲಾನಂದವನ್ನು ವ್ಯಕ್ತಪಡಿಸಿದ ಬಾಹುಕ.

ನಿಷಧ ದೇಶದ ಚಕ್ರವರ್ತಿಯೆಲ್ಲಿ....;? ಅಯೋಧ್ಯಾಪುರದ ತುರಗ ಶಾಲೆಯ ಬಾಹುಕನೆಲ್ಲಿ—!? ವಿಧಿಯ ಈ ಕಾಲದ ಕೈವಾಡದಿಂದ ತಪ್ಪಿಸಿಕೊಳ್ಳಲು ಯಾರಿಂದ ತಾನೇ ಸಾಧ್ಯವಿದೆ... ! ಹರಿ, ಹರರನ್ನು ವಿಧಿ ಅಟವಾಡಿಸದೆ ಬಿಡಲಿಲ್ಲ; ಬ್ರಹ್ಮದೇವನಿಗೆ ತನ್ನ ಮಗಳನ್ನೇ ಮದುವೆಯಾಗುವಂತೆ ಪ್ರೇರೇಪಿಸಲಿಲ್ಲವೇ? ರವಿಯನ್ನು ನೆಲೆಗೊಂಡಿರಲೀಯದೇ, ಇಂದ್ರನನ್ನು ನಗೆಗೀಡು ಮಾಡಿಸಿದ್ದೂ ವಿಧಿಯ ಕಲೆಯೇ ಅಲ್ಲವೇ! ಇಂತಹ ದೇವಾದಿಗಳನ್ನೂ ಬಿಡದೆ ಕಾಡಿದ್ದ ವಿಧಿಯ ಮಹಿಮೆ ಸಾಮಾನ್ಯವೇನಲ್ಲ.... ಮತ್ತೆ ಹುಲು ಮಾನವನಾದ ನಳನ ಪಾಡೇನು!

ದುಃಸ್ಥಿತಿ ತನ್ನ ಪಾಲಿಗೆ ಬಂದರೂ ಅದರಲ್ಲಿಯೇ ಸ್ವರ್ಗ ಸುಖವನ್ನು ಕಂಡ ನಳರಾಯ–ಪ್ರತಿದಿನ ತುರಗ ಸಮೂಹದ ಮೈಯನ್ನು

ಸಾರುವುದರಲ್ಲೇ ತೃಪ್ತಿಯನ್ನು ಹೊಂದಿದನು: ಅವುಗಳೊಡನೆ ಸ್ನೇಹ ವನ್ನು ಬೆಳೆಸಿ ಸರಸ ಮಾತುಕತೆಯಾಡುತ್ತಿದ: ಅವುಗಳನ್ನೇರಿ ಕುಳಿತು ಸಂಚರಿಸುವುದು ತಾನಾಕ್ಕೆ ಕೊಂಡೊಯ್ಯಾಗಲೂ ಆತನ ಮನಸ್ಸು ಹರ್ಷಗೊಳ್ಳುತ್ತಿತ್ತು. ಆ ಕುದುರೆಗಳ ಸಮೂಹದಿಂದ ಉತ್ತಮವಾದು ದನ್ನು ಅತ್ತಿತ್ತ ನಿಂತುನೋಡಿ ಮನಸಾರೆ ಮೆಚ್ಚಿಕೊಳ್ಳುತ್ತ. ತಾನು ಎಂತಹ ದುಃಸ್ಥಿತಿಯಲ್ಲಿದ್ದೇನೆಂಬ ಚಿಂತೆಯನ್ನೂ ಮರೆಯುತ್ತಿದ್ದ.

ತುರಗಗಳನ್ನು ಪರೀಕ್ಷಿಸುವುದರಲ್ಲಿ, ಅವುಗಳ ರಕ್ಷಣೆ ಮಾಡುವುದರ ಲ್ಲಿ ಕುದುರೆ ಸವಾರಿಯಲ್ಲಿ ಪರಿಣತನೆನಿಸಿಕೊಂಡ ಬಾಹುಕ ಅಯೋಧ್ಯೆ ಯಲ್ಲೆಲ್ಲ ಎಲ್ಲರ ಬಾಯ ಮಾತಾದ. ಆತನ ಅಪೂರ್ವ ಗುಣಸಂಪತ್ತು ಬಾಯಿಂದ ಬಾಯಿಗೆ ಹಾರಿತು. ಅರಸನಾದ ಋತುಪರ್ಣನ ಕಿವಿಗೂ ಮುಟ್ಟಿತು. ಆತನಿಗೆ ಬಾಹುಕನನ್ನು ನೋಡುವಾಸೆ.

ಋತುಪರ್ಣ, ಬಾಹುಕನನ್ನು ಕಣ್ಣಾರೆ ಕಾಣುವ ಮೊದಲು ಆತನ ಬಗೆಗೆ ಮಹತ್ತರವಾದ ಕಲ್ಪನೆಗಳನ್ನು ಹೊಂದಿದ್ದ. ಇಂತ ಅಪೂರ್ವ ಗುಣಿ ನೋಡಲೂ ಸುಂದರನಿರಬಹುದು. ದೃಢಕಾಯನಿ ಬಹುದು—ಎಂದು.

ಬಾಹುಕನನ್ನು ಒಮ್ಮೆ ತನ್ನ ಆಸ್ಥಾನಕ್ಕೆ ಕರೆಯಿಸಿದ ಋತುಪರ್ ಮಹಾರಾಜ. ಸುಂದರನಾಗ ಬಾಹುಕನ ನಿರೀಕ್ಷೆಯಲ್ಲಿ ಕುಳಿತಿದ್ದ ಅರ ಸಗೆ. ಆತನ ವಿಕೃತ ಸ್ವರೂಪವನ್ನು ಕಂಡಾಗ ಏನೊಂದು ನಿರ ಕಹಿಸಿರಲಿಕ್ಕಿಲ್ಲ. ಏನೂ ಮಾಡಲೂ ತೋಚದೆ ಬುದ್ಧಿಭ್ರಮಣೆಯಾದ ದಂತೆ ಗೊಳ್ಳನೆ ನಕ್ಕುಬಿಟ್ಟನಾತ. ನಳನ ರೂಪವೇ ಅಂತಹದಾಗಿತ್ತು

"ಇಂತಹ ಕುರೂಪಿಯೂ ಅಶ್ವವಿದ್ಯೆಯಲ್ಲಿ ಪ್ರವೀಣನೇ!?"–ಎ ಶಂಕೆ ಆತನಲ್ಲಿ ಮೂಡದಿರಲಿಲ್ಲ.

ಋತುಪರ್ಣನಿಂದ ಬೀಳ್ಕೊಂಡ ಬಾಹುಕ ಮತ್ತೆ ಅಶ್ವಶಾಲೆಯ ಪ್ರವೇಶಿಸಿದ. ಅಲ್ಲಿ ದ್ವಾರದಲ್ಲಿಯೇ ಈತನಿಗಾಗಿ ಕಾದು ನಿಂತಿದ್ದ ದ ನನ್ನು ಕಂಡಾಗ ಬಾಹುಕನಿಗೆ ಆಶ್ಚರ್ಯವಾಗದೇ ಇರಲಿಲ್ಲ. "ಈ ವನು?" ಎಂಬ ಪ್ರಶ್ನೆ ತನ್ನಿಂದ ತಾನಾಗಿಯೇ ಆತನ ಮನಸ್

ಮೂಡಿತು. ಆ ದೂತ, ಬಾಹುಕನನ್ನೇ ಎವೆಯಿಕ್ಕದೆ ನೋಡುತ್ತಿದ್ದ. ಬಹುಶಃ ಈತನ ವಿಕೃತರೂಪವನ್ನು ನೋಡುತ್ತಿರಬಹುದು.. ಎಂದು ಭಾವಿಸಬಹುದೇ? ಅದಕ್ಕೂ ಆಸ್ಪದವಿಲ್ಲ - ಯಾಕೆಂದರೆ ಅಯೋಧ್ಯಾಪುರದಲ್ಲಿ ಆ ಬಾಹುಕನನ್ನು ಅರಿಯದವರೇ, ಇಲ್ಲವೆನ್ನಬಹುದು. ಈತನ ಖ್ಯಾತಿ ಅಂತಹದ್ದು. ಮೂಕನಾಗಿ ಅಶ್ವಶಾಲೆಯ ಬಳಿ ನಿಂತಿದ್ದ ಅಪರಿಚಿತನಾದ ದೂತನನ್ನು ಮಾತಾಡಿಸುವ ಮನಸ್ಸಾಯಿತು ಬಾಹುಕನಿಗೆ. ಆತ ಪ್ರಶ್ನಿಸಿದ;

"ಯಾರು ನೀನು..? ಎಲ್ಲಿಂದ ಬಂದಿರುವೆ...."

"ನಾನು ವಿದರ್ಭದೇಶದಿಂದ ಒಂದು ಮಹತ್ತರವಾದ ಕೆಲಸದ ಮೇಲೆ ಬಂದಿದ್ದೇನೆ...."-ಆ ದೂತ ಉತ್ತರಿಸಿದ.

ವಿದರ್ಭದೇಶದಿಂದ ಮಹತ್ತರವಾದ ಕೆಲಸದಮೇಲೆ...!!? ನಳನ ನರನಾಡಿಗಳೆಲ್ಲ ಒಂದೊಂದೇ ಮುಗುಚಿಬಿದ್ದವು. ತಾನೀಗ ನಳನಲ್ಲ—ಬಾಹುಕ.. ಬಾಹುಕನಾಗಿ ಈ ದೂತನ ಮುಂದೆ ನಿಂತಿದ್ದೇನೆ. ಎಂಬ ಕಲ್ಪನೆ ಆತನಲ್ಲಿ ಒಮ್ಮೆಲೇ ಕವಿಯಿತು.

"ಮಹತ್ತರವಾದ ಕೆಲಸವೆಂದೆಯಲ್ಲ.......ಅದೇನೆಂದು ತಿಳಿಯಬಹುದೇ.......?"

"ನಿನಗೆ ತಿಳಿಯುವ ಉತ್ಸುಕತೆ ಇದ್ದರೆ ಕೇಳು....ದಟ್ಟಡವಿಯಲ್ಲಿ ತನ್ನ ವಲ್ಲಭೆಯನ್ನು ನಿದ್ರಿಸುತ್ತಿದ್ದಂತೆ ತೊರೆದು ಹೋದ ನಳಮಹಾತ್ಮನನ್ನು ಹುಡುಕಲೆಂದು ನಾನು ಬಂದೆ. ಆ ದಮಯಂತಿ ಮಾತೆಯೇ ನನ್ನನ್ನು ಅಟ್ಟಿದಳು. ಎಲ್ಲಿಗೆ ಸುತ್ತಾಡಿದರೂ ಆತನ ಪತ್ತೆಯಿಲ್ಲದಿರಲು ಈಗ ಈ ಅಯೋಧ್ಯಾಪುರವನ್ನು ಪ್ರವೇಶಿಸಿದ್ದೇನೆ."

"ಈ ರೀತಿಯಲ್ಲಿ ಹೆಣ್ಣೊಬ್ಬಳು ದೂತನನ್ನು ಅಟ್ಟುವುದು ಸ್ತ್ರೀ ಸ್ವಾತಂತ್ರ್ಯದ ದುರುಪಯೋಗವಲ್ಲವೇ?" ಬಾಹುಕನೆಂದ.

ಅದಕ್ಕೆ ಆ ದೂತ ಏನೊಂದೂ ಉತ್ತರಕೊಡದೆ ನೇರವಾಗಿ ಕುಂಡಿನ ಪುರಕ್ಕೆ ಹಿಂತಿರುಗಿದ.

ಬಾಹುಕನ ವಿಕೃತರೂಪ ಆತ ನಳನಲ್ಲವೆಂಬುದನ್ನು ಒತ್ತಿ ಹೇಳುತ್ತಿದ್ದರೂ ಸಾಮ್ರಾಜ್ಞಿಯೊಬ್ಬಳ ಸ್ವಾತಂತ್ರ್ಯದ ಬಗೆಗೆ ಪ್ರಶ್ನಿಸಿದ ಆತನ ಬಗೆಗೆ ದೂತ ತುಂಬ ಯೋಚಿಸದೆ ಇರಲಿಲ್ಲ. ಈ ಬಾಹುಕ ಒಬ್ಬ ಸಾಮಾನ್ಯ ವ್ಯಕ್ತಿಯಲ್ಲ. ಖಂಡಿತವಾಗಿಯೂ ಆತನಿಗೆ ನಳಮಹಾರಾಜರ ವಿಚಾರ ತಿಳಿದಿದೆ....ಎನ್ನುವ ವಿಚಾರದಲ್ಲಿ ದೂತನಿಗೆ ನಂಬುಗೆಯಿತ್ತು. ತಾನು ಮಹತ್ತಾದುದನ್ನು ಸಾಧಿಸಿದೆನೆಂಬ ಆತ್ಮವಿಶ್ವಾಸದಿಂದ ದೂತ ಬೇಗ ಬೇಗನೆ ದಮಯಂತಿಯಲ್ಲಿಗೆ ಹಿಂತಿರುಗಿ ಬಂದ. ತಾನು ತಂದ ವಾರ್ತೆಯಿಂದ ನಳನನ್ನು ಹುಡುಕಲು ಸಹಾಯವೊದಗುವುದೆಂಬುದು ಆತನ ತಿಳುವಳಿಕೆ.

ಕಾನನದ ಮೃಗಗಳಿಂದ ಪಾರಾಗಿ ನಾಡುಸೇರಿ ಮತ್ತೆ ತಂದೆಯ ಮನೆಯನ್ನು ಸೇರಿದಾಗಲೂ ದಮಯಂತಿಯ ಮನಸ್ಸಿಗೆ ನೆಮ್ಮದಿ ಬರಲಿಲ್ಲ. ಮನಸ್ಸೆಲ್ಲ ನಳನನ್ನೇ ನೆನೆಯುತ್ತಿತ್ತು! ಚಿಂತಿಸಿ, ಚಿಂತಿಸಿ ಬಡವಾದಳಾಕೆ.

ಭೀಮಸೇನ ಮಹಾರಾಜನಿಗೆ ತನ್ನ ಕುವರಿಯ ದುಃಖದಿಂದ ಅತೀವ ವೇದನೆಯುಂಟಾಗುತ್ತಿದ್ದರೂ ಆತ ಬೇರೆ ದಾರಿಯೇ ಕಾಣದಂತಾಗಿದ್ದ. ನಳನ ಶೋಧನೆಗೆ ಆತ ನಡೆಸಿದ ಯತ್ನಗಳೆಲ್ಲ ವಿಫಲವೇ ಆಗಿದ್ದವು.

ಅರಮನೆಯೇ ಸೆರೆಮನೆಯಂತೆ ಆಗಿತ್ತು ದಮಯಂತಿಗೆ. ಒಮ್ಮೆ ಯಾರಿಗೂ ಹೇಳದೆ ಒಬ್ಬಂಟಿಗಳಾಗಿ ಎದ್ದು ಉದ್ಯಾನಕ್ಕೆ ಹೋಗಿ ಕುಳಿತುಕೊಂಡಳಾಕೆ. ಎಲ್ಲಿಯಾದರೂ ಆತ್ಮಹತ್ಯೆ ಮಾಡಿಕೊಂಡರೆ ಎಂಬ ಭಯದಿಂದ ಸಖಿಯರು ಆಕೆಯನ್ನು ನೆರಳಿನಂತೆ ಹಿಂಬಾಲಿಸುವರು.

ದಮಯಂತಿಯ ವಿರಹದುರಿ ಹೆಚ್ಚಾಗುತ್ತಲೇ ಇದ್ದಿತು. ಸಾಯಂಕಾಲದ ಸೂರ್ಯನ ಹೊಂಗಿರಣಗಳು ಆಕೆಯ ಮೈಮೇಲೆ ಬಿದ್ದು ಜ್ವಾಲೆಯನ್ನೇ ಕಾರುತ್ತಿದ್ದವು. ಕತ್ತಲಾಗುವ ಮುನ್ನವೇ ಗೂಡುಸೇರುವ ತವಕ ಪಕ್ಷಿಗಳಿಗೆ; ಉತ್ಸಾಹದಿಂದ ಕುಕಿಲಿಡುವ ಕೋಗಿಲೆಯನ್ನು ಕಂಡಾಗ

ಆಕೆಯ ಎದೆಯಲ್ಲಿ ಇರಿದಂತಾಗುತ್ತಿತ್ತು—ಕೋಗಿಲೆಯ ಇಂಪಾದ ಹಾಡಿನ ಸಂಭ್ರಮವೆಲ್ಲ? ಈಕೆಯ ವಿರಹವೇದನೆಯ ಪರಿಯಲ್ಲಿ...!? ಎಲ್ಲವೂ ವಿಪರ್ಯಾಸದಂತೆ ಕಾಣುತ್ತಿದ್ದವು; ಮತ್ತೆ ಉದಯಿಸಿದ ಪೂರ್ಣ ಚಂದಿರ....ಆತನ ಬೆಳದಿಂಗಳೂ ಹಬ್ಬದ ಹೊನಲನ್ನೇ ಕಣ್ಣಮುಂದೆ ಹರಿಸುವುವು. "ನಾನದನ್ನ ನೋಡಲಾರೆ" — ಎಂಬಂತೆ ಎರಡೂ ಕೈಗಳಿಂದ ನಯನಗಳೆರಡನ್ನೂ ಮುಚ್ಚಿಕೊಳ್ಳುವಳು ದಮಯಂತಿ. ತೀಡುವ ತಂಗಾಳಿಗೆ ರೋಮರೋಮಗಳೂ ನಿಮಿರೇಳುತ್ತಿದ್ದವು; ಸ್ವರ್ಗೀಯ ಅನುಭವದ ನೆನಪು ಬಂದಾಗಲೆಲ್ಲ ಅಂಗಾಂಗಗಳು ಉರಿಯೇಳುತ್ತಿದ್ದವು.

"ಪ್ರಕೃತಿ ನನ್ನೊಡನೆ ಸರಸವಾಡುತ್ತಿದೆಯಲ್ಲ....ನನ್ನ ಹಳೆಯ ನೆನಪನ್ನೆಲ್ಲ ಕೆದಕಿ ಹಾಸ್ಯವಾಡುತ್ತಿದೆಯಲ್ಲ....ಹಾ ವಿಧಿಯೇ, ನಿನ್ನ ಅಗ್ನಿ ಪರೀಕ್ಷೆ ಇನ್ನಾದರೂ ಮುಗಿಯಬಾರದೆ...."—ಹಲುಬುವಳು ದಮಯಂತಿ.

"ದೇವಿ.. ಯಾಕೆ ನಿಂದಿಸುವೆ ಪ್ರಕೃತಿಯನ್ನು....!? ವಿಧಿಯನ್ನು ಯಾಕೆ ಹಳಿಯುವೆ..!? ನಿನ್ನ ವಲ್ಲಭನನ್ನು ನೋಡುವ ದಿನ ಹತ್ತಿರವಾಗುತ್ತಿದೆಯೆಂಬುದಕ್ಕೆ ಇದೆಲ್ಲ ಶುಭಸೂಚನೆಗಳೆಂದು ತಿಳಿಯಬಾರದೆ...?"—ಸಖಿ ಹಿತವಚನವನ್ನಾಡಿದಳು.

"ಯಾವ ಶುಭ ಸೂಚನೆಯೋ....ನನಗೊಂದೂ ಅನಿಸುವುದಿಲ್ಲ ಸಖಿ! ಅರಸನನ್ನು ಅರಸಿ ಹೋದವರೆಲ್ಲ ಆತನ ಪತ್ತೆಯಿಲ್ಲದೆ ಹಿಂತಿರುಗುತ್ತಿದ್ದಾರೆ....ಆ ನನ್ನ ವಲ್ಲಭ ಇನ್ನೆಲ್ಲಿ ಗವಿಬಿಲಗಳಲ್ಲಿ ಅವಿತು ಕುಳಿತಿದ್ದಾನೋ, ಅಲ್ಲ ವಿಧಿ ಆತನನ್ನು ನಮ್ಮೆಲ್ಲರ ಕಣ್ಣುಗಳಿಂದ ಮರೆಮಾಡಿದ್ದಾನೋ...."

"ಇರಬಹುದು ದೇವಿ... ನಿನ್ನೊಡೆಯ ಬಂದೇ ಬರುವನು... ಈಗ ನೋಡು.. ಚಂದಿರನ ಬೆಳದಿಂಗಳು ಎಷ್ಟು ಶುಭ್ರವಾಗಿದೆ....ಕೆಲವು ದಿನಗಳ ಹಿಂದೆ ಈ ಉದ್ಯಾನದಲ್ಲಿ ಕತ್ತಲೆ ಆವರಿಸಿತ್ತಲ್ಲ ?"

"ಮತ್ತೆ ನನ್ನ ಮನಸ್ಸಿಗೆ ಏನೇನೋ ನೆನಪು ಹುಟ್ಟಿಸಬೇಡ....ನನ್ನ ಮನಸ್ಸಿಗೆ ಈ ಬೆಳದಿಂಗಳು ಸುಖದ ನೆನಪನ್ನು ನೀಡಲಾರದು ಸಖಿ.... ಕತ್ತಲೆಯ ಛಾಯೆ ಸದಾ ಅಲ್ಲಿ ಕವಿದಿರುತ್ತದೆ".

ದಮಯಂತಿಗೆ ಹೆಚ್ಚು ಚಿಂತಿಸಲು ಅವಕಾಶ ನೀಡಬಾರದು—ಎಂದು ಬಗೆದ ಸಖಿಯರು ಆಕೆಯನ್ನು ಮತ್ತೆ ಅಂತಃಪುರಕ್ಕೆ ಹಿಂತಿರುಗುವಂತೆ ಒತ್ತಾಯಿಸಿದರು. ಕತ್ತಲಾದರಾದರೂ ದಮಯಂತಿ ಅಂತಃಪುರಕ್ಕೆ ಹಿಂತಿರುಗುವುದು. ಬೆಳದಿಂಗಳು ಸೂಸುವ ಚಂದಿರನಿಗೆ ಮೋಡವಾದರೂ ಕವಿಯಬಾರದೇ—ಎಂದು ಹಲುಬಿದರು ಆ ಸಖಿಯರು. ದಮಯಂತಿಯು ಏಕಾಂತವೇದನೆಯಲ್ಲಿ ಅವರೆಲ್ಲ ಪಾಲುಗಾರರಾಗಿದ್ದರು....... ಸಖಿಯರ ಒತ್ತಾಯಕ್ಕೆ ಮಣಿದು ಅಲ್ಲಿಂದ ಎದ್ದಳು ದಮಯಂತಿ.

ಅಂತಃಪುರ ಸೇರಿದಾಗಲೂ ದಮಯಂತಿಯು ಮನಸ್ಸಿಗೆ ನೆಮ್ಮದಿಯಿಲ್ಲ. ತನ್ನೆರಡು ಕಂದಗಳು ಬಂದು "ಅಮ್ಮಾ" ಎಂದು ಕರೆದರೂ ಆಕೆಗೆ ಕೇಳಿಸದು.

"ಅಮ್ಮಾ ಏಕೆ ಚಿಂತಿಸುವೆಯಮ್ಮಾ .. ನಮ್ಮುಗಳ ಮೇಲೆ ನಿನಗೆ ಪ್ರೀತಿಯೇ ಇಲ್ಲವೇ....?"—ಕಂದನಾಡಿದ ಮಾತು....

ಮಾತಿನ ಪರಿಯನ್ನು ಕೇಳಿ ಒಮ್ಮೆ ಕಣ್ಣೀರಿನ ಕೋಡಿಯನ್ನು ಹರಿಸಿದಳು ದಮಯಂತಿ.

"ಯಾಕೆ ಕಂದಗಳಿರಾ... ಇನ್ನೂ ನಿದ್ರಿಸಿಲ್ಲವೇ... ? ರಾತ್ರಿಯು ಎರಡನೇ ಜಾವ ಹತ್ತಿರವಾಗುತ್ತಿದೆ..."

"ನಮಗೆ ನಿದ್ದೆಯೇ ಬರುತ್ತಿಲ್ಲವಮ್ಮಾ ..."—ಇನ್ನೊಬ್ಬನೆಂದ.

"ಯಾಕೆ....!? ಯಾಕೆ ನನ್ನ ಮುದ್ದು....!!?"

"ನೀನೇಕೆ ದಿನಾ ಅಳುತ್ತಿರುವೆ ...?"

ತನ್ನ ಗಲ್ಲವನ್ನು ಒರಸಿಕೊಂಡಳು ದಮಯಂತಿ. "ಇಲ್ಲ ಕಂದ. ನಾನು ಅಳುತ್ತಿಲ್ಲ.. ನೋಡು. ನಗುತ್ತಿದ್ದೇನಲ್ಲ...."

"ನೀನು ಸುಳ್ಳು ಹೇಳುತ್ತಿದ್ದೀಯಾ...."—ಒಬ್ಬನೆಂದ.

"ನೀನು ನಮಗೆ ಮೋಸಮಾಡುತ್ತಿದ್ದೀಯಾ...." — ಇನ್ನೊಬ್ಬ ಹಟಹಿಡಿದ.

"ಛೆ, ಈ ಮಕ್ಕಳಿಗೂ ನನ್ನ ದುಃಖದ ಬಾಧೆ ತಟ್ಟಿದೆಯಲ್ಲ ..." —ಮತ್ತಷ್ಟು ದುಃಖಿತಳಾದಳು ದಮಯಂತಿ.

"ಯಾಕೆ ಅಳುತ್ತಿರುವೆಯಮ್ಮ....? ನಿನ್ನ ದುಃಖದ ಕಾರಣವನ್ನು ನಮ್ಮಲ್ಲಾದರೂ ಹೇಳಬಾರದೆ....!?"

ಕಂದಗಳಲ್ಲಿ ವಿಷಯವನ್ನು ಮರೆಮಾಚಲೇ....? ಎಷ್ಟು ದಿನಾಂತ ಹಾಗಿರಲು ಸಾಧ್ಯ! ಹೇಳಿಯೇ ಬಿಡುತ್ತೇನೆ....ಹೇಳಿಯೇ ಬಿಡುತ್ತೇನೆ.... —ತವಕದಿಂದ ಹೇಳಲೆಂದು ಮುಂದಾದಳು ದಮಯಂತಿ. ಆದರೆ ...!? ಒಮ್ಮೆ ಸಂಶಯಭೂತದ ಕೆಂಗಣ್ಣು ಭಯ ಹುಟ್ಟಿಸಿದರೂ, ಈ ಮಕ್ಕಳಾದರೂ ತನ್ನ ದುಃಖವನ್ನು ಕಡಿಮೆಮಾಡಲು ಪ್ರಯತ್ನಿಸಬಹುದೆಂಬ ಸಮಾಧಾನ ಆಕೆಯಲ್ಲಿ ತುಂಬಿತು. ಕೊನೆಗೂ ಹೇಳಿಯೇ ಬಿಟ್ಟಳು ದಮಯಂತಿ;

"ಕಂದಗಳಿರಾ, ನಿಮ್ಮ ತಂದೆ ನಮ್ಮನ್ನೆಲ್ಲ ಅಗಲಿ ವನಾಂತರಕ್ಕೆ ಹೋಗಿರುವರಲ್ಲ ..."

"ಹೋದವರು ಹಿಂದಿರುಗಿ ಬರುತ್ತಾರೆ...."

"ಆದರೆ, ಇನ್ನೂ ಬರಲಿಲ್ಲ ..."—ಕಂಬನಿ ಮಿಡಿದಳು ದಮಯಂತಿ.

"ಯಾಕೆ? ನಿಷಧ ದೇಶವನ್ನು ಈಗ ಆಳುತ್ತಿರುವವರಾರು?"

"ನಿಮ್ಮ ತಂದೆಯನ್ನು ದ್ಯೂತವಾಡಿ ಸೋಲಿಸಿದ ಪುಷ್ಕರ...."

"ನಮ್ಮ ತಂದೆ ದ್ಯೂತದಲ್ಲಿ ಸೋತರೇ....!?"

"ಅಹುದು ಕಂದ.... ಆ ನನ್ನ ಪ್ರಾಣನಾಥನನ್ನು ಹುಡುಕಿಸುವ ಯತ್ನವೆಲ್ಲ ವಿಫಲವಾಗಿದೆ...."

"ಹಾಗಾದರೆ ಈಗ ಏನು ಮಾಡುವುದಮ್ಮ, ನಮ್ಮ ತಂದೆ ಮರಳಿ ಬರಲಾರರೇ?"

"ಬರಬಹುದೆಂದು ಅನ್ನಿಸುತ್ತದೆ....ಆದರೆ...."

"ಅರಮನೆಯಲ್ಲಿ ಎಲ್ಲರೂ ನಿದ್ರಿಸಿದ್ದಾರೆ ದೇವಿ—"—ತಾಯಿ ಮಕ್ಕಳ ಸಂಭಾಷಣೆಯನ್ನು ಅರ್ಧದಲ್ಲಿ ನಿಲ್ಲಿಸಲೆಂಬಂತೆ ಪರಿಚಾರಿಕೆಯೊಬ್ಬಳು ಪ್ರವೇಶಿಸಿದಳು. ಬೇರೆ ಗತ್ಯಂತರವಿಲ್ಲದೆ ದಮಯಂತಿ ಅಂದಳು:

"ಇನ್ನು ನೀವು ನಿದ್ರಿಸಿ ಕಂದಗಳಿರಾ—ನಾಳೆ ಎಲ್ಲವನ್ನೂ ವಿವರವಾಗಿ ಹೇಳುವೆ...."

ಏನನ್ನೂ ಅರಿಯದ ಆ ಎಳೆಯ ಹಸುಳೆಗಳು ನಿದ್ರೆಯ ಮಡಿಲಿನಲ್ಲಿ ನಿಶ್ಚಿಂತೆಯನ್ನು ಆಲಿಂಗಿಸಿಕೊಂಡವು. ದಮಯಂತಿಯ ಮನಸ್ಸು ಮಾತ್ರ ಮತ್ತಷ್ಟು ಪುಡಿಯಾಗುತ್ತಿದ್ದಿತು—'ಎಳೆಯ ಮಕ್ಕಳ ಮನಸ್ಸನ್ನೂ ನೋಯಿಸಿದೆ' ಎಂದು.

ಮುಂಜಾವಿನ ಮಂದ ಪವನವು ಬಂದು ಅಂತಃಪುರದ ಗವಾಕ್ಷಿಗೆ ಸುತ್ತು ಬಳಸಿರುವ ಪರದೆಗಳನ್ನು ನಡುಗುವಂತೆ ಮಾಡಿದಾಗ, ದೂರದಲ್ಲಿ ಪಕ್ಷಿಗಳ ಚಿಲಿಪಿಲಿಯನ್ನು ಕೇಳಿದಳು ದಮಯಂತಿ. ಈ ದಿನವಾದರೂ ತನ್ನ ಬಾಳಿನಲ್ಲಿ ಅರುಣೋದಯವಾಗಬಾರದೇ—ಎಂದು ಆಶಾವಾದದ ನಿಟ್ಟುಸಿರುಬಿಟ್ಟಳು.

ಬೆಳಗು ಹರಿದಾಗ ನಳನ ಶೋಧನೆಯಲ್ಲಿ ದೇಶಾಂತರಕ್ಕೆ ಹೋಗಿದ್ದ ಬ್ರಾಹ್ಮಣನೊಬ್ಬ ದಮಯಂತಿಯ ದರ್ಶನಕ್ಕಾಗಿ ಕಾಯುತ್ತಿದ್ದ. ಏನೋ ಶುಭಸಮಾಚಾರ ಕಾದಿದೆಯೆಂದು ಆತುರದಿಂದ ದಮಯಂತಿ ಆತನನ್ನು ಬರಮಾಡಿಕೊಂಡಳು:

"ನನ್ನ ಪ್ರಾಣನಾಥನ ಸುಳಿವು ಸಿಕ್ಕಿತೇ..."—ಆತುರದ ಪ್ರಶ್ನೆ.

"ಇಲ್ಲ ಮಹಾತಾಯಿ...."

"ಮತ್ತೆ....!? ನೀನು ಯಾವ ಸಮಾಚಾರವನ್ನು ಹೇಳಲೆಂದು ಬಂದೆ....?" ಗದರಿದಳು ದಮಯಂತಿ.

"ತಮ್ಮ ಒಡೆಯರನ್ನು ಅರಸುತ್ತ ನಾನು ಅಯೋಧ್ಯಾಪುರಕ್ಕೆ ಹೋಗಿದ್ದೆ. ಅಲ್ಲಿ ತಮ್ಮೊಡೆಯರ ಅಶ್ವಶಾಲೆಯಲ್ಲಿದ್ದನೆಂದು ಹೇಳಲಾದ ಬಾಹುಕನೆಂಬುವನು ಇದ್ದಾನೆಂದು ತಿಳಿಯಿತು. ಆತ ಅಶ್ವವಿದ್ಯೆಯಲ್ಲಿ ಮಹಾಪ್ರವೀಣನೆಂದು ಊರಿಗೆ ಊರೇ ಆಡಿಕೊಳ್ಳುತ್ತದೆ. ತಮ್ಮೊಡೆಯರೇನಾದರೂ ಈ ರೀತಿಯಲ್ಲಿ ತಲೆಮರೆಸಿಕೊಂಡು ಅಲ್ಲಿದ್ದಾರೋ ಎಂದು ತಿಳಿಯುವ ಉತ್ಸುಕತೆಯಿಂದ ನಾನಲ್ಲಿಗೆ ಹೋದೆ...."

"ಏನು ಆತ ನನ್ನೊಡೆಯನಂತೆ ಕಾಣಿಸಿದನೇ?"

"ಇಲ್ಲ ದೇವಿ..! ಹೋಗುವವರೆಗೆ, ಆತನೇ ನಳಮಹಾರಾಜನಿದ್ದಿರ ಬಹುದೆಂದು ಊಹಿಸಿದೆ. ಆದರೆ, ಆತನ ವಿಕಾರರೂಪವನ್ನು ಕಂಡಾಗ ನನಗೇ ಭಯವೆನಿಸಿತು."

"ಅಷ್ಟು ಭಯಂಕರನಾಗಿದ್ದನೇ ಆತ....!?"

"ಹೌದು ದೇವಿ...."

"ನನಗೆ ತಿಳಿದ ಹಾಗೆ, ನಮ್ಮ ಅಶ್ವಶಾಲೆಯಲ್ಲಿ ಅಂತಹ ವಿಕೃತ ಸ್ವರೂಪಿಗಳು ಯಾರೂ ಇದ್ದಿರಲಿಲ್ಲ...."

"ಹಾಗಾದರೆ, ಆ ಬಾಹುಕ ಸುಳ್ಳುಹೇಳಿ ಅಲ್ಲಿ ಜೀವನ ಸಾಗುತ್ತಿರ ಬೇಕು ..."

"ಆತನಲ್ಲಿ ನನ್ನ ಪ್ರಾಣನಾಥನ ಬಗೆಗೆ ವಿಚಾರಿಸಿದೆಯಾ!?"

"ವಿಚಾರಿಸಲಿಲ್ಲ. ಆದರೆ ಪರಿಸ್ಥಿತಿಯನ್ನು ವಿಷದೀಕರಿಸಿದೆ. ಅದಕ್ಕೆ ಆತ ಏನೆಂದು ಉತ್ತರವಿತ್ತ ಗೊತ್ತೇ....?"

"ಏನೆಂದು ಉತ್ತರವಿತ್ತ..!? ನನ್ನೊಡೆಯ ಅರಣ್ಯಮಧ್ಯದಲ್ಲಿ ನರಕಯಾತನೆಯನ್ನು ಅನುಭವಿಸುತ್ತಿದ್ದಾನೆ-ಅಂದನೇ? ಅಲ್ಲ, ವನ್ಯ ಮೃಗಗಳಿಗೆ ಔತಣವಾದರೆಂದನೇ?"

"ಹಾಗೆ ಹೇಳುತ್ತಿದ್ದರೆ ನನಗೆ ಇಷ್ಟೊಂದು ದುಃಖವಾಗುತ್ತಿರಲಿಲ್ಲ ದೇವಿ....ದಮಯಂತೀ ಮಾತೆ ಸ್ತ್ರೀಸ್ವಾತಂತ್ರ್ಯದ ದುರುಪಯೋಗ ಮಾಡುತ್ತಿದ್ದಾಳೆ—ಅಂದ...."

"ಹಾಗಂದನೇ ಆತ...."

ಒಂದು ನಿಮಿಷ ಚಿಂತೆಯಲ್ಲಿ ಅದ್ದಲ್ಪಟ್ಟವಳಂತೆ ಸ್ಥಂಭೀಭೂತವಾಗಿ ನಿಂತಳು ದಮಯಂತಿ. ಮತ್ತೆ ಮೆಲ್ಲನೇ ಉಸುರಿದಳು.

"ಆತನಂದದ್ದು ನಿಜ.... ಪ್ರಾಣನಾಥನ ವಿಯೋಗ, ನನ್ನನ್ನು ಹುಚ್ಚಳನ್ನಾಗಿ ಮಾಡಿದೆ........ಸ್ತ್ರೀಸ್ವಾತಂತ್ರ್ಯವನ್ನು ಮೀರುವಂತೆ ಪ್ರೇರೇಪಿಸಿದೆ...."

"ಮಾತೆಯವರ ಅಪ್ಪಣೆಯಾದರೆ, ನಾನಿನ್ನು ಹೊರಡುತ್ತೇನೆ..."

ದಮಯಂತಿಯಿಂದ ಬೀಳ್ಕೊಂಡ ದೂತ ಹೊರಟು ಹೋದ. ಆಕೆಯ ಮನಸ್ಸಿನಲ್ಲಿ ಮಾತ್ರ ಬಾಹುಕನ ನೆನಪು ಸುಳಿದಾಡುತ್ತಲೇ ಇತ್ತು.

ನಿಷಧದೇಶದ ಅಶ್ವಶಾಲೆಯವನೆಂದು ಹೇಳಲಾದ ಬಾಹುಕ ನಳರಾಯನೇ ಇರಬಹುದೇ?—ಆದರೆ, ಆ ವಿಕೃತರೂಪ ಆತನಿಗೆ ಹೇಗೆ ಬಂತು....? ಆತ ನಳನೇ ಆಗಿರಬೇಕು—ಅನ್ನುತ್ತಿತ್ತು ದಮಯಂತಿಯ ಅಂತರಂಗ. ಇಲ್ಲವಾಗಿದ್ದರೆ ಅಶ್ವಶಾಲೆಯ ಊಳಿಗದವನೊಬ್ಬನು ನನ್ನ ಸ್ವಾತಂತ್ರ್ಯದ ಬಗೆಗೆ ಎಂದೂ ಪ್ರಶ್ನಿಸುತ್ತಿರಲಿಲ್ಲ–ಒಂದು ನಿರ್ಧಾರಕ್ಕೆ ಬಂದಳು ದಮಯಂತಿ.

ದಮಯಂತಿಗೆ ಭೀಮನೃಪಾಲ ಪುನಃಸ್ವಯಂವರವೇರ್ಪಡಿಸಲಿದ್ದಾನೆ. ನಾಳೆಯ ದಿನವೇ ಮುಹೂರ್ತ—ಎಂಬ ಈ ವಾರ್ತೆಯನ್ನು ಭುವನಕ್ಕಿಡೀ ಈಗಲೇ ಸಾರಿಯಾಗಿದೆ: ರಾಜಾಧಿರಾಜರೆಲ್ಲ ಆಕೆಯ ಸ್ವಯಂವರಕ್ಕಾಗಿ ಕುಂಡಿನಪುರಕ್ಕೆ ಬರುತ್ತಿದ್ದಾರೆ; ಅಂತೆಯೇ ಅಯೋಧ್ಯಪುರದ ಒಡೆಯನಾದ ಋತುಪರ್ಣ ಮಹಾರಾಜನು ಕೂಡಾ ಸ್ವಯಂವರಕ್ಕೆ ದಯಮಾಡಿಸಬೇಕು—ಎಂದು ಓರ್ವ ಬ್ರಾಹ್ಮಣನ ಮೂಲಕ ವಾರ್ತೆಯನ್ನು ಅಯೋಧ್ಯಪುರಕ್ಕೆ ಹೇಳಿಕಳುಹಿಸಿದಳು ದಮಯಂತಿ.

ಸಹಸ್ರಯೋಜನ ದೂರದಲ್ಲಿರುವ ಅಯೋಧ್ಯಪುರದಿಂದ ಕುಂಡಿನಪುರಕ್ಕೆ ಒಂದು ದಿನದಲ್ಲಿ ಬಂದು ಸೇರುವುದು ಸಾಧ್ಯವಾಗದ ಮಾತು. ಅದು ನಳ ಚಕ್ರವರ್ತಿಗೆ ಮಾತ್ರ ಸಾಧ್ಯವೆಂದು ದಮಯಂತಿ ಬಗೆದಿದ್ದಳು. ಒಂದು ವೇಳೆ ಆ ಬಾಹುಕನೆಂಬವನು ನಳಮಹಾರಾಜನೇ ಆಗಿದ್ದರೆ, ಖಂಡಿತವಾಗಿಯೂ ಋತುಪರ್ಣನನ್ನು ಆತ ಅಶ್ವವಿದ್ಯೆಯ ಬಲದಿಂದ ಮುಹೂರ್ತದ ವೇಳೆಗೆ ಸರಿಯಾಗಿ ಇಲ್ಲಿಗೆ ತಲುಪಿಸಬಲ್ಲ—ಎಂಬ ಆತ್ಮವಿಶ್ವಾಸ ದಮಯಂತಿಗೆ.

ದಮಯಂತಿಗೆ ವಾರ್ತೆಯನ್ನು ತಿಳಿಸಲು ಆ ಬ್ರಾಹ್ಮಣನೇನೋ ಹೊರಟುಹೋದ. ಆದರೆ ಇದರ ಪರಿಣಾಮ ಏನಾಗುವುದೋ ಎಂಬ ಕಳವಳ ದಮಯಂತಿಯ ಹೃದಯದಲ್ಲಿ ನೆಲೆಮಾಡಿತ್ತು.

ದಮಯಂತಿ ಕಳುಹಿಸಿಕೊಟ್ಟ ಬ್ರಾಹ್ಮಣ ಅಯೋಧ್ಯಪುರವನ್ನು ಪ್ರವೇಶಿಸಿದ. ಋತುಪರ್ಣನ ಆಸ್ಥಾನವನ್ನು ಸೇರುವ ಮೊದಲೇ ದಮಯಂತಿಯು ಪುನಃಸ್ವಯಂವರದ ವಿಚಾರವನ್ನು ಆ ನಾಡಿನಲ್ಲೆಲ್ಲ ಹರಡುವಂತೆ ಮಾಡಿದ್ದನಾತ. ಆತನ ಗುರಿ ಋತುಪರ್ಣನ ಆಸ್ಥಾನ!

ವಿದರ್ಭದೇಶದಿಂದ ಬಂದ ಬ್ರಾಹ್ಮಣನನ್ನು ಆದರದಿಂದ ಸ್ವಾಗತಿಸಿದ ಋತುಪರ್ಣ. ಆತನನ್ನು ಔಚಿತ್ಯಪೂರ್ಣವಾಗಿ ಸತ್ಕರಿಸಲಾಯಿತು. ಅಯೋಧ್ಯಪುರದ ಆತಿಥ್ಯವನ್ನು ಸ್ವೀಕರಿಸಿದ ಆ ಬ್ರಾಹ್ಮಣ ದಮಯಂತಿಯ ಆಮಂತ್ರಣವನ್ನು ವಿಜ್ಞಾಪಿಸಿದ.

"ಕುಂಡಿನಪುರದ ರಾಜಕುಮಾರಿ ದಮಯಂತಿಯ ಪುನಃಸ್ವಯಂವರಕ್ಕೆ ತಾವುಗಳು ದಯಮಾಡಿಸಬೇಕು"—ಎಂದು.

"ಅವಶ್ಯವಾಗಿ ಬರುವೆವು .. ಸ್ವಯಂವರ ಎಂದು ನಡೆಯುವುದು ಬ್ರಾಹ್ಮಣೋತ್ತಮರೇ?"—ಪ್ರಶ್ನಿಸಿದ ಋತುಪರ್ಣ.

ಆತನಿಗೆ ಉತ್ಸುಕತೆ. ಬ್ರಾಹ್ಮಣನಿಗೆ ಕುಟಿಲ ತಂತ್ರದ ಜಟಿಲತೆ–ಹೇಗೆ ಈತನ ಮನಸ್ಸನ್ನು ನೋಯಿಸಲಿ, ಎಂಬ ಅಳುಕು. ಆದರೂ ಹೇಳಲೇಬೇಕಿತ್ತು.

"ನಾಳೆಯ ದಿನ ಮುಂಜಾನೆಯೇ ಸುಮುಹೂರ್ತ" ಉತ್ತರಿಸಿದ ಬ್ರಾಹ್ಮಣ.

ಬ್ರಾಹ್ಮಣನ ನುಡಿಗಳೇ ವಂಚಿಸುವಂತೆ ಅನ್ನಿಸಿತು ಋತುಪರ್ಣನಿಗೆ. ಸ್ವಲ್ಪಹೊತ್ತಿನ ಹಿಂದೆ ದಮಯಂತಿಯನ್ನು ಸ್ವಯಂವರದಲ್ಲಿ ಖಂಡಿತಾ ವರಿಸುವೆನೆಂಬ ಆಸೆಯ ಸೆಲೆ ಮನದ ಮೂಲೆಯಲ್ಲಿ ಮಿನುಗಿದ್ದರೆ, ಆ ಮನಸ್ಸೇ ಸಿಡಿಲಿನ ಆಘಾತಕ್ಕೆ ಸಿಲುಕಿ ಭಸ್ಮೀಭೂತವಾಗಿತ್ತು. ಹೃದಯಾಂತರಾಳದಲ್ಲಿ ನಡೆದ ಈ ಆಂದೋಲನವನ್ನು ತೋರಗೊಡದೆ ಬ್ರಾಹ್ಮಣನನ್ನು ಯಥೇಚ್ಛವಾಗಿ ಗೌರವಿಸುವಂತೆ ಹೇಳಿದ ಋತುಪರ್ಣ. ಬ್ರಾಹ್ಮಣನಿಗೂ ಗೊತ್ತು ಋತುಪರ್ಣನ ಹೃದಯದಲ್ಲಿ ನಡೆದಿರಬಹುದಾದ ಮಸಲತ್ತು!

ಚಿಂತೆಯ ಸಾಗರದಲ್ಲಿ ಅದ್ದಲ್ಪಟ್ಟ ಋತುಪರ್ಣರಾಜ. ಕುಂಡಿನ ಪುರ ಪಟ್ಟಣದ ದೂರವೇನೂ ಅಲ್ಲ—ಸಹಸ್ರ ಯೋಜನ ದೂರದಲ್ಲಿರುವ ಆ ಊರನ್ನು ಒಂದು ದಿನದಲ್ಲಿ ಸೇರುವುದೆಂದರೆ ಕನಸಿನಲ್ಲೂ ನಡೆಯದಂತಹ ವಿಷಯ. ಚಿಂತಿಸಿ, ಚಿಂತಿಸಿ—ನಿಂತಲ್ಲಿ ನಿಲ್ಲಲಾರದೆ, ಕುಳಿತಿರಲೂ ಮನಸ್ಸು ಕೇಳದೆ—ಅಲೆದಾಡಿದ ಋತುಪರ್ಣ. ಅರಸನ ಈ ಸ್ಥಿತಿಯನ್ನು ಏನೆಂದು ಅರ್ಥಮಾಡಿಕೊಳ್ಳಲಾರದ ರಾಜವಾಹಕ ಆತನನ್ನು ಒಂದಾಗಿ ಒಂದು ಕಾರಣವನ್ನು ಕೇಳಿದ—

"ಮಹಾರಾಜರನ್ನು ಯಾವುದೋ ಚಿಂತೆ ಬಾಧಿಸುತ್ತಿರುವಂತಿದೆ...."

"ಹೌದು....ಅದರೆ ಅದು ಯಾರಿಂದಲೂ ಪರಿಹರಿಸಲಾರದಂತಹ ಚಿಂತೆ...."

"ಅಂತಹ ಗಹನತರವಾದ ಚಿಂತೆಯೇ ಮಹಾರಾಜಾ...!?"—ಆಶ್ಚರ್ಯದಿಂದ ಮತ್ತೆ ಪ್ರಶ್ನಿಸಿದ ರಾಜವಾಹಕ.

"ಅದೇನು... ನಾಳೆ ಬೆಳಗಾಗುವುದರೊಳಗೆ, ವಿದರ್ಭದೇಶದ ರಾಜಧಾನಿ, ಕುಂಡಿನಪುರಕ್ಕೆ ತಲುಪಬೇಕು....ರಥವನ್ನು ವೇಗವಾಗಿ ಓಡಿಸುವ ಸಾಮರ್ಥ್ಯ ನಿನ್ನಲ್ಲಿ ಇದೆಯೇ ರಾಜವಾಹಕ....?"

ಅರಸನ ಪ್ರಶ್ನೆಗೆ ಆತ ಏನೆಂದು ಉತ್ತರಿಸಬೇಕು—ತಲೆಯನ್ನು ತಗ್ಗಿಸಿ ನಿಂತುಬಿಟ್ಟ ನಳ. ಈ ಒಂದೆಂದೂ ಅರಸನ ಅಭೀಷ್ಟವನ್ನು ಆತ ಈಡೇರಿಸದೆ ಇರಲಿಲ್ಲ. ಎಂತಹ ವಿಷಮ ಪರಿಸ್ಥಿತಿಯಲ್ಲಿ ಕೂಡಾ ರಾಜನ ರಥವನ್ನು ಓಡಿಸಿ ಆತನ ಮೆಚ್ಚುಗೆಗೆ ಪಾತ್ರನಾಗಿದ್ದ ರಾಜವಾಹಕ ಬೇಸರವನ್ನು ತಾಳಲಾರದೆ ಅತ್ತ ನಡೆದು ಬಿಟ್ಟ.

ಸಹಸ್ರಯೋಜನ ಸಾಗುವುದೆಂದರೇನು...!?" ಅದೂ ಒಂದು ರಾತ್ರಿಯಲ್ಲಿ...! ಮಹಾರಾಜನಿಗೆ ಈ ವಿಚಾರದಲ್ಲಿ ಅಪನಂಬಿಕೆ ಇದ್ದುದರಿಂದಲೇ ಚಿಂತೆಗೊಳಗಾಗಿದ್ದಾನೆ. ತಾನು ಪ್ರಶ್ನಿಸಿ ಮತ್ತಷ್ಟು ಆತನ ಮನಸ್ಸನ್ನು ನೋಯಿಸದೆ—ಪರಿತಪಿಸಿದ ರಾಜವಾಹಕ.

ಮಹಾರಾಜನ ಮನೋರಥವನ್ನು ನಡೆಯಿಸುತ್ತಿದ್ದೇನೋ ಎಂಬಂತೆ ಬೇಸರದ ಹೊರೆ ಹೊತ್ತು ರಾಜವಾಹಕ ಅಶ್ವಶಾಲೆಯನ್ನು ಪ್ರವೇಶಿಸಿದ

ಅನಿರೀಕ್ಷಿತವಾಗಿ ಬಂದ ರಾಜವಾಹಕನನ್ನು ಕಂಡು ಬಾಹುಕನಿಗೆ ಎಲ್ಲಿಲ್ಲದ ಆಶ್ಚರ್ಯ....! ಮಹಾರಾಜರು ಎತ್ತಲೋ ಪ್ರಯಾಣ ಬೆಳಸಿದ್ದಾರೆ; ರಥ ಸಜ್ಜುಗೊಳಿಸಲು ಈತ ಈಗ ಆಜ್ಞಾಪಿಸಬಹುದೆಂದು ಬಾಹುಕ ಬಗೆದರೆ, ರಾಜವಾಹಕ ಎತ್ತಲೋ ಈಕ್ಷಿಸುತ್ತ ನಿಂತಿದ್ದ. ಆತನ ಈ ಸ್ಥಿತಿಯನ್ನು ಕಂಡು ಮೆಲ್ಲನೆ ಪ್ರಶ್ನಿಸಿದ ಬಾಹುಕ—

"ಇಂದು ರಾಜವಾಹಕರಿಗೆ ಯಾವುದೋ ಬೇಸರ ತಟ್ಟಿದಂತಿದೆಯಲ್ಲ....?"

"ರಾಜಾಜ್ಞೆಯನ್ನು ಪೂರೈಸಲಾರದವನಾಗಿದ್ದೇನಲ್ಲ ಎಂಬ ಅವಮಾನ ..." ತಲೆ ತಗ್ಗಿಸಿಯೇ ಉತ್ತರಿಸಿದ ರಾಜವಾಹಕ.

"ಮಹಾರಾಜರು ಪೂರೈಸಲಾರದಂತಹ ಆಜ್ಞೆಯನ್ನು ನೀಡಿದ್ದಾರೆಯೇ?"

"ಆಜ್ಞೆ ನೀಡಿಲ್ಲ....ಆದರೆ, ಅವರ ಅಂತರಂಗದ ಧ್ವನಿ ಹೇಳುತ್ತದೆ–'ರಾತ್ರಿ ಬೆಳಗಾಗುವ ಮೊದಲು ಸಹಸ್ರಯೋಜನ ದೂರಕ್ಕೆ ರಥವನ್ನು ಓಡಿಸು' ಎಂದು."

"ಸಹಸ್ರಯೋಜನವೇ ರಾಜವಾಹಕರೇ ..."—ಸಲೀಸಾಗಿ ನುಡಿದ ಬಾಹುಕ.

"ಅಹುದು....ಯಾಕೆ? ಅದು ಸಾಧ್ಯವೇ!?"

"ಇದೇನೂ ಕಷ್ಟದ ಕೆಲಸವಲ್ಲ...."

"ನಿನಗಿದು ಸಾಧ್ಯವೇ!?" — ಮತ್ತೆ ಪ್ರಶ್ನಿಸಿದ ರಾಜವಾಹಕ.

"ಅಹುದು! ಆದುದರಿಂದಲೇ ನುಡಿಯುತ್ತಿದ್ದೇನೆ. ನಾನು ನಳ ಮಹಾರಾಜರಿಂದ ಅಶ್ವಹೃದಯವನ್ನು ಅರಿತವನಾಗಿದ್ದೇನೆ........ಸಹಸ್ರಯೋಜನವೇಕೆ, ಎರಡು ಸಹಸ್ರಯೋಜನವಾದರೂ ಸರಿಯೇ....ಮಹಾರಾಜರನ್ನು ಅಲ್ಲಿಗೆ ತಲಪಿಸುವ ಕಾರ್ಯಭಾರ ನನ್ನದು...."

"ಅಹುದೇನು!? ಹಾಗಾದರೆ ಈ ವಿಚಾರವನ್ನು ನಾನೀಗಲೇ ಮಹಾರಾಜರಿಗೆ ತಿಳಿಸಿ ಬರುವೆ...."—ಅವಸರಪಡಿಸಿದ ರಾಜವಾಹಕ.

"ಅಪಹಾಸ್ಯವೇಕೆ ರಾಜವಾಹಕರೆ...... ಸಹಸ್ರಯೋಜನವೆಂದಿದ್ದೀರಿ ಆ ವಿಷಯವನ್ನು ಅರ್ಧದಲ್ಲಿಯೇ ನಿಲ್ಲಿಸಿದಿರಿ... ಯಾವ ದೇಶ, ಯಾವ ಊರು ಎಂದು ಹೇಳಲೇ ಇಲ್ಲವಲ್ಲ..."

"ಓಹೋ, ಆ ವಿಷಯವನ್ನೇ ಹೇಳುವುದು ಮರೆತೆ ರಾಜವಾಹಕ.... ಇನ್ನೇನು. ಮಹಾರಾಜರ ಅಭೀಷ್ಟ ನೆರವೇರಿದಂತೆಯೇ... ನಾಳೆಯ ದಿನ ಕುಂಡಿನಪುರದಧಿಪತಿ ಭೀಮಸೇನ ಮಹಾರಾಜರ ಕುವರಿ ದಮಯಂತಿಯ ಪುನಃಸ್ವಯಂವರ........ಮಹಾರಾಜರು ಅಲ್ಲಿಗೆ ಹೋಗುವವರಿದ್ದಾರೆ. ಸ್ವಯಂವರದ ಆಮಂತ್ರಣ ತಡವಾಗಿ ತಲುಪಿದೆ. ಈ ಅರ್ಧ ಪಥದಲ್ಲಿ ಸಹಸ್ರಯೋಜನ ರಥ ಓಡಿಸುವ ಸಾಹಸಿ ಸಿಕ್ಕಿದಾಗ, ನಮ್ಮ ಮಹಾರಾಜರು ದಮಯಂತಿಯನ್ನು ವರಿಸುವುದರಲ್ಲಿ ಸಂದೇಹವೇ ಇಲ್ಲ... ನಾನೀಗಲೇ ಮಹಾರಾಜರಲ್ಲಿ ಅರಿಕೆ ಮಾಡಿ ಬರುತ್ತೇನೆ...."

— ರಾಜವಾಹಕ ಮೆಟ್ಟು ಹತ್ತಿ ಅಲ್ಲಿಂದ ಋತುಪರ್ಣನಲ್ಲಿಗೆ ಹೊರಟು ಹೋದ.

ದಮಯಂತಿಯ ಪುನಃಸ್ವಯಂವರ! ಬಾಹುಕ ಚಿಂತಿಸಿದ. ವಿಧಿ ಎಂತಹ ಅಗ್ನಿಪರೀಕ್ಷೆಯನ್ನು ತಂದೊಡ್ಡುತ್ತಿದ್ದಾನೆ, ಎಂದು ಹಲುಬಿದ. ಮನಸ್ಸು ಚಿಂತಿಸಿತು. ಕಣ್ಣಾಲಿಗಳು ತುಂಬಿ ಬಂದವು.

ತಾನೀಗ ಕುರೂಪಿಯಾಗಿದ್ದೇನೆ. ತನ್ನನ್ನು ಅಲ್ಲಿ ಯಾರೂ ಪತ್ತೆ ಹಚ್ಚಲಾರರು. ಅಲ್ಲಿಗೆ ಹೋಗುವುದರಿಂದ ನಿಜ ವಿಷಯ ತಿಳಿಯುವುದು; ದಮಯಂತಿಯನ್ನು ಒಮ್ಮೆ ನೋಡುವ ಅವಕಾಶವಾದರೂ ತನಗೆ ಲಭಿಸುವುದು—ಎಂದು ಸಮಾಧಾನ ಪಟ್ಟುಕೊಂಡ ಬಾಹುಕ.

ನಗುನಗುತ್ತಲೇ ಬರುತ್ತಿದ್ದ ರಾಜವಾಹಕನನ್ನು ಕಂಡು ಋತುಪರ್ಣನಿಗೆ ಆಶ್ಚರ್ಯ: ತನ್ನ ದುಃಖಕ್ಕೆ ಪರಿಹಾರವನ್ನು ಈತ ಕಂಡುಹಿಡಿದನೇ ಎಂಬ ಲವಲವಿಕೆ.

"ಏನಾಯಿತು! ಏನಾಯಿತು? ಕುಂಡಿನಪುರವನ್ನು ಸುಮುಹೂರ್ತಕ್ಕೆ ಸರಿಯಾಗಿ ಸೇರುವ ದಾರಿಯನ್ನು ಕಂಡುಕೊಂಡೆಯಾ....!?"— ಪ್ರಶ್ನಿಸಿದ ಋತುಪರ್ಣ.

"ಅಹುದು ಮಹಾಪ್ರಭು....ನಮ್ಮ ಅಶ್ವಶಾಲೆಯ ಸೇವಕನಾದ ಬಾಹುಕ ನಳ ಮಹಾರಾಯರಿಂದ ಅಶ್ವಹೃದಯವನ್ನು ತಿಳಿದಿದ್ದಾನಂತೆ, ತಮ್ಮನ್ನು ಸುಮುಹೂರ್ತಕ್ಕೆ ಸರಿಯಾಗಿ ಕುಂಡಿನಪುರಕ್ಕೆ ತಲಪಿಸುವುದಾಗಿ ಆತ ಭರವಸೆ ಇತ್ತಿದ್ದಾನೆ....

"ಹಾಗೇನೂ....! ಅತ್ಯಾನಂದವಾಯಿತು ರಾಜವಾಹಕ....ಆತನಿಗೆ ಬೇಕಾದಂತಹ ಉತ್ತಮ ಕುದುರೆಗಳನ್ನು ಕೊಡಿಸು; ರಥವನ್ನು ಶೀಘ್ರದಲ್ಲಿ ಸಜ್ಜುಗೊಳಿಸಲು ಹೇಳು. ತಡಮಾಡಬೇಡ ಹೊರಡು ಬೇಗ"–ಕಟ್ಟೆಯೊಡೆದು ಹರಿಯುವ ಆನಂದವನ್ನು ತಡೆದು ಅವಸರಪಡಿಸಿದ ಋತುಪರ್ಣ.

ರಾಜವಾಹಕ ಕೂಡಲೇ ಅಶ್ವಶಾಲೆಗೆ ಹೊರಟುಹೋದ. ಬಾಹುಕನಿಗೆ ರಥವನ್ನು ಸಜ್ಜುಗೊಳಿಸುವಂತೆ ಹೇಳಿದ್ದೂ ಆಯಿತು. ಎಲ್ಲವೂ ಲೀಲಾಜಾಲವಾಗಿಯೇ ನಡೆದಿತ್ತು. ರತ್ನಖಚಿತವಾದ ರಥ ಸಿದ್ಧವಾಯಿತು.

ಇನ್ನೇನು ಹೊರಡಬೇಕು. ರಾಜಾ ಋತುಪರ್ಣ ಅಲ್ಲಿಗೆ ಆಗಲೆ ಬಂದಿದ್ದ. ಬಾಹುಕ ರಥಕ್ಕೆ ಕಟ್ಟಿದ್ದ ಕುದುರೆಗಳನ್ನು ಕಂಡು ನಗು ಬರುವಂತಾಯಿತು ಋತುಪರ್ಣನಿಗೆ.

ಆ ಕುದುರೆಗಳು ಬಡವಾಗಿದ್ದು, ಈಗ ಸಾಯುವವೊ, ಮತ್ತೆ ಸಾಯುವವೊ ಎಂಬಂತಿದ್ದವು.

ಎಲೆ ಬಾಹುಕ, ಈ ಕುದುರೆಗಳು ಅಲ್ಪಾವಧಿಯಲ್ಲಿ ನಮ್ಮನ್ನು ಕುಂಡಿನಪುರಕ್ಕೆ ಕೊಂಡೊಯ್ಯಬಲ್ಲವೇ? ಈ ಕುದುರೆಗಳನ್ನು ನೋಡಿದರೆ ನನಗೆ ನಗು ಬರುತ್ತದೆ"—ಋತುಪರ್ಣ ಉದ್ಗಾರವೆತ್ತಿದ.

"ನೃಪಾಲೋತ್ತಮ, ಮನ್ನಿಸಬೇಕು....ತಾವು ಆಶಿಸುವ ಶುಭ ಮುಹೂರ್ತಕ್ಕೆ ಸರಿಯಾಗಿ ತಮ್ಮನ್ನು ಕುಂಡಿನಪುರಕ್ಕೆ ತಲಪಿಸುವ ಕಾರ್ಯಭಾರ ನನ್ನದು"—ಬಾಹುಕನೆಂದ.

ಋತುಪರ್ಣ ಆಗಲೇ ರಥವೇರಿ ಕುಳಿತಿದ್ದ. ರತ್ನಖಚಿತವಾದ ಆ ರಥ ನಯನಮನೋಹರವಾಗಿತ್ತು — ಭೂದೇವಿಯ ಮೂಗುತಿಯಂತೆ ರಾರಾಜಿಸುತ್ತಿತ್ತು. ಹೊನ್ನಿನಿಂದ ಅಲಂಕರಿಸಲ್ಪಟ್ಟ ಆ ರಥದ ಗಾಲಿಗಳು, ವಜ್ರದಂತೆ ಸುಂದರವಾಗಿ ಬೆಳಗುವ ಅದರ ಕಂಬಗಳು, ಕುಳಿತು

ಕೊಳ್ಳುವ ಮೃದುವಾದ ಆಸನ— ಎಲ್ಲವೂ ರಮ್ಯ! ಇಷ್ಟು ಸುಮನೋಹರ ವಾಗಿ ಕಂಗೊಳಿಸುತ್ತಿದ್ದ ಈ ರಥ ಋತುಪರ್ಣನ ಮನೋರಥವೇ ಆಗಿತ್ತು.

ಇನ್ನೇನು ಹೊರಡಬೇಕು ಮಂಗಳವಾದ್ಯಗಳು ಬಂದು ನಿಂತು ರಾಜನಿಗೆ ಶುಭಕೋರುವಂತೆ ಹರಸಿದರು. ಹಿರಿಯರೆಲ್ಲ ಆಶೀರ್ವದಿಸಿದರು. ಪ್ರಜೆಗಳೆಲ್ಲ ಜಯಜಯಕಾರಗೈದರು. ರಥ ಹೊರಡುವ ಮುನ್ನ ಪ್ರಜಾ ಕೋಟಿಯ ದೃಷ್ಟಿಯೆಲ್ಲ ಬಾಹುಕನಲ್ಲಿ ಮತ್ತು ಆತ ರಥ ನಡೆಸುವ ರೀತಿ ಯನ್ನು ನೋಡಲು ತವಕಿಸುತ್ತಿತ್ತು.

ರಥಕ್ಕೆ ಕಟ್ಟಿದ್ದ ಬಡಕುದುರೆಗಳು ತಮ್ಮ ಗೊರಸುಗಳನ್ನು ನೆಲಕ್ಕೆ ತಿಕ್ಕಿ ಹಾರಲೋಸುಗ ಸಿದ್ಧತೆ ನಡೆಸುತ್ತಿದ್ದುವು. ಅವುಗಳ ಬೆನ್ನುಗಳನ್ನು ಮೆಲ್ಲನೆ ಸವರಿದ ಬಾಹುಕ. ಮೆಲ್ಲಮೆಲ್ಲನೆ ಹೆಜ್ಜೆಗಳನ್ನು ಎತ್ತಿ ಇಡಲಾ ರಂಭಿಸಿದವು— ಕುದುರೆಗಳು: ರಥ ಮತ್ತು ಹೆಜ್ಜೆಯನ್ನು ಸಾಗಿತ್ತು: ಪ್ರಜೆಗಳು ನೋಡುತ್ತಲೇ ಇದ್ದರು. ಕಣ್ಣುತೆರೆದು ಮುಚ್ಚುವುದರಲ್ಲಿ ರಥ ಕಣ್ಮರೆಯಾಗಿತ್ತು!

ವಾಯುವೇಗದಿಂದ ಚಲಿಸುವ ರಥದ ಕಂಪನವೇ ಋತುಪರ್ಣನಲ್ಲಿ ನಡುಕ ಹುಟ್ಟಿಸಿತು. ಬಾಹುಕನನ್ನು ಮನಸಾರೆ ಅಭಿನಂದಿಸಿದನಾತ. ಧನುಸ್ಸಿನಿಂದ ರುಂಯ್ಯೆಂದು ಹೊರಡುವ ಶರದಂತೆ ಮರಿಮಿಂಚಿನ ಮಿಂಚುವ ಗೋಳದಂತೆ, ಸುಂಟರಗಾಳಿಯು ಸುಳಿಯುವಂತೆ, ಮುಗಿಲಿನ ಯಂತೆ ಸಂಚರಿಸುವ ಮೇಘದಂತೆ— ಸಾಗುವ ರಥದ ರಭಸ ಅಮೋಘ ವಾಗಿತ್ತು.

ಈ ರಥದೊಡನೆ ಸೆಣಸಾಡಲು ವಾಯುದೇವನೂ ಅಸಮರ್ಥ ಸೆಣಸಿ ಸೆಣಸಿ, ಸೋತು, ಬಸವಳಿದ ವಾಯುದೇವ ಮಂದಮಾರುತನಾ ತಣ್ಣನೆ ಬಯಲಲ್ಲಿ ವಿಹರಿಸಿದ. ರಥ ಮುಂದೆ ಸಾಗುತ್ತಿತ್ತು. ಋತು ಪರ್ಣ ಹೆಗಲಲ್ಲಿ ಹೊದೆದಿದ್ದ ಶಾಲೊಂದು ಸಡಿಲಗೊಂಡು ನೆಲಕ್ಕೆ ಬೀ ವಷ್ಟರಲ್ಲಿ ಆ ರಥ ಇನ್ನೂರು ಯೋಜನ ದೂರವನ್ನು ಸಾಗಿಬಂದಿತ್ತು.

ಇನ್ನೂರು ಯೋಜನ ದೂರವೆಂದರೆ ಸಾಧಾರಣದ ಮಾತಲ್ಲ! — ಋತುಪರ್ಣನಿಗೆ ಆ ದೂರವನ್ನು ಕ್ರಮಿಸಲು ಏನಿಲ್ಲವಾದರೂ ಒಂದ

ಪೊತ್ತೇ ಬೇಕಾಯಿತು. ಬಾಹುಕನ ಈ ದೈವಿಕ ಶಕ್ತಿಯನ್ನು ಕೇಳಿ ತಿಳಿದುಕೊಳ್ಳುವ ಬಯಕೆ ಋತುಪರ್ಣನಿಗೆ.

"ಎಲೆ ಬಾಹುಕ, ಈ ಬಡಕಲು ಕುದುರೆಗಳ ಸಹಾಯದಿಂದ ನೀನು ಈ ರಥವನ್ನು ಇಷ್ಟು ಬೇಗ ಎಂಟುನೂರು ಯೋಜನ ದೂರವನ್ನು ಸಾಗಿಸಿತಂದ ರೀತಿಯನ್ನಾದರೂ ನನಗೆ ತಿಳಿಸಲಾರೆಯಾ........"— ಪ್ರಶ್ನಿಸಿದನಾತ.

"ನನಗೆ ಅಶ್ವಹೃದಯ ತಿಳಿದಿದೆ ಮಹಾರಾಜ... ಆದರೆ, ರಥ ಸಾಗಿಬಂದ ದೂರವನ್ನು ತಾವು ಲೆಕ್ಕಮಾಡಿ ಹೇಳಿದಿರಲ್ಲ ಮಹಾರಾಜ, ಅದು ಹೇಗೆ ತಿಳಿಯಿತು... !?"

"ನನಗೆ ಅಕ್ಷಹೃದಯದ ಫಲವಿದೆ ಬಾಹುಕ. ಅದರಿಂದ ಕಲಿವೃಕ್ಷದ ದೀರ್ಘನೀಕವನ್ನು ನೋಡಿಯೇ ನಾನು ಸಾಗಿಬಂದ ದೂರವನ್ನು ಹೇಳಬಲ್ಲೆ."

"ನಿಜವಾಗಿಯೂ ತಮ್ಮ ವಿದ್ಯೆ ಅನರ್ಘವಾದುದು ಮಹಾರಾಜ...."

"ಇಬ್ಬರ ವಿದ್ಯೆಯೂ ಅನರ್ಘವಾದುದೆಂದಾದ ಮೇಲೆ ನಾವಿಬ್ಬರೂ ಒಂದು ಒಪ್ಪಂದಕ್ಕೆ ಬರಬಹುದಲ್ಲ....?"

"ಏನದು!?"

"ನಾನು ನಿನಗೆ ಅಕ್ಷದ್ಯೂತ ಹೃದಯವನ್ನು ತಿಳಿಯಹೇಳುತ್ತೇನೆ... ನೀನು ನನಗೆ ಅಶ್ವಹೃದಯವನ್ನು ಬೋಧಿಸಿದರಾಯಿತು."

ಇಬ್ಬರೂ ಒಂದು ಒಪ್ಪಂದಕ್ಕೆ ಬಂದುದಾಯಿತು. ಬಾಹುಕನು ಋತುಪರ್ಣನಿಗೆ ಅಶ್ವಹೃದಯವನ್ನು, ಋತುಪರ್ಣ ಬಾಹುಕನಿಗೆ ಅಕ್ಷ ದ್ಯೂತ ಹೃದಯವನ್ನು ಪರಸ್ಪರ ಬೋಧಿಸಿಕೊಂಡರು.

ಕಲಿವೃಕ್ಷದ ಗಟ್ಟಿಯಾದ ಭಾಗವನ್ನು ತುಂತುರು ಹನಿಯಂತಹ ಪಗಡೆಯನ್ನಾಗಿ ಮಾಡಿ ಪ್ರೀತಿಯಿಂದ ಬಾಹುಕನಿಗಿತ್ತ ಋತುಪರ್ಣ. ಬಾಹುಕ ಅದನ್ನು ಭಕ್ತಿಯಿಂದಲೇ ಸ್ವೀಕರಿಸಿದ.

ಋತುಪರ್ಣನರಿಯದಂತೆ ಅತಿಭೀಕರನಾದ ಕಲಿ ಬಾಹುಕನಿಗೆ ಮಾತ್ರ ಕಾಣಿಸಿಕೊಂಡು ಹೀಗೆ ಬಿನ್ನವಿಸಿದ:

"ನಾನು ನಿನ್ನನ್ನು ಬಹಳವಾಗಿ ಕಾಡಿದೆ ಭೂಪಾಲ... ಸಹಿಸಲಸದಳವಾದಂತಹ ಕಷ್ಟಪರಂಪರೆಯನ್ನೇ ನಿನಗೆ ತಂದೊಡ್ಡಿದೆ. ಅವುಗಳನ್ನೆಲ್ಲ ಧೈರ್ಯದಿಂದಲೂ, ಸ್ಥೈರ್ಯದಿಂದಲೂ, ನೀನು ಎದುರಿಸಿದೆ. ನಿನ್ನ ಸಹಿಷ್ಣತೆಗೆ ನಾನು ಮೆಚ್ಚಿದ್ದೇನೆ...."

ಕೋಟಿ ಪಾಪಗಳೇ ತನ್ನ ಅವಯವವಾಗುಳ್ಳವನು; ಸಮಸ್ತ ದುರ್ಗುಣಗಳೇ ಧಾತುವಾಗುಳ್ಳವನು; ಯಾರನ್ನೂ ಬಿಡದೆ ಕಾಡುವ ದುಷ್ಪ್ರವೃತ್ತಿಯೇ ಸ್ವಭಾವವಾಗುಳ್ಳವನು – ಅಂತಹ ಲೋಕಭಯಂಕರ ಮೂರ್ತಿಯವನು, ನಳನಿಂದ ಬೇರ್ಪಟ್ಟನು. ಸಮಸ್ತವೂ ಪರಿಹಾರವಾಯಿತೋ ಎನ್ನುವ ಹಾಗೆ ಬಾಹುಕ ನಿಶ್ಚಿಂತನಾಗಿ ಕುಳಿತಿದ್ದ. ಹೊರಡುವ ಮುನ್ನ ಕಲಿರಾಜನು ಅವನನ್ನು ಮತ್ತೆ ಹರಸಿದ:

"ಭೂಪಾಲೋತ್ತಮ, ನಿನ್ನ ಕಳೆದುಹೋದ ಸಂಪತ್ತೆಲ್ಲ ಮತ್ತೆ ನಿನಗೆ ಲಭಿಸಲಿ ......ದಮಯಂತಿಯೊಂದೊಡಗೂಡಿ ಮುಂದೆ ಸುಖವಾಗಿ ಬಾಳು...ನಿನಗೆ ಮಂಗಳವಾಗಲಿ...."

ಕಲಿ ಗೌಣವಾದರಿಂದ, ಋತುಪರ್ಣನಿಗೆ ಮಾತ್ರ ಇದೊಂದೂ ತಿಳಿಯದು. ಅವನ ನಿರೀಕ್ಷಣೆಯೆಲ್ಲ–ಯಾವಾಗ ಕುಂಡಿನಪುರ ಸೇರುವುದು; ಸ್ವಯಂವರ ಯಾವಾಗ ನಡೆಯುವುದು, ಎಂಬುವದರಲ್ಲೇ ಇತ್ತು.

ಬಾಹುಕ, ತನ್ನ ಶಿರೋಭಾರ ಹಗುರವಾದವನಂತೆ ಚೇತರಿಸಿಕೊಂಡ. ಆದರೂ ರಥವನ್ನು ಓಡಿಸುತ್ತಲೇ ಇದ್ದ. ಶೋಭಾಯಮಾನವಾಗಿ ಕಂಗೊಳಿಸುವ, ಭೋಗಜೀವನದ ಸಾಗರದಂತಿರುವ, ಇಂದ್ರನ ಅಮರಾವತಿಯ ಘನಶೋಭೆಯನ್ನು ಹೊಂದಿರುವ–ಜಗತ್ತಿನಲ್ಲೇ ಕೀರ್ತಿ ಪಡೆದ ಚೆಲುವಿನ ಬೀಡಾದ ಕುಂಡಿನಪುರಕ್ಕೆ ಋತುಪರ್ಣನ ರಥ ತಲುಪಿತು.

ದೈವವು ಇಂದೆನಗೆ ಅನುಕೂಲವಾಯ್ತೆಂದು ಬಗೆದ ಬಾಹುಕ ಋತುಪರ್ಣನ ರಥವನ್ನು, ತನ್ನ ಮನೋರಥದೊಂದಿಗೆ, ಒಂದಿರುಳಿನಲ್ಲಿ ಕುಂಡಿನಪುರ ಸೇರುವಂತೆ ಮಾಡಿದ್ದನಾತ. ಅವನಿಗೂ ದಮಯಂತಿಯನ್ನು ಕಾಣುವ ತವಕ.

ಕುಂಡಿನಪುರ, ಅಂತಹ ಸ್ವಯಂವರದ ಯಾವ ಸಂಭ್ರಮವನ್ನೂ ಹೊಂದಿರಲಿಲ್ಲ. ಪುನಃಸ್ವಯಂವರವಾದುದರಿಂದ, ಅಷ್ಟೊಂದು ಆಡಂಬರ ಇದ್ದಿರಲಾರದು – ಎಂದು ಬಗೆದ ಋತುಪರ್ಣ. ತಾನು ಮೋಸ ಹೋದೆನೋ—ಎಂಬ ಸಂಶಯವೂ ಆತನನ್ನು ಕಾಡದೆ ಇರಲಿಲ್ಲ.

ಅನಿರೀಕ್ಷಿತವಾಗಿ ತನ್ನ ದೇಶಕ್ಕೆ ಋತುಪರ್ಣ ಮಹಾರಾಜ ಆಗಮಿಸಿದ್ದನ್ನು ಕಂಡು ಭೀಮನೃಪಾಲ ಆದರದಿಂದ ಸತ್ಕರಿಸಿದ; ಕುಶಲ ಪ್ರಶ್ನೆಗಳನ್ನು ಮುಗಿಸಿದ ಬಳಿಕ, ಬಂದಂತಹ ಕಾರ್ಯವನ್ನು ವಿಚಾರಿಸಿದಾಗ ಋತುಪರ್ಣ ತಬ್ಬಿಬ್ಬಾದ. ಆತ ಏನೆಂದು ಉತ್ತರಿಸಬೇಕು !? "ದಮಯಂತಿಯ ಸ್ವಯಂವರಕ್ಕೆಂದು ಬಂದೆ"—ಎನ್ನಲು, ಅಂತಹ ಲಕ್ಷಣ ನಗರದಲ್ಲಿಲ್ಲ.

ಉತ್ತರಿಸದೆ ಸುಮ್ಮನಿದ್ದ ಋತುಪರ್ಣನನ್ನು ಕಂಡು ಭೀಮನೃಪಾಲನೆ ನುಡಿದ—"ಅನಿರೀಕ್ಷಿತವಾಗಿ, ಯಾವುದೋ ಉದ್ದೇಶದಲ್ಲಿ ಬಂದಿರಬಹುದೆಂದು ಭಾವಿಸಲೇ?"

"ಹಾಗೇನಿಲ್ಲ, ನಿನ್ನನ್ನು ನೋಡದೆ ಹಲವು ಕಾಲವಾಯ್ತು....ಮನದ ಬೇಸರ ನೀಗಲೆಂದು ನಿನ್ನಲ್ಲಿಗೆ ಬಂದೆ....ನಮ್ಮದು ಹಳೆಯ ಸ್ನೇಹವಲ್ಲವೆ ಭೀಮನೃಪಾಲ...." ಋತುಪರ್ಣನೆಂದ.

ಈತನ ಉತ್ತರ ಭೀಮನೃಪಾಲನಿಗೆ ಸಮರ್ಪಕವೆಂದು ಅನ್ನಿಸದಿದ್ದರೂ ವ್ಯಾವಹಾರಿಕವಾಗಿ ಅದನ್ನು ಒಪ್ಪಿಕೊಂಡು, ಅತಿಥಿಯ ಉಳಿಕೊಳ್ಳುವ ವ್ಯವಸ್ಥೆ ಮಾಡಿದನಾತ. ಋತುಪರ್ಣನ ಸೇವೆಗಾಗಿ ಪರಿಚಾರಕರನ್ನು ನಿಯಮಿಸಿದ ಭೀಮನೃಪಾಲ.

ವಾರ್ತೆ ದಮಯಂತಿಗೆ ಆಗಲೇ ತಿಳಿದಿತ್ತು. ಋತುಪರ್ಣ ಇಷ್ಟು ಬೇಗ ಕುಂಡಿನಪುರವನ್ನು ಸೇರಬೇಕಾದರೆ ರಥ ಚಲಾಯಿಸಿದಾತ ನಳನೃಪನೇ ಇರಬೇಕೆಂದು ಬಗೆದಳಾಕೆ. ಆದರೂ, 'ಅಲ್ಲವಾದರೆ' ಎಂಬೊಂದು ಅಳುಕು. ಋತುಪರ್ಣನ ಜೊತೆಯಲ್ಲಿ ಬಂದಿರುವ ಬಾಹುಕನ ಸಂಪೂರ್ಣ ವೃತ್ತಾಂತವನ್ನು ತಿಳಿದುಬರಲೆಂದು ಗುಪ್ತವಾಗಿ ಆಳೊಬ್ಬನನ್ನು ಆತನ ಬಳಿಗೆ ಕಳುಹಿಸಿದಳು ದಮಯಂತಿ.

ಗುಪ್ತಚರನಾಗಿ ಹೋದಾತನಿಗೆ ಬಾಹುಕ ನಳನೆಂಬುದಕ್ಕೆ ಯಾವ ಆಧಾರವೂ ಕಾಣಲಿಲ್ಲ. ನಳಮಹಾರಾಯರ ಸುಂದರ ವ್ಯಕ್ತಿತ್ವೆಲ್ಲಿ. ಈ ಬಾಹುಕನ ವಿಕಾರ ಸ್ವರೂಪವೆಲ್ಲಿ.......!—ಚಿಂತಿಸಿದನಾತ. ಆದರೂ ಬಂದಂತಹ ಉತ್ತರ ಮಹತ್ತರವಾದುದು-ಬಾಹುಕನಿಂದ ಫಲವನ್ನು ತಿಳಿದುಕೊಳ್ಳಬೇಕಾಗಿತ್ತು. ದಮಯಂತಿ ಏನು ಅಪ್ಪಣೆಯಿತ್ತಿದ್ದಳೋ ಅದೆಲ್ಲವನ್ನು ತಿಳಿದು ಹಿಂದಿರುಗಿ ಬಂದ ಆತ ತನ್ನ ಒಡತಿಗೆ ಅರಿಕೆಮಾಡಿದ.

ತಾನು ಇಟ್ಟಿದ್ದ ಆಸೆ. ಬಾಹುಕ ನಳನೆಂಬುದನ್ನು ಖಚಿತವಾಗಿ ಹಿಂತಿರುಗಿ ಬರುವನೆಂದು ಬಗೆದಿದ್ದ ದಮಯಂತಿಗೆ ನಿರಾಶೆಯೇ ಕಾದಿತ್ತು.

ಬಹು ಯೋಚಿಸಿದಳು ದಮಯಂತಿ: ವಿಕೃತರೂಪ ಹೇಗೆ ಬಂತು....!? ಮರುಗಳಿಗೆಯಲ್ಲೇ, ಕಷ್ಟ ಜೀವನ ಆತನನ್ನು ಹಾಗೆ ಮಾಡಿ ರಬಹುದೆಂದು ಬಗೆದಾಕೆ. ಆದರೂ ಪರೀಕ್ಷಿಸಿ ನೋಡಬೇಕು.... ತಾಳ್ಮೆಯಿಂದಿರ ಬೇಕು, ಕಾದಿರಬೇಕು. ಹಿರಿಯರ ಮಾತಿನಂತೆ ನಡೆದಳಾಕೆ.

ಋತುಪರ್ಣನ ಊಟೋಪಚಾರಕ್ಕೆ ಅಡುಗೆ ಸಾಮಗ್ರಿಗಳನ್ನು ಒಯ್ಯುತ್ತಿದ್ದರು ಆಳುಗಳು. ಇದನ್ನು ಕಂಡಾಗ ದಮಯಂತಿಯಲ್ಲಿ ಹೊಸದೊಂದು ಯೋಚನೆ ಚಿಗುರೊಡೆಯಿತು. ಈಗ ತನ್ನ ಭವಿಷ್ಯ ನಿರ್ಧಾರವಾಗುವುದೆಂದು ಬಗೆದಳಾಕೆ... ನಳನಿಗೆ ಅಗ್ನಿ ಹಾಗೂ ವರುಣರ ವರಪ್ರಸಾದವಿರುವುದನ್ನು ಆಕೆ ಬಲ್ಲಳು. ಉರಿಸಲು ಬೆಂಕಿಯಿಲ್ಲದೆ, ಅಡುಗೆ ಮಾಡಲು ನೀರು ಕೊಡದೆ ಉಳಿದುದೆಲ್ಲವನ್ನೂ ಕೊಟ್ಟು ಕಳುಹಿಸಿದಳು ದಮಯಂತಿ. ಋತುಪರ್ಣನ ಜೊತೆ ಬಂದಿದ್ದ ಬಾಹುಕ ನಳನೇ ಆಗಿದ್ದರೆ ಆತ ಖಂಡಿತಾ ಅಡುಗೆ ಮಾಡುವನೆಂದು ಆಕೆ ಎಣಿಕೆ ಹಾಕಿದ್ದಳು. ಜೊತೆಗೆ ಆತನ ಕಾರ್ಯಾಚರಣೆಗಳನ್ನು ನೋಡಲು ಬಾಲಕಿಯನ್ನು ಅಲ್ಲೇ ಇರುವಂತೆ ಆದೇಶವಿತ್ತಳು.

ನೀರು. ಬೆಂಕಿ ಇವೆರಡೂ ಇಲ್ಲದಿರಲು-ಋತುಪರ್ಣ ಬೇರೆ ಹಸಿವಿನ ಬಾಧೆಗೆ ಒಳಗಾಗಿರಲು-ಬಾಹುಕ ದಾರಿಗಾಣದೆ ಅಗ್ನಿದೇವನನ್ನು ನೆನೆದ. ಆಗಲೇ ಒಲೆ ಹತ್ತಿ ಉರಿಯಿತು. ವರುಣನಾಗಲೇ ಜಲಧಾರೆಯನ್ನು ಇಳಿಸಿದ್ದ. ನಳನ ಪಾಕ ಆಗಲೇ ಸಿದ್ಧವಾಗಿತ್ತು.

ಆತನ ಈ ಕೈಯ ಕೌಶಲವನ್ನೂ, ಅದ್ಭುತವನ್ನೂ ಮರೆಯಲ್ಲಿ ನಿಂತು ನೋಡುತ್ತಿದ್ದಾಕೆಗೆ ಮಾಯಾಪ್ರಪಂಚದಲ್ಲಿರುವಂತೆ ಅನ್ನಿಸಿರಬೇಕು. ಸವಿಪಾಕದ ಪರಿಮಳಕ್ಕೆ ಬಾಯಲ್ಲಿ ನೀರೂರಿಸುತ್ತ ತನ್ನ ಒಡತಿಯಲ್ಲಿಗೆ ಹೋಗಿ ವಿಷಯವನ್ನೆಲ್ಲ ಪ್ರಸ್ತಾಪಿಸಿದಳು.

"ಹಾಗೇನೂ....!"—ಸಂತಸದ ಉದ್ಗಾರವೆತ್ತಿದಳು ದಮಯಂತಿ.

"ಹೌದು ಮಹಾತಾಯಿ ...ನಾನು ಈ ವರೆಗೆ ಈ ರೀತಿಯ ಅಡುಗೆ ಮಾಡುವುದನ್ನು ನೋಡಿಯೇ ಇಲ್ಲ. ಅದರ ಪರಿಮಳ ಮೂಗಿಗೆ ಬಡಿದಾಗಲೇ ನನಗೆ ಮೃಷ್ಟಾನ್ನ ಭೋಜನ ಮಾಡಿದಷ್ಟು ಆನಂದವಾಯಿತು...."

"ಹಾಗಾದರೆ, ಸಖಿ....ನನಗೂ ಸ್ವಲ್ಪ ಆತನ ಅಡುಗೆಯಲ್ಲಿ ಪಾಲನ್ನು ಕೊಡಲು ಹೇಳುವೆಯಾ....'ರಾಣಿಯವರು ನಿನ್ನ ಅಡುಗೆಯ ಸವಿ ನೋಡಲೆಂದು ಇಲ್ಲಿ ನನ್ನ ಕಳುಹಿಸಿದರು' ಎಂದು ಹೇಳು..."

"ಅಪ್ಪಣೆ ತಾಯಿ...."

—ಸಖಿ ಅಲ್ಲಿಂದ ಹೊರಟು ಋತುಪರ್ಣನುಳಿದುಕೊಂಡ ಬಿಡಾರದ ಅಡುಗೆ ಮನೆಯತ್ತ ಹೊರಟಳು. ಅಷ್ಟು ದೂರಕ್ಕೆ ಬರುತ್ತಿತ್ತು—ಒಗ್ಗರಣೆಯ ಪರಿಮಳ. ಆಕೆ ಅಲ್ಲೇ ನಿಂತುಬಿಟ್ಟಳು. ಅತ್ತ ಬಾಗಿಲಿನಲ್ಲಿ ನಿಂತ ಪರಿಚಾರಿಕೆಯನ್ನು ಕಂಡು ಬಾಹುಕ ಪ್ರಶ್ನಿಸಿದ:

"ಯಾರದು?"

"ನಾನು ಪರಿಚಾರಿಕೆ... ದಮಯಂತಿಮಾತೆ ನನ್ನಲ್ಲಿ ನೀನು ಮಾಡಿದ ಭಕ್ಷ್ಯವನ್ನು ರುಚಿನೋಡಲೆಂದು ತರಹೇಳಿದ್ದಾಳೆ...."

"ಅಹುದೇನು? ಹಾಗಾದರೆ ಇದನ್ನು ಒಡತಿಗೆ ಕೊಡು....ನಾನು ಮಾಡಿದ್ದು ಅಷ್ಟೇನೂ ಚೆನ್ನಾಗಿರಲಿಕ್ಕಿಲ್ಲ...."—ಹಾಸ್ಯಾಸ್ಪದವಾಗಿಯೇ ಅಂದ ಬಾಹುಕ.

"ನೀವು ಹಾಸ್ಯಮಾಡುತ್ತಿದ್ದೀರಿ....ನಿಮ್ಮ ಅಡುಗೆಯ ಪರಿಮಳವೇ ನನ್ನನ್ನು ಬಾಯಲ್ಲಿ ನೀರೂರಿಸಿದೆ."

ತದನಂತರ ನಳ ತಾನು ಬೇಯಿಸಿದ ತಿಂಡಿತಿನಿಸುಗಳನ್ನು ಆಕೆಯಲ್ಲಿ ಕಟ್ಟಿಕೊಟ್ಟಿದ್ದ. ಪರಿಚಾರಿಕೆ ಅದರೊಂದಿಗೆ ದಮಯಂತಿಯ ಅಂತಃ ಪುರವನ್ನು ಪ್ರವೇಶಿಸಿದಳು.

"ತಂದೆಯಾ...!?"—ಆತುರದಿಂದ ಭಕ್ಷ್ಯಗಳು ತುಂಬಿದ ಪಾತ್ರೆ ಯನ್ನು ಎಳೆದುಕೊಂಡಳು ದಮಯಂತಿ. ಒಂದು ತುತ್ತನ್ನು ತೆಗೆದು ತುಟಿಗಿರಿಸಿದಳು. ನಳನ ಪಾಕದ ರುಚಿಯನ್ನು ನೆನೆಯಿತು ದಮಯಂತಿಯ ಮನಸ್ಸು. ಖಂಡಿತವಾಗಿಯೂ ಇದು ನಳಪಾಕವೇ ಎಂದು ಆಕೆ ನಿರ್ಧರಿಸಿದಳು.

"ಸಖೀ, ನನ್ನ ಪುತ್ರರನ್ನು ಇಲ್ಲಿಗೆ ಕರೆತರುವೆಯಾ...."—ಅವಸರ ಪಡಿಸಿದಳು ದಮಯಂತಿ.

—ದಮಯಂತಿಯ ಅಪ್ಪಣೆ ಮೇರೆಗೆ ಆಕೆ ಕುವರರನ್ ಕರೆತಂದಳು.

"ಅಮ್ಮಾ ನಮ್ಮನ್ನು ಇಲ್ಲಿಗೇಕೆ ಬರಹೇಳಿದಿರಿ....? ನಮ್ಮ ತಂದೆಯ ವೃತ್ತಾಂತವೇನಾದರೂ ತಿಳಿಯಿತೇನು?"—ಹಿರಿಯಾತ ಪ್ರಶ್ನಿಸಿದ.

"ನೀನು ಪ್ರಸನ್ನಮುಖಿಯಾಗಿರುವೆಯಲ್ಲಮ್ಮ... ... ನಮ್ಮ ತ ಬಂದರೇ....!?" ಇನ್ನೊಬ್ಬ ಪ್ರಶ್ನಿಸಿದ.

"ಇಷ್ಟರಲ್ಲೇ ಬರುವರು ಮಗೂ...."—ಮಕ್ಕಳ ಕಾತುರಕ್ಕೆ ನೀರೆ ದಳು ದಮಯಂತಿ.

ನಳನ ರೂಪವನ್ನೆಲ್ಲ ಎರವಲು ಪಡೆದಂತೆ ಇದ್ದರು, ಆ ಕುಮಾರರ ಕನ್ನಡಿಯಲ್ಲಿ ತನ್ನ ಪ್ರತಿಬಿಂಬವನ್ನು ನೋಡುವಂತೆ ಆ ಮಾತೆ ತ ಕುವರರ ಮುಖಕಮಲಗಳನ್ನೀಕ್ಷಿಸಿ ದಾದಿಯೊಂದಿಗೆ ಬಾಹುಕನಲ್ಲಿಗೆ ಕ ಳಿಸಿಕೊಟ್ಟಳು....ಏನೂ ಅರಿಯದ ಬಾಲಕರು ತಾಯಿಯ ಆದೇಶದ ದಾದಿಯನ್ನು ಹಿಂಬಾಲಿಸಿದರು. ಮಕ್ಕಳನ್ನು ಕಂಡಾಗ ಬಾಹು ಹಾವಭಾವಗಳನ್ನು ಅರಿಯಬೇಕೆಂದು ಮೊದಲೇ ಆ ದಾದಿಗೆ ದಮಯ ಆದೇಶವಿತ್ತಿದ್ದಳು.

ತನ್ನ ಪುತ್ರರನ್ನು ಕಂಡಾಗ ಕಣ್ಣುಗಳಲ್ಲಿ ಆನಂದಭಾಷ್ಪ ತುಂಬಿಬಂತು. ಮುಖಾರವಿಂದ ಅರಳಿ ನಿಂತಿತು. ಹುಬ್ಬು ಸ್ಫುರಿಸಿತು, ತಾನು ಎಸಗಿದ ಮಹಾಪರಾಧವನ್ನು ನೆನೆದು ಸಂಕೋಚದಿಂದಲೇ ಅವರನ್ನು ನೋಡಿದ ಬಾಹುಕನಾಗಿದ್ದ ನಳಮಹಾರಾಜ. "ಇಹಪರದಲ್ಲಿ ಮುಕ್ತಿಗೆ ಕಾರಣ ರಾಗುವಂತಹ ಕುಲಪುತ್ರರನ್ನು ಅಗಲಿ ವನಾಂತರಕ್ಕೆ ಹೋದ ನನ್ನ ಹೃದಯ ಎಷ್ಟು ಕಠಿಣವಾದುದು"—ಎಂದು ಮರುಗಿದನಾತ.

ಹಳೆಯ ನೆನಹುಗಳೆಲ್ಲ ಒಂದೊಂದಾಗಿ ಹೃದಯಪಟಲದಲ್ಲಿ ಪ್ರತಿ ಬಿಂಬಿಸಿ ಮರೆಯಾಗತೊಡಗಿದುವು–ಬದುಕಿನ ಬಳ್ಳಿ ಚಿಗುರಿ ಪಲ್ಲವಿಸಿದಾಗ–ಆ ಫಲಗಳನ್ನು ನೋಡುವುದೇ ಒಂದು ಆನಂದ. ತೊಡೆಯ ಮೇಲೆ ಏರಿ, ಇಳಿಯುವ ಆ ಕಂದಗಳ ಬಾಲಲೀಲೆಯನ್ನು ಕಂಡಾಗ ಬದುಕಿನ ಎಂತಹ ದುಃಖಿತ ವಾತಾವರಣ ಕೂಡಾ ಸಂತಸದ ಹೊನಲಾಗಿ ಹರಿಯು ತ್ತದೆ. ತಾನು ಮುದ್ದಿನಿಂದ ಸಲಹಿದ ಕಂದಗಳು ಕಣ್ಣಮುಂದೆ ನಿಂತರೂ ಅವರನ್ನು ಮಾತನಾಡಿಸಲಾರದೆ, ತನ್ನೆಲ್ಲ ಹಂಬಲಗಳನ್ನು ಎದೆಯಲ್ಲಿ ಹುದುಗಿಟ್ಟು ನಳರಾಜ ಬಾಹುಕನಾಗಿಯೇ ಉಳಿದ!

ಆದರೂ ಕರುಳಿನ ಕೊರೆತ ಒಂದು ಇದ್ದೇ ಇದೆಯಲ್ಲ....! ತನ್ನಲ್ಲೇ ತಾನು ಈ ಪರಿಯ ವ್ಯಾಖ್ಯಾನ ಮಾಡಿದ; ತನಗರಿವಿಲ್ಲದಂತೆ ಒಂದೆರಡು ನುಡಿಮುತ್ತುಗಳು ಆತನ ತುಟಿಯೊಡೆದು ಬಂದವು.

ಆದರೆ, ದಮಯಂತಿಯಿಂದ ಮೊದಲೇ ಆಜ್ಞೆಪಡೆದಿದ್ದ ದಾದಿ ಕುವರರೊಂದಿಗೆ ಹಿಂದಿರುಗಿ ಬಂದು, ತನ್ನೊಡತಿಗೆ ಅಲ್ಲಿ ನಡೆದ ವಿಚಾರ ವನ್ನು ಅಂತೆಯೇ ವರ್ಣಿಸಿ ಹೇಳಿದಳು. ಈಗ ದಮಯಂತಿಗೆ ದೇವ ಲೋಕವೇ ಭೂಮಿಗಿಳಿದು ಬಂದಷ್ಟು ಆನಂದವಾಯಿತು. ಕಂದಗಳನ್ನು ಮತ್ತೆ ವಿಶ್ರಮಿಸಲು ಕಳುಹಿಸಿದ ದಮಯಂತಿ ಉತ್ಸಾಹದಿಂದ ಆತನೇ ತನ್ನ ಪತಿಯೆಂದು ನಿಶ್ಚೈಸಿ ಮತ್ತೆ ಸ್ವರ್ಣಪ್ರಭಾಪೀಠವನ್ನು ಏರಿ ಕುಳಿತಳು. ಆ ಸುವರ್ಣ ಪೀಠವನ್ನು ಮಿಗಿಲೇರಿಸುವ ಸುಕಾಂತಿ ದಮಯಂತಿಯ ಮುಖಕಮಲದಲ್ಲಿ ಪುಟಿಯುತ್ತಿತ್ತು.

ದೇವಕನ್ನಿಕೆಯರಂತೆ ಸೌಂದರ್ಯವತಿಯರಾದ ತನ್ನ ದಾಸಿಯರನ್ನು

ಬಂದಮಾಡಿಸಿದಳು ದಮಯಂತಿ. ತನ್ನ ಅಭೀಷ್ಟವನ್ನು ಬಾಹುಕನಿಗೆ ತಿಳಿಸಿ, ಆತನನ್ನು ತನ್ನೆಡೆಗೆ ಕರೆತರಬೇಕೆಂದು ಅಪ್ಪಣೆ ಮಾಡಿದಳು.

ದಮಯಂತಿಯ ಅಪ್ಪಣೆಯಂತೆ ಆ ದಾಸಿಯರು ಬಾಹುಕನನ್ನು ಕರೆತರಲು, ಋತುಪರ್ಣನರಿಯದಂತೆ, ಪಾಕಶಾಲೆಯನ್ನೈದಿದರು. ತಾವು ಬಂದಂತಹ ವಿಷಯವನ್ನು ಬಾಹುಕನಿಗೆ ತಿಳಿಸಿ, ಆತನನ್ನು ತಮ್ಮ ಜೊತೆ ದಮಯಂತಿಯ ಅಂತಃಪುರಕ್ಕೆ ಬರಬೇಕೆಂದು ಪ್ರಾರ್ಥಿಸಿದರು.

ನಳ ತನ್ನಷ್ಟೇ ಒಂದು ನಿರ್ಧಾರಕ್ಕೆ ಬರುವ ವರೆಗೆ ಯಾವುದನ್ನೂ ಹೇಳದೆ ಮೌನವಹಿಸಿದ. ಕೊನೆಗೂ ಆತನ ಮನಸ್ಸು ದಮಯಂತಿಯ ಬಳಿಗೆ ಹೋಗಲು ಹಾರೈಸುತ್ತಿತ್ತು. ಆ ಅಂಗನೆಯರನ್ನೊಡಗೂಡಿ ಆತ ದಮಯಂತಿಯ ಅಂತಃಪುರದತ್ತ ನಡೆದ.

ಇತ್ತ ಋತುಪರ್ಣ ಮಹಾರಾಜನಿಗೆ ಇದೊಂದು ವಿಚಾರವೂ ತಿಳಿಯದು. ಸುಭೋಜನವಾದ ಮೇಲೆ, ಪ್ರಯಾಣದ ಬಳಲಿಕೆಯೂ ಇದ್ದುದರಿಂದ ಆತ ಆಗಲೇ ಸುಖನಿದ್ರೆಯನ್ನು ಸ್ವಾಗತಿಸಿದ್ದ.

“ಈಗ ಬರುವನು ನನ್ನ ಪ್ರಾಣನಾಥ”—ಎಂಬ ಉತ್ಕಟ ಆಕಾಂಕ್ಷೆಯಿಂದ ಕಾದಿದ್ದಳು ದಮಯಂತಿ. ಹಲವು ದಿನಗಳ ಅಗಲಿಕೆಯ ಬಳಿಕ ಇಂದು ಒಂದುಗೂಡುವ ಯೋಗ ಒದಗಿತಲ್ಲ ಎಂದು ಹಿಗ್ಗಿದಳು. ಕತ್ತುದ್ದ ಮಾಡಿ ಅಷ್ಟು ದೂರ ನೋಡಿದಾಗ ಸಂಭ್ರಮದ ಅಂಗನೆಯರನ್ನೊಡಗೂಡಿ ಬರುತ್ತಿದ್ದ ಬಾಹುಕ! ಅವರ್ಣನೀಯ ಅನುಭವ ದಮಯಂತಿಗೆ!

ಬಾಹುಕ ಬಂದು ದಮಯಂತಿಯ ಮುಂದೆ ನಿಂತುಕೊಂಡ. ತನ್ನ ಹೃದಯಮಂದಿರದಲ್ಲಿ ಚಿರವಾಗಿ ನೆಲೆಸಿರುವ ಸುಂದರಮೂರ್ತಿ ನಳನೆಲ್ಲಿ? ಈ ಬಾಹುಕನೆಲ್ಲಿ? – ದುಃಖವುಕ್ಕಿದುದು ಕಣ್ಣೀರಾಗಿ ಹರಿಯಿತು ದಮಯಂತಿಗೆ. ನಳನ ರೂಪವೇ ವಿಕಾರವಾಗಿತ್ತು. ಆತನ ಸೌಂದರ್ಯ ಕರಾಳಕತ್ತಲು ಕವಿದಿತ್ತು; ಉಟ್ಟುಕೊಂಡಿದ್ದ ಬಟ್ಟೆ ಹರಿದಿತ್ತು; ಕೂದಲು ತನ್ನ ಕಾಂತಿಯನ್ನು ಕಳೆದಿತ್ತು; ಆತನ ಅಂಗಾಂಗಗಳೆಲ್ಲ ಮಂದವಾಗಿದ್ದುವು— ಈತನೇ ಆ ನಳಮಹಾರಾಜ!?

ಬಾಹುಕನ ಕಿರುಗಂಟುಗಟ್ಟಿದ ಬೆರಳುಗಳನ್ನು ನೋಡಿದಾಗ ದಮಯಂತಿಗೆ ಈಟಿಯಿಂದ ಇರಿದಂತಾಯಿತು; ಆತನ ಕೊಂಕಿದ ಕಿವಿಗಳೆರಡನ್ನು ಕಂಡಾಗ ಉಸಿರುಗಟ್ಟುವಂತಾಯಿತು; ಕುಸಿದ ಕೊರಳನ್ನು ನೋಡಲಾರದೆ ತನ್ನೆರಡು ಕೈಗಳಿಂದ ಮುಖವನ್ನು ಹುದುಗಿಸಿಕೊಂಡಳು ದಮಯಂತಿ! ಕಂಬನಿತುಂಬಿದ ನಯನಗಳು ಬಾಹುಕನ ಹತ್ತಾರು ವಿಕೃತರೂಪಗಳನ್ನು ಒಂದೇ ಬಾರಿಗೆ ಕಂಡುದರಿಂದ ಕಿರುಚಬೇಕೆನ್ನುವಷ್ಟು ಮನೋವ್ಯಾಕುಲತೆ ಉಂಟಾಯಿತು ಆಕೆಗೆ.

ಹರನ ಮುಕ್ಕಣ್ಣಿನ ಉರಿಗೆ ಹಬ್ಬಿದ ಕರ್ಬೊಗೆಯಲ್ಲಿ ಅದ್ದಲ್ಪಟ್ಟ ಮನ್ಮಥನೋ, ಸುರಾಸುರರು ಸಮುದ್ರಮಥನ ಮಾಡಲು ವಾಸುಕಿ ಕಾರಿದ ಹಾಲಾಹಲವನ್ನೆಲ್ಲ ಕುಡಿದ ರುದ್ರನೋ, ಎಂಬಂತೆ, ದಮಯಂತಿಗೆ ನೈಷಧ ಚಕ್ರವರ್ತಿಯಾದ ನಳ, ಬಾಹುಕನಾಗಿ ಕಾಣಿಸುತ್ತಿದ್ದ.

ಆಕೆಗರಿವಿಲ್ಲದಂತೆಯೇ ನಳನ ಮೇಲಿನ ಪ್ರೇಮ, ಪ್ರೀತಿಗಳೆಲ್ಲ ಮೇರೆಮೀರಿ ಸಾಗಲಾರಂಭಿಸಿದ್ದವು. ದಮಯಂತಿ ಈ ಉರಿಯನ್ನು ತಾಳಲಾರದೆ ಬಾಹುಕನಿಗೆ ಹೇಳಿದಳು:

"ಮಹಾರಾಜ, 'ಬಾಹುಕ'ನೆಂಬ ನಿನ್ನ ನಟನೆಯನ್ನು ಬಿಟ್ಟುಬಿಡು ... ನನ್ನನ್ನು ಪ್ರೀತಿಯಿಂದ ಮಾತಾಡಿಸು; ನನ್ನಂತರಂಗದ ಬೇಸರವನ್ನು ಕರುಣೆಯಿಂದ ಕಡಿಮೆ ಮಾಡಲಾರೆಯಾ....?"

ಬಾಹುಕನ ಮನಸ್ಸು ಆದರೂ ಕದಡದು. ಕಣ್ಣೀರು ಸುರಿಸಿದಳು ದಮಯಂತಿ. ಹೆಣ್ಣು ಅತ್ತಾಗ ಯಾರು ತಾನೇ ಸುಮ್ಮನೆ ಕುಳಿತಿರಲು ಸಾಧ್ಯ! ಹೆಣ್ಣಿನ ಕಣ್ಣೀರಿಗೆ ಎಂತಹ ಕಲ್ಲೆದೆಯನ್ನಾದರೂ ಕರಗಿಸುವ ಶಕ್ತಿಯಿದೆ. ಬಾಹುಕನಿಗೆ ಸಮಯ, ಸನ್ನಿವೇಶಗಳ ಪರಿವೆಯೇ ಆಗ ಉಳಿಯಲಿಲ್ಲ. ಕಾರ್ಕೋಟಕನು ಕೊಟ್ಟಿದ್ದ ಅಂಬರವನ್ನು ಕೂಡಲೇ ತೆಗೆದು ಹೊದೆದುಕೊಂಡನಾತ. ಕತ್ತಲೆ ಕವಿದ ಭೂಮಂಡಲದಲ್ಲಿ ಸೂರ್ಯದೇವನ ಆಗಮನವಾದಂತೆ ಹೆಚ್ಚು ಪ್ರಭಾಪೂರ್ಣನಾಗಿ ಅಲ್ಲಿ ಕಾಣಿಸಿಕೊಂಡ ನಳಮಹಾರಾಜ. ಅಲ್ಲಿದ್ದ ಸ್ತ್ರೀಯರೆಲ್ಲ ಈ ಅದ್ಭುತವನ್ನು ಎವೆಯಿಕ್ಕದೆ ನೋಡುತ್ತಿದ್ದರು.

ಸುಂದರಮೂರ್ತಿಯಾಗಿ, ಮೋಡದ ಮರೆಯಿಂದ ಗೋಚರಿಸುವ ಪೂರ್ಣಚಂದ್ರನಂತೆ; ಹಿಮತುಂಬಿದ ಚಳಿಗಾಲದ ಬಳಿಕ ಬರುವ ವಸಂತನಂತೆ; ಹೃದಯಕೀಡದುದನ್ನೆಲ್ಲ ಕಳೆದ ಯತೀವರನಂತೆ ನಳನು ವಿರೂಪವೆಲ್ಲ ಹೋಗಿ ಮನೋಹರನಾಗಿ ಕಂಗೊಳಿಸುತ್ತಿರುವುದನ್ನು ಕಂಡಾಗ ದಮಯಂತಿ ತನ್ನನ್ನೇ ತಾನು ನಂಬದಾದಳು.

ಸಂತಸದ ಉಬ್ಬರದಲ್ಲಿ ಪತಿಯ ಪಾದಕ್ಕೆ ಎರಗಿದಳು ದಮಯಂತಿ. ಆ ಪಾದಗಳನ್ನು ತನ್ನ ಮುಡಿಯಲ್ಲಿರಿಸಿ, ಕಣ್ಣೀರ ಸ್ನಾನವನ್ನೇ ಮಾಡಿಸಿದಳು: "ಕುವರರನ್ನು ಮರೆತಿರಾ? ನಿಮ್ಮ ಮನಸ್ಸು ಹೇಗೆ ಒಡಂಬಟ್ಟಿತು"— ಎಂದು ಉದ್ಗರಿಸಿದಳು. "ಸಾಕೆ ಶಂಕೆ, ಬೇಗ ಹೇಳು ಮನೋವಲ್ಲಭ"- ಎಂದು ಒತ್ತಾಯಿಸಿದಳು. ಚಿಕ್ಕ ಮಕ್ಕಳಂತೆ ಅಳುತ್ತಿದ್ದಳು ದಮಯಂತಿ!

ಆಕೆಯನ್ನು ಸಂತೈಸಿದ ನಳರಾಯ ತನ್ನೆಲ್ಲ ಪಾಡನ್ನು ವಿವರಿಸಿದ.

"ನಮ್ಮ ಕಂದಗಳೆಲ್ಲಿ ...?"—ಮತ್ತೆ ಪ್ರಶ್ನಿಸಿದನಾತ.

ದಾದಿಯೊಂದಿಗೆ ಕುವರರು ಆಗಲೇ ಅಲ್ಲಿಗೆ ಬಂದಿದ್ದರು.

"ಕಂದಗಳಿರಾ, ನಿಮ್ಮ ತಂದೆಯನ್ನು ವಂದಿಸಿರಿ ..."

"ವಂದಿಸುವೆವು ತಾತಾ...."—ಮಕ್ಕಳು ನಳನ ಪಾದಕ್ಕೆರಗಿದವು.

"ದೀರ್ಘಾಯುವಾಗಿರಿ"—ನಳನೆಂದ.

ಕಲಿಯ ಬಾಧೆಯಿಂದಾಗಿ ಸತಿಸುತರನ್ನು ಕಳೆದುಕೊಂಡು, ಅರಣ್ಯವನ್ನು ಹೊಕ್ಕು, ಪಡಬಾರದ ಬವಣೆಗಳನ್ನು ಅನುಭವಿಸಿ ಮತ್ತೆ ಚೇತರಿಸುವಂತಾದ ನಳಮಹಾರಾಜ.

"ದೇವಾ, ನಮ್ಮ ಪುನಸ್ಸ್ವಯಂವರವಾಗಬೇಕಾಗಿದೆ...."—ದಮಯಂತಿಯೆಂದಳು.

"ನಾವೀಗ ಒಂದಾಗಿದ್ದೇವಲ್ಲ... ಅದೇ ಅಲ್ಲವೇ ಸ್ವಯಂವರ.... ನೀನೇ ನಿನ್ನ ಪ್ರಾಣನಾಥನನ್ನು ಆರಿಸಿದ್ದಿಯಲ್ಲೇ...."—ನಳನೆಂದ.

ನಾಚಿಕೆಯಿಂದ ತಲೆಯೆತ್ತಲಾರದೆ ದಮಯಂತಿ ತಲೆತಗ್ಗಿಸಿದಳು. ವಿಷಯವನ್ನು ತಿಳಿದ ಭೀಮನೃಪಾಲ ಆಗಲೇ ಅಲ್ಲಿಗೆ ಬಂದಿದ್ದ ತನ್ನ ಅಳಿಯನನ್ನು ಆಶೀರ್ವದಿಸಿದ!

ಮಗಳ ದುಃಖವನ್ನು ಕಂಡು ಪ್ರತಿದಿನ ಕೊರಗುತ್ತಿದ್ದ ಭೀಮ ನೃಪಾಲನಿಗೆ ಇಂದು ತುಂಬಲಾರದಂತಹ ಆನಂದ. ಆದರೆ ನಳನ ಕಳೆದು ಹೋದ ರಾಜ್ಯವನ್ನು ಮತ್ತೆ ಸಂಪಾದಿಸುವುದು ಹೇಗೆ?-ಚಿಂತಿಸಿದನಾತ.

ರಾತ್ರಿಯಲ್ಲಿ ಸುಖನಿದ್ದೆಯನ್ನು ಸ್ವಾಗತಿಸಿದ್ದ ಋತುಪರ್ಣನಿಗೆ ಹೊತ್ತು ಮೂಡಿದ ಮೇಲೆಯೇ ಎಚ್ಚರವಾದುದು. ಪರಿಚಾರಕರೆಲ್ಲ ಬಹಳ ಸಂಭ್ರಮದಿಂದ ಓಡಾಡುತ್ತಿದ್ದಾರೆ. ಕುಂಡಿನಪುರದ ಪ್ರಜೆಗಳೆಲ್ಲ ಸುಖಿಗಳೆಂದು ಮನಸ್ಸಿನಲ್ಲೇ ಯೋಚಿಸಿದ ಋತುಪರ್ಣ. ಆದರೂ ಆತನಿಗೆ ಸಂಶಯ ತೋರದಿರಲಿಲ್ಲ. ಹಿಂದಿನ ದಿನ ತಾನು ನಗರಕ್ಕೆ ಬಂದಾಗಲೂ ಈ ರೀತಿಯ ಸಂಭ್ರಮವಿರಲಿಲ್ಲ; ಇಂದೇಕೆ ಹೀಗೆ ಆಗುತ್ತಿದೆ....! ಚಿಂತನೆಗೆ ಕೊನೆಯೇ ಇಲ್ಲದಾಗ ನಿಜವಾಗಿಯೂ ದಮಯಂತಿಯ ಪುನಃಸ್ವಯಂವರ ನಡೆಯುತ್ತದೆಯೇ ಎಂದು ಶಂಕಿಸಿದ. ತಾನು ಭೀಮನೃಪಾಲನಲ್ಲಿ ಬಂದ ಕಾರಣವನ್ನು ಸುಳ್ಳಾಗಿ ಹೇಳಿದುದನ್ನು ನೆನೆದು ನಾಚುಗೆಯೂ ಆಯಿತವನಿಗೆ. ತನ್ನ ಸೇವೆಗೆ ನಿಯಮಿತನಾಗಿದ್ದ ಪರಿಚಾರಿಕೆಯೊಬ್ಬಳನ್ನು ಕರೆದು ಪ್ರಶ್ನಿಸಿದ ಋತುಪರ್ಣ.

"ಇಂದು ನಿಮ್ಮ ನಗರದಲ್ಲಿ ಏನಾದರೂ ವಿಶೇಷವಿದೆಯೇ?"

ಹೇಳಲೋ, ಬೇಡವೋ ಅಳುಕಿದಳು ಆಕೆ....! ಮತ್ತೆ ಮೆಲ್ಲನೆ ಉಸುರಿದಳು-"ಇಂದು ನಮ್ಮೊಡತಿಗೆ ಪುನಃಸ್ವಯಂವರ" ಎಂದು.

ತಾನು ಸ್ವರ್ಗದಲ್ಲಿರುವಂತೆ ಭಾಸವಾಯಿತು ಋತುಪರ್ಣನಿಗೆ. ಪ್ರಾತರ್ವಿಧಿಗಳನ್ನೆಲ್ಲ ಮುಗಿಸಿದ ಬಳಿಕ ಬಾಹುಕನಿಗಾಗಿ ಹುಡುಕಾಡಿದ. ಆತ ಕಾಣಿಸದಿರಲು ಅಲ್ಲೇ ನಿಂತಿದ್ದ ಕಾವಲುಗಾರನನ್ನು ಪ್ರಶ್ನಿಸಿದ:

"ಬಾಹುಕನೆಲ್ಲಿ....!?"

ಬಾಹುಕ ನಳನಾದ ವಿಷಯ ಅಷ್ಟರಲ್ಲೇ ಊರೆಲ್ಲ ಹಬ್ಬಿತ್ತು. ಆ ದೂತ ಹೇಳಿದ: "ಅವರು ದಮಯಂತಿಯ ಅಂತಃಪುರಕ್ಕೆ ಹೋಗಿದ್ದಾರೆ...."— ಎಂದು.

ದಮಯಂತಿಯು ಅಂತಃಪುರಕ್ಕೆ, ತನ್ನ ಸಾರಥಿಯಾದ ಬಾಹುಕ ಹೋಗುವುದೆಂದರೇನು ......!? ಬಹುಶಃ ನನ್ನ ವಿಷಯವಾಗಿ ತಿಳಿದು, ಕೊಳ್ಳಲು ದಮಯಂತಿ ಕರೆಸಿರಬಹುದೇ?" — ಋತುಪರ್ಣ ಮತ್ತೊಮ್ಮೆ ಚಿಂತಿಸಿದ. ಯೋಚನಾಮಗ್ನನಾಗಿ ನಿಂತ ದೊರೆಯನ್ನು ಕಂಡು ದೂತ ಮತ್ತೆ ಹೇಳಿದ:

"ನಿಮ್ಮ ಸಾರಥಿಯೇ ಇಂದು ನಳಮಹಾರಾಜರಾಗಿದ್ದಾರೆ... ಅವರ ಪುನರ್ಮಿಲನದ ಸಂಭ್ರಮದಲ್ಲೇ ನಡೆದಿರಬಹುದು .. ಪ್ರಭುಗಳಿಗೆ ಈ ವಿಚಾರ ತಿಳಿದಿರಬಹುದೆಂದು ನಾನು ಭಾವಿಸಿದ್ದೆ."

"ಅದೇನು ...!?" ಚಕಿತನಾಗಿ ಕೇಳಿದ ಋತುಪರ್ಣ.

ತನ್ನ ಸಾರಥಿ ನಳಚಕ್ರವರ್ತಿಯಾಗುವುದೆಂದರೇನು!? ಇದರ ಹಿನ್ನೆಲೆ ಮತ್ತಷ್ಟು ವಿವರವೇನು... ದೂತನಲ್ಲಿ ಭೀಮನೃಪಾಲನನ್ನು ತಾನು ಕಾಣಲು ಬಯಸುವುದಾಗಿ ಹೇಳಿ ಕಳುಹಿಸಿದ. ಆದರೆ ಋತುಪರ್ಣನನ್ನು ಕರೆತರಲು ಭೀಮನೃಪಾಲನೇ ತನ್ನ ಆಪ್ತರನ್ನು ಕಳುಹಿಸಿದ್ದ. ಭೀಮ ನೃಪಾಲನ ಬಳಿಯಲ್ಲಿ ನಳನನ್ನು ಕಂಡಾಗಲಂತೂ ಋತುಪರ್ಣನಿಗೆ ಆದ ಆಶ್ಚರ್ಯ ವರ್ಣಿಸಲಸಾಧ್ಯ.

"ವಿಷಯ ನನಗೆ ಈಗಲೇ ತಿಳಿದಿದೆ.. ನಡೆದುದಾದರೂ ಏನು ನಳಮಹಾರಾಜ...!?"

"ನಾನು ಹೇಳುವುದೆಲ್ಲವನ್ನು ನೀವು ಆಸ್ಥೆಯಿಂದ ಕೇಳುವಿರಾದರೆ ಹೇಳುತ್ತೇನೆ...." ನಳನೆಂದ.

"ಅದಕ್ಕೆಂತಲೇ ನಾನು ಇಲ್ಲಿಯವರೆಗೆ ಬಂದಿದ್ದೇನೆ... ಬಾಹುಕನಾಗಿ ನೀನು ನನ್ನಲ್ಲಿ ಬಂದ ಬಗೆಯಾದರೂ ಹೇಗೆ? ಒಂದನ್ನೂ ಬಿಡದೆ ನನಗೆ ತಿಳಿಸಬೇಕು...."

ನಳ ತನ್ನ ಕರುಣ ಕಥೆಯನ್ನು ಆರಂಭಿಸಿದ:

"ನಾನು ದ್ಯೂತದಲ್ಲಿ ಸೋತು. ಕಾಡುಸೇರಿದ ವಿಚಾರ ನಿಮಗೆಲ್ಲ ತಿಳಿದಿದೆ. ಅಲ್ಲಿಂದ ನಾನು ಮತ್ತು ದಮಯಂತಿ ಅರಣ್ಯದಲ್ಲಿ ಅಂಡಲೆಯುತ್ತಿದ್ದೆವು. ನನ್ನಿಂದಾಗಿ ಆಕೆ ಕಷ್ಟಪಡುವುದನ್ನು ನನಗೆ ನೋಡಿ ಸಹಿಸ

ಲಾಗಲಿಲ್ಲ. ಅದಕ್ಕೆ ನಾನೇ ಆಕೆಯನ್ನು ತೊರೆದು ಕಾಡಿನಲ್ಲಿ ತಲೆಮರೆಸಿಕೊಂಡೆ. ಮುಂದೆ ನಾನು ಕಾರ್ಕೋಟಕನ ವಿಷದ ಹಲ್ಲುಗಳಿಗೆ ಬಲಿಯಾದೆ. ಆ ವಿಷದ ಹಲ್ಲುಗಳ ಕಡಿತವೂ ನನಗೆ ವರವಾಗಿ ಪರಿಣಮಿಸಿತು. ಅವರಿಂದಾಗಿ ನನಗೆ ಆ ವಿಕೃತರೂಪ ಬಂದುದು. ಅದರ ಪರಿಹಾರಕ್ಕೆಂದು ಆ ಕಾರ್ಕೋಟಕನೇ ನಾಗವಸ್ತ್ರವನ್ನು ಇತ್ತಿದ್ದ. "ನಿನ್ನನ್ನು ಹಿಡಿದ ಕಲಿಯು ನಿನ್ನ ದೇಹವನ್ನು ಬಿಟ್ಟಗಲಿದ ಮೇಲೆ ಇದನ್ನು ನೀನು ಹೊದೆದುಕೊಳ್ಳು; ಆಗ ನಿನ್ನ ಹಿಂದಿನ ರೂಪ ನಿನಗೆ ಬರುವುದು"—ಎಂದು ಕಾರ್ಕೋಟಕ ಹೇಳಿದಂತೆ, ನಿನ್ನೆಯ ದಿನ ನಾನು ನನ್ನ ನಿಜರೂಪವನ್ನು ತಳೆದೆ...."

"ನಿನ್ನ ಕಥೆ ತುಂಬಾ ಸ್ವಾರಸ್ಯವಾಗಿದೆ ನಳರಾಯ....ಇನ್ನಾದರೂ ನೀನು ದ್ಯೂತವಾಡಿ ಪುಷ್ಕರನನ್ನು ಸೋಲಿಸಬಹುದಲ್ಲ....ನಿನಗೆ ಅಕ್ಷಹೃದಯವನ್ನು ಬೋಧಿಸಿದ್ದೇನೆ...."—ಋತುಪರ್ಣನೆಂದ.

"ಅದರಿಂದ ನಾನು ತಮಗೆ ಕೃತಜ್ಞನಾಗಿದ್ದೇನೆ ಋತುಪರ್ಣ ಮಹಾರಾಜಾ....! ನಾನು ಈ ಹಿಂದೆಂದೂ ಅಕ್ಷದ್ಯೂತದಲ್ಲಿ ಸೋಲನ್ನಪ್ಪಿದವನಲ್ಲ. ಆದರೆ ನನ್ನನ್ನು ಮುತ್ತಿದ ಶನಿ ಸೋಲುವಂತೆ ಮಾಡಿದ–ನಾನು ನನ್ನತನವನ್ನು ಕಳೆದುಕೊಂಡು ಅಡವಿಯಲ್ಲಿ ಅಲೆದಾಡುವಂತೆ ಮಾಡಿದ — ಪಡಬಾರದ ಕಷ್ಟಗಳನ್ನು ಅನುಭವಿಸುವಂತೆ ಮಾಡಿದ. ತಾವು ನನಗೆ ಅಕ್ಷಹೃದಯವನ್ನು ಬೋಧಿಸುತ್ತಿರುವಾಗಲೇ, ಆ ಶನಿ ಹೊರಟು ಹೋದುದು. ಹೋಗುವಾಗ ನನ್ನನ್ನು ಹರಸಿಯೇ ಹೋದನಾತ"

"ಭವಿಷ್ಯದಲ್ಲಿ ನಿನಗೆ ಒಳಿತಾಗಲಿ ನಳರಾಯ... ನಡೆದುದೆಲ್ಲ ನಿನ್ನ ಒಳ್ಳೆಯದಕ್ಕೆಂದೇ ತಿಳಿ. ನಾನಿನ್ನು ಬರುತ್ತೇನೆ; ಭೀಮನೃಪಾಲ, ಹೊರಡಲು ಅನುಮತಿ ನೀಡಬೇಕು...."

ಋತುಪರ್ಣ ರಾಜ ಹೊರಟುನಿಂತ. ಕುಂಡಿನಪುರ, ಆತನನ್ನು ಸಂಭ್ರಮದಿಂದ ಬೀಳ್ಕೊಂಡಿತು. ಋತುಪರ್ಣನು ಅಷ್ಟೇ ಸಂತಸದಿಂದ ತನ್ನ ರಾಜ್ಯಕ್ಕೆ ತೆರಳಿದ. ನಳನ ಪಾಲಿಗೆ ಇನ್ನು ಉಳಿದಿರುವ ಕೆಲಸ

ದೇವರೆ ಪುಷ್ಕರನೊಂದಿಗೆ ಮತ್ತೆ ಜೂಜಾಡುವುದು. ತಾನು ಮತ್ತೆ ದ್ಯೂತಕ್ಕೆ ಬರುವುದಾಗಿ ಹೇಳಿ ಕಳುಹಿಸಿದ ನಳರಾಜ. ಅನಿರೀಕ್ಷಿತವಾಗಿ ನಳನಿಂದ ದ್ಯೂತಕ್ಕೆ ಬಂದ ಆಹ್ವಾನ ಪುಷ್ಕರನನ್ನು ರೋಮಾಂಚನಗೊಳ್ಳುವಂತೆ ಮಾಡಿದರೂ ತನ್ನ ದರ್ಪವನ್ನು ಅವ ಬಿಡಲಿಲ್ಲ:

“ಒಮ್ಮೆ ಸೋತು ಸರ್ವಸ್ವವನ್ನು ಕಳೆದುಕೊಂಡಾತ ಮತ್ತೊಮ್ಮೆ ದ್ಯೂತಕ್ಕೆ ಬರುವನೇ? ಬರಲಿ....ಅವನ ಹುಟ್ಟಡಗಿಸುತ್ತೇನೆ....” ಅರ್ಭಟಿಸಿದ ಪುಷ್ಕರ.

ದ್ಯೂತಕ್ಕೆ ಆಹ್ವಾನ ನೀಡಲು ಹೋಗಿದ್ದ ದೂತ ವಿಷಯವನ್ನೆಲ್ಲ ಅವನು ನಳನಲ್ಲಿ ಬಂದು ಬಿನ್ನವಿಸಿಕೊಂಡ. ಇನ್ನೊಂದು ಅವಕಾಶವಿಲ್ಲ ಪುಷ್ಕರನಿಗೆ—ಎದುರಿಸದೆ ಗತಿಯಿಲ್ಲ ನಳನಿಗೆ. ಹಿಂದೆ ಕಲಿರಾಯ ಪುಷ್ಕರನಿಗೆ ಒಲಿದು ನಳನಿಗೆ ಮುನಿದ ಕಾರಣ ಅತ ಅಕ್ಷದ್ಯೂತದಲ್ಲಿ ಗೆದ್ದಿದ್ದೇನೋ ನಿಜ... ಆದರೆ ಆ ಮಾತು ಕಳೆದ ಗಂಟು! ಋತುಪರ್ಣ ನಿಂದ ನಳ ಅಕ್ಷಹೃದಯವನ್ನು ಬೇರೆ ಕಲಿತಿದ್ದುದರಿಂದ ಪುಷ್ಕರ ಯಾವ ವಿಧದಲ್ಲೂ ಗೆಲ್ಲುವಂತಿಲ್ಲ.

ನಿಷಧದೇಶಕ್ಕೆ ಹೋಗಲು ರಥ ಸಿದ್ಧವಾಯಿತು. ಕುಂಡಿನಪುರದ ಬಂಧುಗಳೆಲ್ಲ ನಳನನ್ನು ಹರಸಿದರು. ಭೀಮನಿಂದ ಅಪ್ಪಣೆ ಪಡೆದು ಮಕ್ಕಳನ್ನು ಬಿಡುತ್ತ ನಳ ನಿಷಧಾಭಿಮುಖನಾಗಿ ಹೊರಟ.

ವೈಭವದಲ್ಲಿ ಮೆರೆಯುತ್ತಿದ್ದ ನಿಷಧದೇಶ ಇಂದು ಕಳೆಗುಂದಿದಂತೆ ಕಾಣಿಸಿತು ನಳನಿಗೆ. ಆ ವಿಶಾಲ ಪಟ್ಟಣದ ಹಿಂದಿನ ಸೊಬಗೇ ಮಾಯವಾಗಿತ್ತು. ಜೂಜಿಗೆ ಮತ್ತೆ ಬಂದ ನಳನಿಗೆ ಪುಷ್ಕರ ಯಾವುದೇ ಗೌರವದ ಸ್ವಾಗತ ನೀಡಲಿಲ್ಲ.

“ದ್ಯೂತವಾಡಲು ನಿನ್ನಲ್ಲಿನ್ನು ಏನು ಉಳಿದಿದೆ....?”—ದರ್ಪದ ಪ್ರಶ್ನೆ ಪುಷ್ಕರನದ್ದು.

“ರಾಶಿ ಹೊನ್ನುಂಟು....ಒಂದು ಆಟಕ್ಕಾದರೂ ಸಾಕಲ್ಲ....”—ವ್ಯಂಗ್ಯವಾಗಿಯೇ ಉತ್ತರಿಸಿದ ನಳ.

"ಅದು ಮಾಗಿಯುವ ವರೆಗೆ ನಿನ್ನ ಈ ಜಂಭ... ಬಾ ದ್ಯೂತಕ್ಕೆ...."—ಪುಷ್ಕರನೆಂದ.

ಇಬ್ಬರೂ ದ್ಯೂತಗೃಹವನ್ನು ಪ್ರವೇಶಿಸಿದರು. ಪುಷ್ಕರನಿಗೆ, ಆಗಲೆ ಅಪಶಕುನಗಳು ಕಾಣಿಸಿಕೊಂಡವು. ಆದರೂ ಆತ ಎದೆಗುಂದಲಿಲ್ಲ. ಒಮ್ಮೆ ಸೋತು ವನಾಂತರಕ್ಕೆ ಹೋದ ನಳ, ಮತ್ತೆ ಗೆಲ್ಲುವುದರಲ್ಲಿ ಆತನಿಗೆ ನಂಬುಗೆಯೇ ಇರಲಿಲ್ಲ.

ಆಟದ ಮೇಲೆ ಆಟ ನಡೆಯಿತು. ಎಲ್ಲದರಲ್ಲೂ ಪುಷ್ಕರನಿಗೆ ಸೋಲೇ ಕಾದಿದ್ದುದು; ಸಂಪೂರ್ಣವಾಗಿ ಪುಷ್ಕರನನ್ನು ಸೋಲಿಸಿದ ನಳರಾಯ. ಸೋತು ತಲೆತಗ್ಗಿಸಿದನಾತ. ಸ್ವಲ್ಪ ಹೊತ್ತಿನ ಹಿಂದೆ ಅಹಂಭಾವದ ಕೆದೆಯುತ್ತಿದ್ದ ಪುಷ್ಕರ ಈಗ ತಲೆಯೆತ್ತಲಾರದೆ ಭೂಮಿಯನ್ನೇ ಈಕ್ಷಿಸುತ್ತ ನಿಂತ; ನಳನಿಗಾದರೊ ಆತನ ಮೇಲೆ ಕರುಣೆ ತಲೆದೋರದಿರಲಿಲ್ಲ.

"ಈಗೇನು ಮಾಡಬೇಕೆಂದಿರುವೆ...."—ನಳ ಪ್ರಶ್ನಿಸಿದ

"........"—ನಿರುತ್ತರ

"ನಿನ್ನ ಅಭೀಷ್ಟದಂತೆ ನಡೆಯುವೆ ..."—ನಳನೆಂದ....

"ಅರಣ್ಯಕ್ಕೆ ಹೋಗುವುದೇ ನನಗುಳಿದಿರುವುದು...."—ಈಯೊಂದು ಉತ್ತರವನ್ನಲ್ಲದೆ, ಬೇರೆ ಹೇಳುವ ಸ್ಥಿತಿಯಲ್ಲಿ ಪುಷ್ಕರನಿರಲಿಲ್ಲ.

"ಬೇಡ....ನೀನು ಅರಣ್ಯಕ್ಕೆ ಹೋಗಬಾರದು, ನನ್ನ ರಾಜ್ಯದಲ್ಲಿ ಎರಡು ಊರುಗಳನ್ನು ಆಳುತ್ತ ಸುಖವಾಗಿರು...."—ನಳ ಹೇಳಿದ.

"ನೀನೆಷ್ಟು ಕರುಣಾಮಯಿ, ನಳರಾಯ... ನಾನು ಎಸಗಿದ ಯಾವ ದುಷ್ಕೃತ್ಯಗಳನ್ನೂ ಮನಸ್ಸಿಗೆ ಹಚ್ಚಿಕೊಳ್ಳದೆ ಜ್ಞಾನದ ಬೆಳಕಿನಲ್ಲಿ ನನ್ನನ್ನು ಪವಿತ್ರನನ್ನಾಗಿ ಮಾಡಿದೆಯಲ್ಲ....ನನ್ನನ್ನು ಕ್ಷಮಿಸು ಮಹಾರಾಜ...."

"ಅದು ನಿನ್ನ ತಪ್ಪಲ್ಲ ಪುಷ್ಕರ, ನನ್ನ ದುರದೃಷ್ಟ....ನಾನು ದ್ಯೂತದಲ್ಲಿ ಸೋಲನ್ನಪ್ಪುವುದೆಂದರೇನು....!? ಅಂದು ನನಗೆ ಶನಿರಾಯ ಪ್ರತಿಕೂಲನಾಗಿದ್ದ. ನನ್ನನ್ನು ಸೋಲಿಸಲು ಆತ ನಿನ್ನ ಸಹಾಯವನ್ನು ಅಪೇಕ್ಷಿಸಿದ್ದ ಅಷ್ಟೇ....ನೀನು ಈ ಅಪರಾಧದಲ್ಲಿ ನಿಮಿತ್ತ ಮಾತ್ರ...."

ನನ್ನ ಮನಸ್ಸು ದೋಚಿದ್ದು..."—ಪುಷ್ಕರ ಸಂಪೂರ್ಣ ಬದಲಾಗಿದ್ದ. ನಳ ಅವನನ್ನು ಆನಂದದಿಂದ ಬೀಳ್ಕೊಂಡಿದ್ದ.

ನಿಷಧ ದೇಶದ ಪ್ರಜೆಗಳೆಲ್ಲರ ಸಂಭ್ರಮವೋ ಸಂಭ್ರಮ! ಪಶ್ಚಿಮ ಮಹಾಂಬುಧಿಯಲ್ಲಿ ಮುಳುಗಿ ಮರೆಯಾಗಿದ್ದ ರವಿ, ಮತ್ತೆ ಮೂಡಣದಲ್ಲಿ ಉದಯಿಸಿದಂತೆ ಕಂಗೊಳಿಸಿದ ನಳಮಹಾರಾಜ... ಊರಿನ ಜನರೆಲ್ಲ ತಮ್ಮ ಗೌರವವನ್ನು ರಾಜನಿಗೆ ಸೂಚಿಸಲೆಂದು ಅರಮನೆಯ ಮುಂದೆ ಸಾಲು ಸಾಲಾಗಿ ತುಂಬಿದರು. ಒಬ್ಬೊಬ್ಬರೇ ಬಂದು ನೃಪತಿಯ ಪಾದಗಳನ್ನು ಕಣ್ಣೀರಿನಿಂದ ತೋಯಿಸಿ ತಮ್ಮ ಉತ್ಕಟ ಪ್ರೀತಿ ವಾತ್ಸಲ್ಯಗಳನ್ನು ಪ್ರಕಟಿಸಿದರು. ವಿಪುಳ ಪಟ್ಟಣದ ಬೀದಿಗಳೆಲ್ಲ ತಳಿರುತೋರಣಗಳಿಂದ ಆಗಲೇ ಅಲಂಕೃತವಾಗಿದ್ದವು. ಕಳೆದು ಹೋಗಿದ್ದ ಕಾಂತಿ ನಗರದಲ್ಲಿ ಮತ್ತೆ ಮಿನುಗಿತು. ನಳರಾಯ ತನ್ನ ಸತಿಸುತರನ್ನು ಸಂಭ್ರಮದಿಂದ ಕರೆತರಲು ಕುಂಡಿನಪುರಕ್ಕೆ ವೈಭವದಿಂದ ತನ್ನ ಪರಿವಾರವನ್ನಟ್ಟಿದ.

ಭೀಮನಂದನೆಗೆ ಆದ ಆನಂದ ಅಷ್ಟಿಷ್ಟಲ್ಲ. ನಿಷಧದೇಶಕ್ಕೆ ಹೊರಡುವ ಸಂಭ್ರಮದಲ್ಲಿ ಮೈಮರೆತಿದ್ದಳು ದಮಯಂತಿ. ಸುತೆಯ ಈ ಸಂಭ್ರಮವನ್ನು ಕಂಡಾಗ ಭೀಮನೃಪಾಲನೂ ಆನಂದಪುಳಕಿತನಾಗಿದ್ದ. ಅರಮನೆಯ ಪರಿಚಾರಿಕೆಯರಿಗೆಲ್ಲ ಕರ್ತವ್ಯದ ಹೊರೆ ಕಾದಿತ್ತು. ಎಲ್ಲರೂ ಒಂದಲ್ಲ ಒಂದು ಕಾರ್ಯದಲ್ಲಿ ತೊಡಗಿದ್ದರು.

ನಿಲುಗನ್ನಡಿಯ ಮುಂದೆ ನಿಂತು ತನ್ನನ್ನು ಅಲಂಕರಿಸಿಕೊಳ್ಳುತ್ತಿದ್ದಳು ದಮಯಂತಿ; ಸಖಿಯರೆಲ್ಲ ಸಹಕರಿಸುತ್ತಿದ್ದರೂ ದಮಯಂತಿ ಅದರಲ್ಲಿ ತೃಪ್ತಿಯಿಲ್ಲ; ವಿವಿಧ ಭಂಗಿಗಳಲ್ಲಿ, ಕನ್ನಡಿಯಲ್ಲಿ ತನ್ನ ರೂಪ ಸೌಂದರ್ಯಗಳನ್ನು ನೋಡಿಕೊಂಡಳಾಕೆ. ನಳರಾಯನು ತನ್ನ ನ ಒಲುಮೆಯಿಂದ ಆಲಿಂಗಿಸಬಹುದು—ಕನಸಿನಲ್ಲಿಯೋ ಆ ಸುಖದ ಸ ಕಂಡಳು ದಮಯಂತಿ. ಕನ್ನಡಿಯಲ್ಲಿ ತನ್ನ ಪ್ರತಿಬಿಂಬವನ್ನು ನೋಡು ಕುಳಿತಿದ್ದ ದಮಯಂತಿಗೆ ಒಮ್ಮೆಲೇ ಮೈನವಿರೆದ್ದಂತಾಯಿತು; ದೂರದ ತನ್ನವರನ್ನು ಹೋಲುವ ಎರಡು ಪ್ರತಿಬಿಂಬಗಳನ್ನು ಕನ್ನಡಿಯ ಕಂಡಳು ದಮಯಂತಿ.

"ಕಂದಗಳಿರಾ ನೀವಿಲ್ಲಿಗೆ ಬಂದಿರಾ ..."—ಎಂದು ಓಡೋಡಿ ಹೋಗಿ ತನ್ನ ಕುವರರಿಬ್ಬರನ್ನು ಮುದ್ದಿಸಿದಳು.

ಮಾತೆಯ ಆನಂದದ ನಲಿದಾಟವನ್ನು ಕಂಡು ಆ ಮಕ್ಕಳಿಗೂ ಹರ್ಷ.

"ನಿಮ್ಮ ತಾತನಿಗೆ ಇಂದು ವಿಜಯವಾಯ್ತು...." ಪಡಿನುಡಿದಳು ದಮಯಂತಿ.

"ಹಾಗಾದರೆ, ನಾವೀಗ ನಿಷಧ ದೇಶಕ್ಕೆ ಹೋಗಬೇಕೆ?" ಆ ಮುಗ್ಧ ಹಸುಳೆಗಳಲ್ಲೊಬ್ಬನ ಪ್ರಶ್ನೆ.

"ಅಹುದು ಕಂದಾ......ಹೊರಡುವ ರಥ ಆಗಲೇ ಸಿದ್ಧವಾಗಿದೆಯಲ್ಲ ..."

"ತಾತನವರು ಜೂಜಾಡಿ ಸೋತಿಲ್ಲವೇ?"

"ಈಗ, ಸೋತು ಕಳೆದುದೆಲ್ಲವನ್ನು ಮತ್ತೆ ಪಡೆದಿದ್ದಾರೆ...."

"ಹೇಗೆ....?"—ಆಶ್ಚರ್ಯದ ಪ್ರಶ್ನೆ.

"ಜೂಜಾಡಿಯೇ ಗೆದ್ದರು."

"ಪುನಃ ಜೂಜಿನಲ್ಲಿ ಸೋತರೆ....?"

"ಯಾಕೆ ಮಗು ಹಾಗೆ ಹೇಳ್ತೀಯಾ....ಇನ್ನೆಂದಿಗೂ ನಿಮ್ಮ ತಾತ ಜೂಜಿನಲ್ಲಿ ಸೋಲುವುದಿಲ್ಲ; ಅವರನ್ನು ಹಿಡಿದ ಶನಿ ಒಮ್ಮೆ ಅವರ ಸೋಲಿಗೆ ಕಾರಣವಾಯಿತು...."

"ಒಂದು ವೇಳೆ ಮತ್ತೆ ಶನಿ ಹಿಡಿದು ಸೋತರೆನ್ನುವ ...ಆಗ!?"

"ನಾವಿಬ್ಬರು ಅರಣ್ಯಕ್ಕೆ ಹೊರಟು ಹೋಗುತ್ತೇವೆ......."—ಹಾಸ್ಯಾಸ್ಪದವಾಗಿಯೇ ಅಂದಳು ದಮಯಂತಿ.

"ಹಾಗಾದರೆ ನಮ್ಮಿಬ್ಬರನ್ನು ಇಲ್ಲಿಯೇ ಬಿಟ್ಟು ಹೋಗುತ್ತೀರಾ....?" ಚಕಿತರಾಗಿಯೇ ಪ್ರಶ್ನಿಸಿದರು ಮಕ್ಕಳು.

"ಅಹುದು ಕಂದಾ... ನೀವಿನ್ನೂ ಎಳೆಯರು....ಕಾಡಿನಲ್ಲಿ ಅಲೆಯುವುದು ನಿಮ್ಮಿಂದ ಸಾಧ್ಯವಾಗದ ವಿಷಯ."

"ಹಾಗಾದರೆ ನಾವೀಗ ನಿಷಧದೇಶಕ್ಕೆ ಬರುವುದೇ ಇಲ್ಲ."—ಇಬ್ಬರೂ ದೃಢನಿರ್ಧಾರವನ್ನು ತಳೆದು ಪಟ್ಟುಹಿಡಿದು ಕುಳಿತರು.

"ಯಾಕೆ ಕಂದಗಳಿರಾ...?"—ಮತ್ತೆ ಪ್ರಶ್ನಿಸಿದಳು ದಮಯಂತಿ.

"ನಮಗೆ ಈ ಅಜ್ಜ ಅಜ್ಜಿ ತುಂಬಾ ಹಿಡಿಸಿ ಬಿಟ್ಟಿದ್ದಾರೆ. ಸದಾ ನಮ್ಮ ಜೊತೆ ಮಾತಾಡುತ್ತಿರುತ್ತಾರೆ; ಆಟವಾಡುತ್ತಿರುತ್ತಾರೆ—"

"ನಾನೂ ನಿಮ್ಮ ಜೊತೆ ಆಟಕ್ಕೆ ಬರುತ್ತೇನೆ. ಆಗದೆ..?"

"ನೀನು ಸುಳ್ಳು ಹೇಳ್ತಿಯ... ನೀನೂ ಬರೋಲ್ಲ. ತಾತನೂ ಬರೋಲ್ಲ. ಇಬ್ಬರು ಜೊತೆಯಾಗಿ ಕಾಡಿಗೆ ಹೊರಟು ಹೋಗ್ತೀರಾ.... ನಮ್ಮ ಅಜ್ಜ ಮತ್ತು ಅಜ್ಜಿ ಎಲ್ಲಿಗೂ ಹೋಗೋಲ್ಲ ಅಂತ ನಮಗೆ ಮಾತುಕೊಟ್ಟಿದ್ದಾರೆ."

"ಹಾಗೇನೂ...."—ಚಕಿತಳಾಗಿ ಕೇಳಿದಳು ದಮಯಂತಿ. ಹೊ ಯಲ್ಲಿ ಮರುಕವೂ ಇತ್ತು. ಈ ಎಳೆಯ ಮಕ್ಕಳ ಮನಸ್ಸು ಕೂಡ ಇಷ್ಟೊಂದು ನೊಂದುಕೊಂಡಿದೆಯಲ್ಲ .. ಎಂದು.

ಆ ಕಂದಗಳಿಗೆ ಉತ್ತರ ನೀಡುವುದೇ ದಮಯಂತಿಗೆ ಒಂದು ಸಮಸ್ಯೆಯಾಗಿಹೋಯಿತು. ಕೊನೆಗೂ ಭೀಮನೃಪಾಲನೇ ಬರಬೇ ಯಿತು. ಮಕ್ಕಳನ್ನು ಒತ್ತಟ್ಟಿಗೆ ಕರೆದು ಹೇಳಿದ ಆ ವೃದ್ಧ—

"ನಿಮ್ಮ ತಾಯಿ ತಂದೆಯರು ಇನ್ನೆಂದಿಗೂ ನಿಮ್ಮನ್ನು ಬಿಟ್ ಹೋಗುವುದಿಲ್ಲ ಮಕ್ಕಳಿರಾ......."—ಅಜ್ಜ ನಾಡಿದ ಮಾತುಗಳಲ್ಲಿ ಮಕ್ಕಳಿಗೆ ತುಸು ನಂಬಿಕೆ! ಕೊನೆಗೂ ತಾಯಿಯೊಂದಿಗೆ ರಾಜವೈಭವದಿಂ ಹೊರಟುನಿಂತರು ಆ ಮಕ್ಕಳು.

ದಮಯಂತಿಯ ಸುಖಪ್ರಯಾಣಕ್ಕೆ ಆಗಲೇ ರಥ ಸಿದ್ಧವಾ ನಿಂತಿತ್ತು. ರಥದ ಅಲಂಕಾರ ಸುರಮ್ಯವಾಗಿತ್ತು.

ಸಖಿಯರಿಂದೊಡಗೂಡಿ ಅರಮನೆಯಿಂದ ಹೊರಬಂದಳು ದ ಯಂತಿ. ರಥವನ್ನೇರುವ ಮೊದಲು ತನ್ನ ಮಾತೆಯ ಪಾದಪದ್ಮ ಗೆರಗಿದಳು. "ಅಮ್ಮ ಹೋಗಿ ಬರುತ್ತೇನೆ"—ಎಂದಳು. ಆ ಎಳೆ

ಮಕ್ಕಳೂ ತಾಯಿಯಂತೆಯೇ ನಡಕೊಂಡವು. ದಮಯಂತಿಗಾದರೋ ಕಣ್ಣಾಲಿಗಳು ತುಂಬಿ ಬಂದಿದ್ದವು. ರಥ ಏರುವ ಮೊದಲು "ಅಮ್ಮಾ" ಅಂದಳು.

"ನಿನ್ನ ಪಯಣ ಸುಗಮವಾಗಲಿ ದಮಯಂತಿ...."—ಅಂದಳು ಆ ರಾಜಮಾತೆ. ಆಕೆಗೂ ಕರುಳಿನ ಕೊರೆತ; ಇಷ್ಟು ದಿನ ಜೊತೆಯಾಗಿ ಇದ್ದ ಮಗಳ ದುಃಸ್ಥಿತಿಯನ್ನು ನೆನೆದು, ನೆನೆದು ಬಡವಾದ ಆ ರಾಜಮಾತೆಗೆ ಮತ್ತೆ ಮಾತೇ ಬಾರದು. ಹೆತ್ತ ಕರುಳಿನ ಉರಿಯನ್ನು ಅರ್ಥಮಾಡಿ ಕೊಂಡಳು ದಮಯಂತಿ.

"ಯಾಕಮ್ಮ...!? ನಾನಿನ್ನು ಸುಖವಾಗಿ ಪತಿಯ ಮನೆಯಲ್ಲಿರು ತ್ತೇನೆ... ನಿನಗಿನ್ನು ಅದರಲ್ಲಿ ಯಾವ ಸಂದೇಹವೂ ಬೇಡಮ್ಮ."

"ಸಂದೇಹವಿಲ್ಲ ದಮಯಂತಿ....ನಿನ್ನ ಸಾಧನ ಚಾರಿತ್ರ್ಯದ ಬಗೆಗೆ ನನಗೆ ಎಳ್ಳಷ್ಟು ಅಪನಂಬಿಕೆಯಿಲ್ಲ; ವಿಧಿಯ ಅಪಹಾಸ್ಯಕ್ಕೆ ಆತ ಗುರಿ ಯಾದ ಅಷ್ಟೆ! ನನ್ನನ್ನು ಈಗ ಕಾಡುತ್ತಿರುವ ಬೇಸರ ಬೇರೆ ರೀತಿಯದು ದಮಯಂತಿ...."

"ಅದೇನು ಹೇಳಬಾರದೆ....?" ಪ್ರಶ್ನಿಸಿದಳು ದಮಯಂತಿ.

"ಅಂದೆ ನಿನ್ನ ಸ್ವಯಂವರದ ದಿನ, ಪತಿಯೊಂದಿಗೆ ನೀನು ಹೊರಟು ಂತಾಗಲೂ ನನಗೆ ಇಷ್ಟೊಂದು ದುಃಖವಾಗಿರಲಿಲ್ಲ.... ಆದರೆ ಈಗ ಗುತ್ತಿದೆ...."

"ಯಾಕೆ!?"

"ಅಂದಿನ ಸ್ಥಿತಿಗೂ ಇಂದಿನ ಸ್ಥಿತಿಗೂ ಎಷ್ಟೊಂದು ಅಂತರ....! ಂದು ನಿನ್ನನ್ನು ಲೋಕನಿಯಮದಂತೆ ಗಂಡನ ಮನೆಗೆ ಕಳುಹಿಸಿ ಟ್ಟಿದ್ದೆ....ಆದರೆ ಇಂದು....! ನಿನ್ನ ಇತ್ತೀಚಿಗಿನ ಕಷ್ಟದ ದಿನಗಳನ್ನು ರಿಸಿಕೊ ದಮಯಂತಿ....ಪತಿಯ ವಿಯೋಗದಿಂದ ನೀನು ಎಷ್ಟೊಂದು ಂದುಕೊಂಡಿಲ್ಲ....! ನೀನು ಅನುಭವಿಸಿದ ಆ ಹೃದಯದ ನೋವು, ಗೆ ಮಾತ್ರ ಸೇರಿದ್ದು ಎಂದು ತಿಳಿದೆಯಾ....? ನನ್ನನ್ನು ಹೆತ್ತ ಳಿಗೂ ಅದರ ಶಾಖ ನೂರ್ಮಡಿಯಾಗಿ ತಟ್ಟಿದೆ ದಮಯಂತಿ...."

"ಅಮ್ಮ... ಕೇಳಿದುದೆಲ್ಲವನ್ನು ಮರೆತು ಬಿಡಮ್ಮ. ನನ್ನ ದುರದೃಷ್ಟದಿಂದ ನೀವೆಲ್ಲರೂ ನೊಂದು ಕೊಳ್ಳುವಂತೆ ಮಾಡಿದೆ. ಈ ನಿರ್ಭಾಗ್ಯಳನ್ನು ಸುಖದ ಹಾದಿಯಲ್ಲಿ ಮುಂದುವರೆಯಲೆಂದು ಹರಸಿ ಕೊಳ್ಳಮ್ಮ...."

"ಈಗ ಆದೊಂದೇ ಸಮಾಧಾನ ದಮಯಂತಿ...! ನಿನ್ನ ಪತಿ ಮತ್ತೆ ಹಿಂತಿರುಗಿ ಬಂದಾಗ ಹೃದಯದ ಭಾರ ಇಳಿದಿತ್ತು: ದ್ಯೂತದಲ್ಲಿ ಆತ ಗೆದ್ದಾಗ ನಿನ್ನ ಮುಂಗುಳ್ನಗುವ ದುಃಖ ಮರೆಸಿ, ಕಣ್ಣೀರೊಬ್ಬ ಶಾಂತಿಕೊಂಡಿತು... ಈಗ ನೀನು ಹೋಗುವಾಗ ಅದೆಲ್ಲ ಹಿಂದಿನ ಸುಖದಲ್ಲಿ ಮರೆಯಾಗುತ್ತವೆ ದಮಯಂತಿ... ಇಂತಹ ಅನುಭವ ನಿನ್ನಗಾಗಬಾರದಿತ್ತು... ಆದರೆ, ದೈವ ಕರುಣೆ ಸ್ವಾರ್ಥ ಇದು" — ರಾಜಮಾತೆ ಮನದ ದುಃಖವನ್ನೆಲ್ಲ ತೋಡಿಕೊಂಡಿದ್ದಳು.

"ಅಮ್ಮ...ವೃದ್ಧರಾದ ನೀವು ನನಗಾಗಿ ಇಷ್ಟೊಂದು ನೊಂದು ಕೊಳ್ಳುವಂತಾಯ್ತು...."

"ಇಲ್ಲ ದಮಯಂತಿ... ನಿನ್ನ ಸುಖದ ವಾರ್ತೆ. ನಮ್ಮ ಕರ್ಣದ್ವಯಗಳಿಗೆ ರಸದೌತಣವೀಯುತ್ತದೆ... ನಮ್ಮ ಮನೆಯ ಭಾಗ್ಯಲಕ್ಷ್ಮಿ ನೀನು... ಪತಿಯ ಮನೆ ಮಾನವನ್ನು ಬೆಳಗುವ ದೀಪಿಕೆ ನೀನು... ಪತಿಯನ್ನು ಮರಳಿ ಪಡೆಯಲು ನೀನು ಮಾಡಿದ ತ್ಯಾಗ ಜಗತ್ತಿಗೇ ಮಾರ್ಗದರ್ಶಕ. ನೀವಿಬ್ಬರೂ ನೂರ್ಕಾಲ ಬಾಳಿ ಅಜರಾಮರ ಕೀರ್ತಿಯನ್ನು ಗಳಿಸುವಂತಾಗಲಿ ದಮಯಂತಿ...."

"ಅನುಗ್ರಹೀತಳಾದೆ ಅಮ್ಮ...."—ಮತ್ತೆ ಬಾಗಿ ನಮಿಸಿದಳು ದಮಯಂತಿ. ಏನೂ ಅರಿಯದೆ ಇವೆಲ್ಲವನ್ನು ನೋಡುತ್ತಿದ್ದ ಕಂದಗಳು ತಾಯಿಯನ್ನೇ ಅನುಕರಿಸುತ್ತಿದ್ದವು. ಅವರನ್ನೂ ಆಶೀರ್ವದಿಸಿದಳು ರಾಜಮಾತೆ.

"ಹೋಗಿ ಬರುತ್ತೇನೆ ತಾತಾ...."

"ದೀರ್ಘ ಸುಮಂಗಲೀಭವ...."—ಹರಸಿದ ವೃದ್ಧ ತಂದೆ.

ಸುತರಿಂದೊಡಗೂಡಿ ರಥವನ್ನೇರಿ ಕುಳಿತಳು ದಮಯಂತಿ. ಮಾತೆಯ ಅಕ್ಕಪಕ್ಕದಲ್ಲಿ ಕುಳಿತ ಆ ಬಾಲಕರಿಗೆ ಕಿಕ್ಕಿರಿದು ಸೇರಿದ ಪ್ರಜಾಸ್ತೋಮವನ್ನು ನೋಡುವ ಕುತೂಹಲ.

ಪುರಜನರು ಸಾಗರೋಪಾದಿಯಲ್ಲಿ ನೆರೆದಿದ್ದರು. ಕೆಲವರು ಆನಂದ ಬಾಷ್ಪಗಳನ್ನು ಸುರಿಸುತ್ತಿದ್ದರೆ, ಮತ್ತೆ ಕೆಲವರು ನಗು ಮುಖದಿಂದ ಹರಸಿದರು... ಕೆಲವರು ಪುಷ್ಪಗುಚ್ಛಗಳನಿತ್ತು ಗೌರವಿಸಿದರೆ, ಇನ್ನು ಕೆಲವರು ಪುಷ್ಪವೃಷ್ಟಿಯನ್ನೆರೆದು ತಮ್ಮ ಗೌರವ ವ್ಯಕ್ತಪಡಿಸಿದರು.

"ಅಮ್ಮಗಳಿರಾ....ಅಕ್ಕಗಳಿರಾ.....ಜೊತೆಗೂಡಿ ಬಾಳಿದ ಸಖಿಯರಿರಾ....ಬರುತ್ತೇನೆ....ಹೋಗಿ ಬರುತ್ತೇನೆ...."—ದಮಯಂತಿ ಆನಂದಾತಿರೇಕದಲ್ಲಿ ಹೇಳುತ್ತಿದ್ದಳು; ರಥದ ಗಾಲಿಗಳು ಮೆಲ್ಲಮೆಲ್ಲನೆ ಮುಂದಕ್ಕೆ ಉರುಳುತ್ತಿದ್ದವು.

ಅಂದು, ಸ್ವಯಂವರದಲ್ಲಿ ನಳರಾಯನನ್ನು ಪತಿಯನ್ನಾಗಿ ಪಡೆದು, ಆತನ ಜೊತೆಗೆ ಹೊರಟಾಗ ಇಷ್ಟೊಂದು ದುಃಖವಾಗಿರಲಿಲ್ಲ ದಮಯಂತಿಗೆ; ಆಗ ಚಿಂತನೆಗೆ ಆಸ್ಪದವಿರಲಿಲ್ಲ—ಸಂತಸದ ಸಂಭ್ರಮವೇ ಎಲ್ಲವನ್ನು ಮರೆಮಾಡಿತ್ತು! ಇಂದು ಪರಿಸ್ಥಿತಿ ಬದಲಾಗಿದೆ; ಹೆತ್ತ ಕರುಳು, ಹುಟ್ಟಿದ ಊರು ಎಲ್ಲ ಅದೇ ಆಗಿದ್ದರೂ ಆ ಕರುಳಿನ ವಾತ್ಸಲ್ಯ, ಊರಿನ ಬಾಂಧವ್ಯ, ಎಲ್ಲ ಹೊಸ ರೂಪವನ್ನು ತಳೆದು ಆಕೆಯನ್ನು ನೆಟ್ಟ ನೋಟದಿಂದ ನೋಡುತ್ತಿದ್ದವು. ಆನಂದ ಬಾಷ್ಪಗಳ ಕೋಡಿ ಕಣ್ಣಂಚಿನಲ್ಲಿ ಹರಿದಾಗ, ಗಂಟಲು ಕಟ್ಟಿ ಬಂದಿತಾಕೆಗೆ.

ಊರು ಕೇರಿ ಎಲ್ಲಾ ದಾಟಿ ಅರಣ್ಯಮಾರ್ಗವಾಗಿ ಓಡುತ್ತಿತ್ತು ರಥ. ಚಿಕ್ಕಮಕ್ಕಳ ಮನಸ್ಸು ಹಕ್ಕಿಯಂತೆ ಹಾರಹತ್ತಿತ್ತು. ತನ್ನ ಹೆತ್ತಮ್ಮನ ಜೊತೆಯಾಗಿ ಆ ಮಕ್ಕಳು ಹಿಂದೆಂದೂ ಪ್ರಯಾಣ ಬೆಳೆಸಿರಲಿಲ್ಲ. ತಮ್ಮ ಉತ್ಸುಕತೆ ಕೆರಳಿದಾಗ ಆ ಮಕ್ಕಳು ದಮಯಂತಿಯಲ್ಲಿ ಪ್ರಶ್ನೆಗಳ ಸುರಿಮಳೆಯನ್ನೇ ಎರೆದರು.

"ಅಮ್ಮ ಅದು ಏನು?"; "ಅಮ್ಮ ಇದು ಏನು?"–ಎಂಬ ಮಕ್ಕಳ ಪ್ರಶ್ನೆಗಳಿಗೆ ಉತ್ತರ ನೀಡುವುದೇ ದಮಯಂತಿಗೆ ಅವರ್ಣನೀಯ ಆನಂದ

ಬಹು ಆನಂದವಾಗುತ್ತಿತ್ತು. ನಕ್ಕುನಗಿಸುವ ಮಕ್ಕಳ ವಿನೋದದಲ್ಲಿ ತಾನೂ ಕಲೆತು ಮಗುವಿನಂತೆ ನಕ್ಕಳು ದಮಯಂತಿ. ರಥ ನಿಷಧದೇಶ ದಲ್ಲಿ ಸಾಗಿ ರಾಜಧಾನಿಯನ್ನು ಸೇರಿದುದೂ ಆಕೆಗೆ ತಿಳಿಯಲಿಲ್ಲ.

ಒಮ್ಮೆಯೇ ಚೇತರಿಸಿಕೊಂಡವಳಂತೆ ದಮಯಂತಿ ಸುತ್ತ ಮುತ್ತ ಲಿನ ಗಗನಚುಂಬಿ ಕಟ್ಟಡಗಳನ್ನು ಕಂಡಳು: ಕಂಡು ಪರ್ವತಗಳವು. ಅದೇ ಸಂತಸದ ಭರದಲ್ಲಿ ತನ್ನ ಕುವರರಿಗೆ ಅಂದಳು:

“ಮಕ್ಕಳಾ ನೋಡಿ....ನಿಮ್ಮೂರು ಬಂತು....”—ಎಂದು.

“ಇದೇನಾ ನಮ್ಮೂರು...! ಎಷ್ಟು ಚೆನ್ನಾಗಿದೆ ಅಲ್ಲ. ನಮ್ಮ ಊರು....”—ಮತ್ತೆ ಮಾತೆಯನ್ನು ಉತ್ತರಿಸುವಂತೆ ಕರೆಯುವುದು ಅ ಎಳೆಯರು.

“ಹೌದು ಮಗು...... ಅವರವರ ಊರು, ಅವರವರಿಗೆ ಚೆ ವಾಗಿಯೇ ಕಾಣಿಸುತ್ತದೆ.”—ದಮಯಂತಿ ಸಮಾಧಾನ ಹೇಳಿದಳು.

“ಅಲ್ಲ, ನೀನು ಸುಳ್ಳು ಹೇಳುತ್ತಿ....ನೋಡಲ್ಲಿ ಆ ಬೀದಿಗಳ ಹೂವಿನ ಹಾರಗಳಿಂದ ಎಷ್ಟೊಂದು ಸುಂದರವಾಗಿ ಕಾಣಿಸುತ್ತಿದೆ.”

“ನಾವು ಬರುವಾಗ ತಮ್ಮ ಸಂತಸ ವ್ಯಕ್ತಪಡಿಸಲು ನಮ್ಮ ಪ್ರಜೆಗ ಬೀದಿಗಳನ್ನು ಪುಷ್ಪಮಾಲೆಗಳಿಂದ ಅಲಂಕರಿಸಿದ್ದಾರೆ ಮಕ್ಕಳಾ....”

“ಅಲ್ಲ....ಅವುಗಳೆಲ್ಲ ದಿನಾ ಹಾಗೆ ಇರುತ್ತವೆ....ನಾವೆಂದು ನ ಅಜ್ಜನ ಮನೆಗೆ ಹೊರಟಾಗಲೂ ಇದೇ ರೀತಿ ಇತ್ತು.... ...ಅಲ್ಲ ಅಣ್ಣಾ........?”—ಕಿರಿಯಾತ ಹಿರಿಯವನಲ್ಲಿ ಪ್ರಶ್ನಿಸಿ ತನ್ನ ಸಂಶಯವ ಪರಿಹರಿಸಿಕೊಂಡ.

“ಹೌದು ಮಕ್ಕಳೇ ನೀವು ಹೇಳಿದ್ದೇ ನಿಜ....” ಮಕ್ಕಳ ಪ ಲಹರಿಗೆ ನೀರೆರೆದಳು ದಮಯಂತಿ.

ರಥ ಅರಮನೆಯ ಮುಂದೆ ಬಂದು ನಿಂತಿತು. ದೇವಕನ್ನಿಕೆ ರಥದಿಂದ ಇಳಿದಳು ದಮಯಂತಿ. ಪುರಜನರೆಲ್ಲ ಆಗಲೇ ಅಲ್ಲಿ ಸೇರಿದ್ದರು. ಮಂಗಳಾಂಗಿಯರು ದಮಯಂತಿಗೆ ಆರತಿಯೆತ್ತಿ ದಿಂದ ಅಂತಃಪುರಕ್ಕೆ ಆಕೆಯನ್ನು ಬಿಜಯಂಗೈಸಿದರು.

ನಿಷಧದೇಶ ಅಂದು ಸಂಭ್ರಮದ ಸಾಗರದಲ್ಲಿ ಓಲಾಡುತ್ತಿದ್ದಿತು. ನಳರಾಯ ಆಗಲೇ ಸಿಂಹಾಸನವನ್ನು ಏರಿ ಕುಳಿತಿದ್ದ. ದಮಯಂತಿಯ ಬರವನ್ನು ರಾಜಸಭೆ ಹಾರೈಸಿ ಕುಳಿತಿತ್ತು. ಪ್ರಯಾಣದ ಆಯಾಸ ತುಸು ನೀಗಿದ ಕೂಡಲೇ ದಮಯಂತಿ ಅಲಂಕೃತಳಾಗಿ ರಾಜಸಭೆಗೆ ಬಂದಳು. ತನ್ನ ಪತಿಯ ಪಕ್ಕದಲ್ಲಿ ಸಿಂಹಾಸನವನ್ನು ಏರಿ ಕುಳಿತಳು. ಎಲ್ಲೆಲ್ಲೂ ಜಯಜಯ ಘೋಷಣೆ. ಅಕ್ಕಪಕ್ಕದ ಆಸನಗಳಲ್ಲಿ ಕುವರ ರಿಬ್ಬರೂ ಕಂಗೊಳಿಸಿದಾಗ ನಳರಾಯನ ಘನತೆ ಇಂದ್ರನನ್ನು ಮಿಗಿ ಲೇರಿಸುವಂತಹದ್ದು!

ಪುಷ್ಕರನ ಆಳ್ವಿಕೆಯಲ್ಲಿ ಕಷ್ಟ ಪರಂಪರೆಗಳನ್ನೆ ಎದುರಿಸಿದ ಪುರ ಜನರು ಇಂದು ತಮ್ಮ ಮನದೊಡೆಯನನ್ನು, ಸೌಭಾಗ್ಯವತಿಯಾದ ದಮಯಂತಿಯೊಂದಿಗೆ ಕಂಡು ಬದುಕನ್ನು ಪಾವನಮಾಡಿಕೊಂಡರು. ನಮ್ಮನ್ನು ಈ ವರೆಗೆ ಅಂಟಿದ್ದ ಪೀಡೆ ತೊಲಗಿತೋ ಎಂಬಷ್ಟು ಸಂಭ್ರಮ ಅವರಿಗೆ!

ಪುರಜನರೆಲ್ಲರನ್ನು ಹರಸಿದ ಬಳಿಕ ನಳರಾಜ ಅಂತಃಪುರಕ್ಕೆ ನಡೆದ. ಅತ್ತ ಪ್ರಜೆಗಳೆಲ್ಲರೂ ಸುಖ–ಸಂತೋಷದಿಂದ ತಮ್ಮ ತಮ್ಮ ಬೀಡು ಗಳನ್ನು ಸೇರುತ್ತಿರಲು, ಇತ್ತ ನಳರಾಯ ಅಂತಃಪುರದಲ್ಲಿ ದಮಯಂತಿ ಯೊಂದಿಗೆ ಸರಸಸಲ್ಲಾಪಗಳಲ್ಲಿ ತೊಡಗಿದ್ದ—ಕಾಡು ಸೇರಿದ್ದು, ಅಲ್ಲಿ ದಮಯಂತಿಯನ್ನು ಏಕಾಂಗಿಯಾಗಿ ತೊರೆದು ಹೋದದ್ದು; ಎಲ್ಲವನ್ನು ಆಕೆಯಲ್ಲಿ ಹೇಳಿ ತನ್ನ ಮನದ ಭಾರವನ್ನು ಕಡಿಮೆಮಾಡಿಕೊಂಡ. ದಮಯಂತಿ ಆತನನ್ನು ಪಡೆಯಲು ಪಟ್ಟ ಪಾಡು ಎಲ್ಲವನ್ನು ಆಕೆ ಯಿಂದಲೂ ಹೇಳಿಸಿ ಕೇಳಿದ ನಳರಾಯ. "ನಿನ್ನ ತ್ಯಾಗ, ಪತಿಭಕ್ತಿ ಗಳಿಂದಾಗಿಯೇ ನಾನು ಮತ್ತೆ ನಿಷಧದೇಶದ ಚಕ್ರವರ್ತಿಯಾಗುವಂತಾಯ್ತು ದಮಯಂತಿ"—ತುಂಬು ಮನಸಿನಿಂದ ಸತಿಯನ್ನು ಅಭಿನಂದಿಸಿದ.

"ನೀವು ಹಾಸ್ಯ ಮಾಡುತ್ತೀರಿ ನನ್ನ...."—ಹುಸಿಮುನಿಸು ತೋರಿ ದಳು ದಮಯಂತಿ.

"ನೀನು ನನ್ನ ಆರಾಧ್ಯದೇವತೆ ದಮಯಂತಿ"—ಎಂದು ನಳರಾಯ.

ಅಂತರಂಗ ಬಹಿರಂಗಗಳಲ್ಲಿ ಅವರಿಬ್ಬರೂ ಒಂದಾಗಿದ್ದರು. ನಭೋ ಮಂಡಲದಲ್ಲಿ ನಿಂತು ಈ ಲೀಲಾನಾಟಕವನ್ನು ನೋಡುತ್ತಿದ್ದ ದೇವತೆಗಳು ಪುಷ್ಪವೃಷ್ಟಿಗರೆದರು. ತನ್ನಲ್ಲೆ ನಸುನಕ್ಕ ನಾರದ — ಮನಸ್ಸು ಈ ವರೆಗಿನ ಕಥೆಯನ್ನೆಲ್ಲ ನೆನೆದು ಒಳಗೊಳಗೇ ನಕ್ಕಿತ್ತು : ನಾರದನ ತುಟಿಗಳು ಅದನ್ನು ಸ್ವಲ್ಪವೇ ಹೊರಗೆ ಚೆಲ್ಲಿದ್ದು!

ತಾನು ಹೆಣ್ಣಾದರೂ ತನ್ನ ವರ್ಚಸ್ಸನ್ನು ಮುಂದಿನ ಪೀಳಿಗೆಗೆ ಬೀರಿ ಹೋದಳು ದಮಯಂತಿ. ನಮ್ಮ ಪುರಾಣಗಳಲ್ಲಿ ದಮಯಂತಿ ಒಂದು ಅನರ್ಘ ರತ್ನ!

ಇಂತಹ ರತ್ನವನ್ನು ತನ್ನ ಹೃದಯಸಿಂಹಾಸನದಲ್ಲಿ ಪ್ರತಿಷ್ಠೀಕರಿ ಕೊಂಡ ಆ ನೈಷಧಚಕ್ರವರ್ತಿಯ ಘನತೆಯನ್ನೂ ರಾಜ್ಯಭಾರಕ್ರಮವನ್ನೂ ಏನೆಂದು ಬಣ್ಣಿಸಬೇಕು....ಚಾಂಡರಸನೇ ಅಂದಂತೆ—

ನಿರುಪಮ ಸಂಪದಂ ಸಕಳರಾಜ್ಯ ಸಮೃದ್ಧ ಸುಖಪ್ರವರ್ಧನಂ
ಪರಮ ಮಹೋತ್ಸವಂ ನಿಜಕಳತ್ರತನೂಭವ ಬಂಧು ಸಂಗಮಂ
ಸ್ಥಿರತರವಪ್ಪಿನಂ ಕನಗನೇಕಯುಗಂ ವಿಜಯಪ್ರತಾಪದಿಂ
ನಿರವಧಿಕೀರ್ತಿಯಿಂ ತಳೆದು ರಂಜಿಸುತಿರ್ದನುದಾರವಿಕ್ರಮಂ

